ರಾಯಚೂರಿನ ವಸ್ತುಸಂಗ್ರಹಾಲಯ ಹಾಗೂ ಗಬ್ಬೂರಿನ ಶಿಲ್ಪಗಳು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು. ೨೦೧೭-೧೮ ನೇ ಸಾಲಿನ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆ ಅಡಿಯ ಫೆಲೋಶಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ



ಸಂಶೋಧಕರು
ಉಮಾವತಿ

ಮಾರ್ಗದರ್ಶಕರು
ಡಾ. ಆರ್.ಎಚ್. ಕುಲಕರ್ಣಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೦೨

೨೦೧೭-೧೮

ರಾಯಚೂರಿನ

ವಸ್ತುಸಂಗ್ರಹಾಲಯ ಹಾಗೂ ಗಬ್ಬೂರಿನ

ಶಿಲ್ಪಗಳು

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ೨೦೧೭-೧೮ನೇ ಸಾಲಿನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿಯ ಫೆಲೋಷಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು

ಉಮಾವತಿ

ಮಾರ್ಗದರ್ಶಕರು

ಡಾ. ಆರ್. ಎಚ್. ಕುಲಕರ್ಣಿ

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೦೨

೨೦೧೭-೧೮

ಪ್ರಮಾಣ ಪತ್ರ

ಉಮಾವತಿ ಎಂಬ ನಾನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಿಶೇಷ ಘಟಕ ಯೋಜನೆಯ ಫೆಲೋಶಿಪ್ ಅಂಗವಾಗಿ ಸಂಶೋಧನಾ ಪ್ರಬಂಧವನ್ನು ಬೆಂಗಳೂರಿನ **ಡಾ. ಆರ್. ಎಚ್ ಕುಲಕರ್ಣಿ** ಇವರ ಮಾರ್ಗದರ್ಶನದಲ್ಲಿ **"ರಾಯಚೂರಿನ ವಸ್ತುಸಂಗ್ರಹಾಲಯ ಹಾಗೂ ಗಬ್ಬೂರಿನ ಶಿಲ್ಪಗಳು"** ಎಂಬ ಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.

ಇದು ನನ್ನ ಮೂಲ ಸಂಶೋಧನಾ ಕೃತಿಯಾಗಿದ್ದು ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಇನ್ನಿತರ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿದ್ಯಾರ್ಥಿನಿ

Umavathi

ದಿನಾಂಕ:

ಸ್ಥಳ:

ಉಮಾವತಿ
ಆರ್. ಟಿ. ಪಿ. ಎಸ್. ಕಾಲೋನಿ
ಟೈಪ್-ಸಿ-ಮನೆ ಸಂ-೨೨೦
ಶಕ್ತಿನಗರ
ಜಿಲ್ಲೆ ರಾಯಚೂರು

ಗೆ,

ರಿಜಿಸ್ಟ್ರಾರ್ ಅವರಿಗೆ,

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಕನ್ನಡ ಭವನ, ಬೆಂಗಳೂರು-೦೨

ಮಾನ್ಯರೇ:-

<u>ದೃಢೀಕರಣ ಪತ್ರ</u>

ನನ್ನ ಮಾರ್ಗದರ್ಶನದಲ್ಲಿ **ಉಮಾವತಿಯವರು ರಾಯಚೂರಿನ ವಸ್ತುಸಂಗ್ರಹಾಲಯ ಹಾಗೂ ಗಬ್ಬೂರಿನ ಶಿಲ್ಪಗಳು** ಎಂಬ ವಿಷಯ ಕುರಿತು ಸಂಶೋಧನಾ ಪ್ರಬಂಧವನ್ನು ಪೂರ್ಣಗೊಳಿಸಿದ್ದು ಅವರು ಹಸ್ತಪ್ರತಿಯನ್ನು ಶಿಲ್ಪಕಲಾ ಅಕಾಡೆಮಿಗೆ ಸಲ್ಲಿಸುತ್ತಿದ್ದಾರೆ. ಇವರಿಗೆ ಫೆಲೋಶಿಪ್ ನಿಯಮಾನುಸಾರ ನೀಡಲು ಈ ಮೂಲಕ ಶಿಫಾರಸ್ಸು ಮಾಡುತ್ತೇನೆ.

ಪ್ರಕಟಣೆಯ ಹಂತದಲ್ಲಿ ಮತ್ತೊಮ್ಮೆ ಪರಿಷ್ಕರಿಸಿ ಪ್ರಸ್ತುತ ಪ್ರಬಂಧವನ್ನು ಮುದ್ರಣ ಮಾಡಬಹುದಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಡಾ. ಆರ್ ಎಚ್ ಕುಲಕರ್ಣಿ

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ–೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಕಲೆಗೆ ಅರ್ಥ ಋಗ್ವೇದದಲ್ಲಿ ಅಂಶ ಎಂಬ ಅರ್ಥ ಛಾಯೆಯಿದೆ. ಕಲೆ ಎಂಬುದು ಆದಿವ್ಯಕ್ತಿಯ ಕಾಂತಿಯ ಒಂದು ಕಿರಣ ಕಲೆ ಎಂಬುದರ ಸಾಮಾನ್ಯ ಅರ್ಥ. ಉಪಾಯ ಅಥವಾ ಕೌಶಲ ಎಂಬುದು ಯಾವ ಉಪಾಯದಿಂದ ಅಥವಾ ಕೌಶಲದಿಂದ ನಮ್ಮ ಭಾವನೆಗಳನ್ನು ಆಲೋಚನೆಗಳನ್ನು ಮನಮುಟ್ಟುವ ರೀತಿಯಲ್ಲಿ ತಿಳಿಸುವುದೋ ಅಂಥ ಈ ವಿಧಾನವೇ ಕಲೆ ಕಲೆಯನ್ನು ಲಲಿತ ಕಲೆಯೆಂದು ಮತ್ತು ಲಲಿತೇತರ ಕಲೆಯೆಂದು ಎರಡು ರೀತಿಯಲ್ಲಿ ಕರೆಯುತ್ತಾರೆ.

ಈ ಹಿನ್ನೆಲೆಯಲ್ಲಿ ಒಂದು ರಾಷ್ಟ್ರ, ದೇಶ, ರಾಜ್ಯದ ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ವೈಜ್ಞಾನಿಕ ಸಾಧನೆಗಳನ್ನು ತೋರಿಸುವ ಅಮೂಲ್ಯ ವಸ್ತುಗಳನ್ನು ನಮ್ಮ ಪೂರ್ವಜರ ಜೀವನ ಸಾಧನೆಯ ಕರುಹುಗಳನ್ನು ಒಂದು ಕಡೆಗೆ ವ್ಯವಸ್ಥಿತವಾಗಿ ಕಾಯ್ದಿಡುವ ಶಾಶ್ವತವಾಗಿ ಪ್ರದರ್ಶಿಸುವ ಹಿನ್ನೆಲೆಯಲ್ಲಿ ರೂಪುಗೊಂಡು ಸ್ಥಳಗಳು "ವಸ್ತುಸಂಗ್ರಹಾಲಯ"ಗಳಾಗಿವೆ. ಈ ವಸ್ತುಸಂಗ್ರಹಾಲಯಗಳ ಮೂಲಕ ಮಾನವ ಕುಲಶಾಸ್ತ್ರ, ಪ್ರಾಕೃತಿಕ ಚರಿತ್ರೆ, ಚಿತ್ರಕಲೆ, ವಾಸ್ತುಶಿಲ್ಪಗಳ ಬಗ್ಗೆ ಅಧ್ಯಯನ ಹಾಗೂ ಸಮಗ್ರ ಮಾಹಿತಿಯನ್ನು ಪಡೆಯಲು ಅನುಕೂಲ ಕಲ್ಪಿಸಲಾಗಿದೆ.

ಒಂದು ಕಾಲದಲ್ಲಿ ವೈಬವದಿಂದ ಆರಾಧಿಸಲ್ಪಟ್ಟ ವಿವಿಧ ಮಾಧ್ಯಮದ ಶಿಲ್ಪಕಲಾಕೃತಿಗಳು ಸೌಂದರ್ಯದ ಕಲಾತ್ಮಕವಾದ ಭಾಗವಾಗಿಯೂ ಜನಮನ್ನಣೆಯನ್ನು ಪಡೆದಿದ್ದವು. ಹಾಗೆಯೇ ಚಿತ್ರಕಲೆಯ ಕೂಡಾ ಮಹತ್ವದ ಸ್ಥಾನವನ್ನು ಪಡೆದುಕೊಂಡು ಈ ಚಿತ್ರ ಮತ್ತು ಶಿಲ್ಪಕಲೆಯಲ್ಲಿ ಪರಂಪರಗತವಾದ ಅನೇಕ ಕಲಾವಿದರ ಹೆಸರುಗಳು, ಶಾಸನ, ಸಾಹಿತ್ಯ ಕೃತಿಗಳಲ್ಲಿ ಈಗಲು ಕಂಡು ಬರುತ್ತದೆ. ಆದರೆ ಪ್ರಕೃತಿಯ ವಿಕೋಪ ಮತ್ತು ಯುದ್ಧ, ಮತೀಯ ಸಂಘರ್ಷ ಮುಂತಾದವುಗಳ ಕಾರಣವಾಗಿ ಅನೇಕ ಮೌಲ್ವಿಕ ಕಲಾಕೃತಿಗಳು ಇಂದಿಗೂ ಭಗ್ನಗೊಂಡು ಅಲ್ಲಲ್ಲಿ ಬಿದ್ದಿರುವುದನ್ನು ಅನೇಕ ದೇವಾಲಯಗಳಲ್ಲಿ ಇಂದಿಗೂ ಕಾಣಬಹುದಾಗಿದೆ.

ಅವುಗಳ ರಕ್ಷಣೆಗೆ ಸರ್ಕಾರ ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡು ಕಾರ್ಯ ನಿರ್ವಹಿಸುತ್ತದೆ. ಇವುಗಳ ರಕ್ಷಣೆ ಜವಾಬ್ದಾರಿಯನ್ನು ಭಾರತ ಸರ್ಕಾರ ಪುರಾತತ್ವ ಸರ್ವೇಕ್ಷಣಾಲಯ ಕರ್ನಾಟಕ ಸರ್ಕಾರದ ಪುರಾತತ್ವ ಇಲಾಖೆ ಪ್ರಾಚ್ಯವಸ್ತು ಪರಂಪರೆಯ ನಿರ್ದೇಶನಾಲಯಗಳ ಕಾರ್ಯ ನಿರ್ವಹಿಸುತ್ತವೆ. ಇಲ್ಲಿ ರಾಯಚೂರು ಮುಖ್ಯವಾಗಿ ಕೇಂದ್ರಸರ್ಕಾರ ಸಂಗ್ರಹಾಲಯದಲ್ಲಿರುವ ಪ್ರಮುಖ ಶಿಲ್ಪಕಲಾಕೃತಿಗಳ ಸ್ಥೂಲ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಉದ್ದೇಶ:

ಕರ್ನಾಟಕದಲ್ಲಿ ದೃಶ್ಯಕಲೆಯ ಕ್ಷೇತ್ರದಲ್ಲಿ ಸಂಶೋಧನೆಗಾಗಿ ಅನೇಕ ಹೊಸ ಹೊಸ ವಿಷಯಗಳು ಸಂಶೋಧನಕ್ಕಾಗಿ ಕೈ ಮಾಡಿ ಕರೆಯುತ್ತವೆ. ಇತ್ತೇಚಿನ ದಿನಗಳಲ್ಲಿ ತುಂಬ ಗಂಭೀರವಾಗಿ ಈ ಕ್ಷೇತ್ರದಲ್ಲಿ ಅಧ್ಯಯನವನ್ನು ಮಾಡುವ ಮುನ್ನ ಅದರ ಮೂಲ ಉದ್ದೇಶವೇನು? ಅಧ್ಯಯನ ಯಾವ ಸ್ವರೂಪದಲ್ಲಿರಬೇಕು ಹಾಗೂ ಯಾವ ವಿಧಾನದಲ್ಲಿ ಅಧ್ಯಯನ ಕೈಗೊಳ್ಳಬಹುದು ಎಂಬುದು ಮುಖ್ಯವಾಗುತ್ತದೆ.

ಇದರ ಆಧಾರದ ಮೇಲೆ ವಿಷಯ ಮಂಡನೆ ಮಾಡುತ್ತಾ ಹೋದರೆ, ಅದು ಪೂರ್ಣವಾಗುತ್ತದೆ ಎಂಬ ಪ್ರಜ್ಞಾಪೂರ್ವಕ ಚೌಕಟ್ಟನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಅಧ್ಯಯನವನ್ನು ಪ್ರಮುಖವಾಗಿ ಕೈಗೊಳ್ಳಲಾಗಿದೆ.

ಈ ಹಿನ್ನೆಲೆಯಲ್ಲಿ "ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿನ ಶಿಲ್ಪಗಳು" ಎಂಬ ವಿಷಯವನ್ನು ಕುರಿತು ಸಂಶೋಧನಾ ಅಧ್ಯಯನ ನಡೆಸಲು ಉದ್ದೇಶಿಸಲಾಗಿದೆ. ನಮ್ಮ ಕಣ್ಣೆದುರಿಗಿರುವ ಎಷ್ಟೋ ವಸ್ತುಗಳು ಮತ್ತು ವ್ಯಕ್ತಿಗಳ ಸಾಧನೆ, ಐತಿಹಾಸಿಕ ವಿಶೇಷತೆ ನಮಗೆ ಗೊತ್ತಿರುವುದಿಲ್ಲ ಅವುಗಳ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಬಹಳಷ್ಟು ಜನರಿಗೆ ಇರುವುದಿಲ್ಲ.

ಹಾಗಾಗಿ ನಮ್ಮ ಸಮಾಜದಲ್ಲಿ ವಿಶಿಷ್ಟ ಸ್ಥಳ, ವ್ಯಕ್ತಿ, ವಸ್ತುವಿನ ಬಗ್ಗೆ ನಾವು ಕ್ರಿಯಾಶಿಲ, ಪ್ರಾಮಾಣಿಕ ಬದ್ಧತೆಯಿಂದ ಅಧ್ಯಯನ ನಡೆಸುವುದರ ಮೂಲಕ ಜನಸಾಮಾನ್ಯರಿಗೆ ಸಮಾಜಕ್ಕೆ ಹಾಗೂ ನಾಡಿಗೆ ಪರಿಚಯಿಸುವ ಕೆಲಸ ಮಾಡಬೇಕಾಗುತ್ತದೆ.

ವಸ್ತುಸಂಗ್ರಹಾಲಯದ ಅಧ್ಯಯನದ ಉದ್ದೇಶವೆಂದರೆ ರಾಯಚೂರಿನ ಕಲೆ, ಸಂಸ್ಕೃತಿ ಐತಿಹಾಸಿಕ ಹಿನ್ನೆಲೆಯ ವಿವರಗಳ ಅರಿವು ಮೂಡಿಸುವುದು ವಸ್ತು ಸಂಗ್ರಹಾಲಯದಲ್ಲಿನ ಕಲಾಕೃತಿಗಳ ಕುರಿತು ಜನರಿಗೆ ಪರಿಚಯಿಸುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೊಂಡಿದ್ದೇನೆ. ದೃಶ್ಯಕಲಾ ವಿದ್ಯಾರ್ಥಿಯಾಗಿ ಕಲೆಯ ಒಳನೋಟಗಳ ಪ್ರಕಾರಗಳನ್ನು ಸ್ವತಃ

ತಿಳಿಯುವುದಲ್ಲದೆ, ಅದರ ವಿಶೇಷತೆಯನ್ನು ಜನಸಾಮಾನ್ಯರಿಗೆ ತಿಳಿಸುವ ಉದ್ದೇಶ ಹೊಂದಲಾಗಿದೆ.

ಅಧ್ಯಯನದ ಉದ್ದೇಶಗಳು:

೧. ವಸ್ತುಸಂಗ್ರಹಾಲಯದ ವೈವಿಧ್ಯಮವಾದ ಶಿಲ್ಪಕಲಾ ಕೃತಿಗಳನ್ನು ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ. ಹಾಗೆಯೇ ಚಿತ್ರಕಲಾಕೃತಿ ಮತ್ತು ರೇಖಾಚಿತ್ರಗಳ ಬಗ್ಗೆ ಅಧ್ಯಯನ ಮಾಡುವ ಉದ್ದೇಶವಿದೆ.

೨. ಶಿಲ್ಪ ಚಿತ್ರಕಲಾಕೃತಿಗಳ ಕಲಾವಿದರು, ಕಲಾಕೃತಿಗಳ ಮಾಧ್ಯಮ, ಕಾಲ, ಅರಸರ ರಾಜಾಶ್ರಯ ಇತ್ಯಾದಿ ಅಂಶಗಳನ್ನು ಕುರಿತು ಗಮನ ಹರಿಸುವ ಉದ್ದೇಶವಾಗಿದೆ.

೩. ಶಿಲ್ಪ ಚಿತ್ರಕಲಾಕೃತಿಗಳ ಶೈಲಿ, ರಚನಾ, ತಾಂತ್ರಿಕ ಹಿನ್ನೆಲೆಗಳನ್ನು ಅದು ಸಂಗ್ರಹಗೊಂಡ ಪ್ರದೇಶ ಇತ್ಯಾದಿ ಅಧ್ಯಯನ ಮಾಡುವ ಉದ್ದೇಶ ಹೊಂದಲಾಗಿದೆ.

೪. ಈ ವಸ್ತುಸಂಗ್ರಹಾಲಯದ ಕಲಾಕೃತಿಗಳ ದಾಖಲೀಕರಣ ಮಾಡಿ ಮುಂದಿನ ಪರಂಪರೆಗೆ ಪರಿಚಯಿಸುವ ಉದ್ದೇಶ ಹೊಂದಲಾಗಿದೆ.

೫. ಅಜ್ಞಾತವಾದ ಸಂಗ್ರಹಗೊಂಡ ಶಿಲ್ಪ ಚಿತ್ರಕಲಾಕೃತಿಗಳನ್ನು ವ್ಯವಸ್ಥಿತವಾಗಿ ಅಧ್ಯಯನಕ್ಕೆ ಬಳಸುವ ಉದ್ದೇಶ ಹೊಂದಲಾಗಿದೆ.

೬. ಶಿಲ್ಪ ಚಿತ್ರಕಲಾಕೃತಿಗಳು ಮುಂದಿನ ತಲೆಮಾರಿಗೆ ಸಮಕಾಲೀನ ಸಂದರ್ಭದ ಕಲಾಸಕ್ತರಿಗೆ ಅವುಗಳ ಮಹತ್ವವನ್ನು ತಿಳಿಸಿಕೊಡುವ ಉದ್ದೇಶ ಹೊಂದಲಾಗಿದೆ.

೭. ರಾಯಚೂರಿನ ಐತಿಹಾಸಿಕ, ಸಾಂಸ್ಕೃತಿಕ ಪರಿಸರದ ಹಿನ್ನೆಲೆಯಲ್ಲಿ ಸ್ಥಾಪನೆಗೊಂಡ ವಸ್ತುಸಂಗ್ರಹಾಲಯದ ನೆಲೆ–ಹಿನ್ನೆಲೆ ಇತ್ಯಾದಿ ಅಂಶಗಳನ್ನು ಅಧ್ಯಯನಕ್ಕೆ ಪೂರಕವಾಗಿ ಅಧ್ಯಯನ ಮಾಡುವುದು ಪ್ರಸ್ತುತ ಅಧ್ಯಯನದ ಉದ್ದೇಶಗಳಾಗಿರುವುವು.

ಅಧ್ಯಯನದ ಸ್ವರೂಪ:

ಅಧ್ಯಯನದ ಅನುಕೂಲತೆಗಾಗಿ ಇಲ್ಲಿ ಏಳು ಅಧ್ಯಯನಗಳನ್ನಾಗಿ ವಿಂಗಡಣೆ ಮಾಡಿಕೊಂಡು ಪ್ರಸ್ತುತ ಪ್ರಬಂಧವನ್ನು ರೂಪಿಸಲಾಗುವುದು.

ಅಧ್ಯಾಯ ಒಂದು:

ಈ ಅಧ್ಯಯನದಲ್ಲಿ ಪ್ರಸ್ತುತಗೊಂಡ ಅಧ್ಯಯನ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆಯ ಬಗ್ಗೆ ಚರ್ಚಿಸಲಾಗುವುದು. ಪ್ರಸ್ತುತ ಅಧ್ಯಯನ ಕೈಗೊಳ್ಳದವರ ಸ್ಪಷ್ಟ ಉದ್ದೇಶಗಳನ್ನು ಹಾಗೆ ಈಗಾಗಲೇ ಈ ವಿಷಯದ ಕುರಿತು ನಡೆದ ಅಧ್ಯಯನವನ್ನು ಗಮನಿಸಲಾಗುವುದು.

ಅಧ್ಯಾಯ ಎರಡು:

ಈ ಅಧ್ಯಯನದಲ್ಲಿ ರಾಯಚೂರಿನ ಐತಿಹಾಸಿಕ, ಚಾರಿತ್ರಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯನ್ನು ಕುರಿತು ಸ್ಥೂಲವಾಗಿ ಚರ್ಚಿಸಲಾಗುವುದು. ಇದು ಅಧ್ಯಯನಕ್ಕೆ ಪೂರಕವಾದ ಗಟ್ಟಿ ನೆಲೆಯನ್ನು ಇಲ್ಲಿ ಒದಗಿಸುವ ಪ್ರಯತ್ನ ಮಾಡಲಾಗುವುದು.

ಅಧ್ಯಾಯ ಮೂರು:

ಈ ಅಧ್ಯಯನದಲ್ಲಿ ರಾಯಚೂರಿನ ವಸ್ತುಸಂಗ್ರಹಾಲಯದ ಸ್ಥಾಪನೆ ಮತ್ತು ವಸ್ತುಸಂಗ್ರಹಾಲಯದ ಆಡಳಿತ ಮುಂತಾದ ಅವರ ನೆಲೆ-ಹಿನ್ನೆಲೆಯನ್ನು ಇಲ್ಲಿ ಅಧ್ಯಯನಕ್ಕೆ ಬಳಸಲಾಗುವುದು.

ಅಧ್ಯಾಯ ನಾಲ್ಕು:

ಈ ಅಧ್ಯಯನದಲ್ಲಿ ರಾಯಚೂರಿನ ವಸ್ತುಸಂಗ್ರಹಾಲಯದ ಶಿಲ್ಪಕಲಾಕೃತಿಗಳು, ಅವುಗಳ ರಚನಾ ಕಾಲ, ವಿವಿಧ ಮಾಧ್ಯಮಗಳ ಸ್ವರೂಪ, ಶಿಲ್ಪಗಳ ವರ್ಗೀಕರಣದ ವಿವೇಚನೆಯನ್ನು ವ್ಯವಸ್ಥಿತವಾಗಿ ಮಾಡಲಾಗಿದೆ

ಅಧ್ಯಾಯ ಐದು:

ಗಬ್ಬೂರಿನ ನೆಲೆ-ಹಿನ್ನೆಲೆ, ಕೆಲವು ದೇವಾಲಯಗಳು ಆಯ್ದ ದೇವಾಲಯಗಳಲ್ಲಿ ದೇವತ ಶಿಲ್ಪಗಳ ರಚನಾ ಕಾಲ, ಮಾಧ್ಯಮದ ಕಲಾಕೃತಿಗಳ ಸ್ವರೂಪ ಹಾಗೂ ಶಿಲ್ಪಗಳ ವಿಶ್ಲೇಷಣೆ ಇತ್ಯಾದಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಆರು:

ಈ ಅಧ್ಯಯನದಲ್ಲಿ ರಾಯಚೂರಿನ ಪ್ರಾಚ್ಯ ವಸ್ತುಸಂಗ್ರಹಾಲಯದ ಆಡಳಿತ ವ್ಯವಸ್ಥೆ, ಶಿಲ್ಪಚಿತ್ರಗಳ ಸ್ಥಿತಿಗತಿಗಳ ಬಗ್ಗೆ ತಿಳಿಸಲಾಗಿದೆ.

ಅಧ್ಯಾಯ ಏಳು:

ಇದು ಸಮಾರೋಪ ಅಧ್ಯಾಯವಾಗಿದ್ದು, ಪ್ರಸ್ತುತ ಎಲ್ಲಾ ಅಧ್ಯಾಯಗಳಲ್ಲಿ ಕಂಡುಬರುವ ಫಲಿತಗಳ ಸಮೀಕ್ಷೆಯನ್ನು ಇದು ಒಳಗೊಂಡಿದೆ.

ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಅಧ್ಯಯನವು ರಾಯಚೂರಿನ ವಸ್ತುಸಂಗ್ರಹಾಲಯದ ಕುರಿತಾಗಿ ಇರುವುದರಿಂದ ಇಲ್ಲಿ ಆ ವಸ್ತುಸಂಗ್ರಹಾಲಯವನ್ನು ಮುಖ್ಯವಾಗಿಟ್ಟುಕೊಂಡು ಅಲ್ಲಿ ಸಂಗ್ರಹಗೊಂಡಿರುವ ಕಲಾಕೃತಿ ಹಾಗೂ ಚಾರಿತ್ರಿಕ ಮಹತ್ವದ ವಸ್ತುಗಳ ನೆಲೆಗಳನ್ನು ಹಾಗೂ ಈಗಿನ ಕಾಲದಲ್ಲಿ ರಚನೆಯಾದ ಹಲವಾರು ಕಲಾಕೃತಿಗಳ ಈ ಅಧ್ಯಾಯನದ ವ್ಯಾಪ್ತಿಗೆ ಒಳಪಡಿಸಿಕೊಂಡು ಅಧ್ಯಯನ ಮಾಡಲಾಗಿದೆ.

ರಾಯಚೂರಿನ ಪ್ರಾಚ್ಯ ವಸ್ತುಸಂಗ್ರಹಾಲಯದ ಅಧ್ಯಯನಕ್ಕೆ ಪೂರಕವಾಗಿ ಕರ್ನಾಟಕದಲ್ಲಿರುವ ಬೇರೆ ವಸ್ತುಸಂಗ್ರಹಾಲಯದ ಕಲಾಕೃತಿಗಳನ್ನು ಬಳಸಲಾಗುವುದು. ಇನ್ನೊಂದು ದೃಶ್ಯಕಲೆಯ ಅಧ್ಯಯನವಾಗಿದ್ದು, ಆ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಇವರ ವ್ಯಪ್ತಿಯು ದೃಶ್ಯಕಲಾ ಕ್ಷೇತ್ರದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವೈಧಾನಿಕತೆ:

ಈ ಅಧ್ಯಯನದಲ್ಲಿ ಸಂಶೋಧನಾ ವಿಧಾನದಲ್ಲಿ ಎರಡು ಪ್ರಕಾರದಲ್ಲಿ ಕೈಗೊಳ್ಳಲಾಗಿದೆ.

೧. ಮೂಲ ಆಕರ ಸಾಮಗ್ರಿಗಳು

೨. ಅನುಷಂಗಕ ಆಕರ ಸಾಮಗ್ರಿಗಳು

೧. ಮೂಲ ಆಕರ ಸಾಮಗ್ರಿಗಳು:

ಸಂಶೋಧನೆಯ ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ. ರಾಯಚೂರಿನ ವಸ್ತುಸಂಗ್ರಹಾಲಯಕ್ಕೆ ಹೋಗಿ ಅಲ್ಲಿನ ಶಿಲ್ಪ, ವರ್ಣಚಿತ್ರ ಮತ್ತು ಸಂಕೀರ್ಣ ಕಲಾವಸ್ತುಗಳನ್ನು ವೀಕ್ಷಿಸಿ ವಸ್ತುಸಂಗ್ರಹಾಲಯದ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಛಾಯಾಚಿತ್ರ:

ರಾಯಚೂರಿನ ವಸ್ತುಸಂಗ್ರಹಾಲಯಕ್ಕೆ ಹೋಗಿ ಅಲ್ಲಿರುವ ಶಿಲ್ಪ ಹಾಗೂ ಕಲಾಕೃತಿಗಳ ಛಾಯಾಚಿತ್ರಗಳನ್ನು ಮಾಡಿಕೊಂಡು ಅದರಲ್ಲಿರುವ ೧೨, ೧೩ನೇ ಶತಮಾನದ ಅನೇಕ ಶಿಲ್ಪಕಲಾಕೃತಿಗಳು ಹಾಗೂ ಚಿತ್ರಕಲಾಕೃತಿಗಳ ಮತ್ತು ವಸ್ತು ಸಂಕೀರ್ಣ ಇತ್ಯಾದಿಗಳ ಛಾಯಾಚಿತ್ರಗಳನ್ನು ಮಾಡಿಕೊಂಡು ಅಧ್ಯಯನ ನಡೆಸಲಾಗಿದೆ.

೨. ಅನುಷಂಗಿಕ ಆಕರ ಸಾಮಗ್ರಿಗಳು:

ರಾಯಚೂರಿನ ಹಲವಾರು ವ್ಯಕ್ತಿಗಳನ್ನು ಸಂದರ್ಶಿಸಿದಾಗ ಅವರು ನೀಡುವ ವಿಷಯವನ್ನು ಸಂಗ್ರಹಿಸಿಕೊಳ್ಳಲಾಗುವುದು. ಅನೇಕ ಅಭಿಪ್ರಾಯಗಳನ್ನು ಸಂಗ್ರಹಿಸಿ ಹಲವು ಕಡೆಗೆ ಹೋಗಿ ಮಾಹಿತಿಯನ್ನು ಸಂಗ್ರಹ ಮಾಡಿಕೊಂಡು ಪ್ರಸ್ತುತ ಅಧ್ಯಯನ ನಡೆಸಲಾಗಿದೆ.

ಅಧ್ಯಾಯ-೨

ರಾಯಚೂರು ಸಾಂಸ್ಕೃತಿಕ ಪರಂಪರೆ

ಅಧ್ಯಾಯ–೨

ರಾಯಚೂರು ಸಾಂಸ್ಕೃತಿಕ ಪರಂಪರೆ

ಇತಿಹಾಸದ ರಚನೆಯಲ್ಲಿ ಸ್ಥಳ ಮತ್ತು ಕಾಲಗಣನೆಯು ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಐತಿಹಾಸಿಕ ಘಟನೆಗಳು ನಡೆಯುವುದೇ ಸ್ಥಳದ ಭೂಮಿಕೆಯಲ್ಲಿ ಭೌಗೋಳಿಕ ಅಂಶಗಳಾದ ಬೆಟ್ಟ–ಪರ್ವತ–ಕಣಿವೆ, ಕಾಡು–ಮೇಡು, ಕೆರೆ ತೊರೆ–ಸಮುದ್ರ, ಮಲೆನಾಡು–ಮರು–ಭೂಮಿಗಳು ಐತಿಹಾಸಿಕ ಘಟನೆಯ ಮೇಲೆ ನಿರ್ದಿಷ್ಟವಾದ ಪ್ರಭಾವವನ್ನುಂಟು ಮಾಡುತ್ತವೆ.

ನಮ್ಮ ದೇಶದಲ್ಲಿ ಪ್ರತಿಯೊಂದು ಸ್ಥಳವು ತನ್ನದೇ ಆದ ಸ್ಥಳಪುರಾಣಗಳು, ಜಾನಪದ ನಂಬಿಕೆಗಳನ್ನು ಹೊಂದಿದೆ. ಇವುಗಳ ನೆಲೆಗಟ್ಟಿನ ಮೇಲೆ ಅಲ್ಲಿಯ ಚರಿತ್ರೆಯು ಬೆಳೆದು ಬಂದಿದೆ. ಶಾಸನ, ನಾಣ್ಯ, ಸ್ವಾರಕಗಳು ರಾಜಸ್ಥಾನದ ಬರವಣಿಗೆಗಳು ಹೊರದೇಶದ ಪ್ರವಾಸಿಗರ ಕಥನಗಳು ಇಲ್ಲಿಯ ಇತಿಹಾಸವನ್ನು ಮತ್ತಷ್ಟು ನಿಖರಗೊಳಿಸಿವೆ.

ರಾಯಚೂರು ಪ್ರದೇಶವು ಪ್ರಾಚೀನ ಕಾಲದಿಂದಲೂ ಸುಪರಿಚಿತವಾಗಿತ್ತು. ಪ್ರಾಚೀನ ಕಾಲದಲ್ಲಿ ಎಡೆದೊರೆನಾಡು ಎಂದು ಮಧ್ಯಯುಗದಲ್ಲಿ ರಾಯಚೂರ, ದೋಅಬ್ ಎಂದು ಈ ಪ್ರದೇಶವು ಚರಿತ್ರೆಯಲ್ಲಿ ಗುರುತಿಸಲ್ಪಟ್ಟಿದ್ದು ರಾಜ ಮಹಾರಾಜರುಗಳ ಆಕರ್ಷಣೆಯ ಕೇಂದ್ರವಾಗಿತ್ತು.

ಇದಕ್ಕೆ ಕಾರಣ ಇಲ್ಲಿಯ ನೈಸರ್ಗಿಕ ಸಂಪತ್ತು ಫಲವತ್ತಾದ ಭೂಮಿ ತುಂಬಿ ಹರಿಯುವ ಹಳ್ಳಕೊಳ್ಳ ನದಿಗಳು. ಇಂಥ ಪ್ರದೇಶವನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲು ರಾಜಮನೆತನಗಳು ಪೈಪೋಟಿಗಿಳಿದವು. ಸೈನ್ಯ ಮತ್ತು ಸಂಪತ್ತಿನ ರಕ್ಷಣೆಗಾಗಿ ಕೋಟೆ, ಕೊತ್ತಲುಗಳು ನಿರ್ಮಾಣಗೊಂಡವು. ಕೋಟೆ ಆಕ್ರಮಣ ಮತ್ತು ಪ್ರತ್ಯಾಕ್ರಮಣಗಳು ಬಿರುಸಿನಿಂದ ಸಾಗಿದವು.

ಈ ಭಾಗದ ಇತಿಹಾಸವು ಹೊಯ್ಸಳರ ಕಾಲದಿಂದ ಸ್ಪಷ್ಟಗೊಳ್ಳುತ್ತದೆ. ಕಲ್ಯಾಣಿ ಚಾಳುಕ್ಯರ ಅಧಿಪತ್ಯವನ್ನು ಕಿತ್ತಿಹಾಕಿ, ಸ್ವತಂತ್ರಗೊಳ್ಳಲು ಯತ್ನಿಸಿದ ವಿಷ್ಣುವರ್ಧನನ ಸೈನಿಕ ಕಾರ್ಯಾಚರಣೆಯ ಕಾಲಕ್ಕೆ ರಾಯಚೂರಿನ ಮೊದಲ ಉಲ್ಲೇಖವು ಕಂಡುಬರುತ್ತದೆ.

ಮುಂದಿನ ರಾಜಕೀಯ ಹೊಯ್ದಾಟಗಳಲ್ಲಿ ಕಾಕತೀಯರು ಅಲ್ಲಿ ಕಲ್ಲಿನ ಕೋಟೆಯನ್ನು ಕಟ್ಟಿದರು. ಅನಂತರ ಮಲ್ಲಿಕಫರ, ಮಹಮ್ಮದ ಬಿನ ತುಘಲಕ್‌ರ ವಶಕ್ಕೊಳಪಟ್ಟ ಈ ಕೋಟೆಯು ವಿಜಯನಗರದ ಸ್ಥಾಪನೆಯೊಂದಿಗೆ ಅದರ ವ್ಯಾಪ್ತಿಗೊಳಪಟ್ಟಿತು.

ವಿಜಯನಗರ ಮತ್ತು ಬಹುಮನಿ ಹಾಗೂ ಆದಿಲ್‌ಷಾಹಿಗಳ ಮಧ್ಯ ಈ ಪ್ರದೇಶವು ರಣರಂಗವಾಗಿ ಮಾರ್ಪಟ್ಟಿತು. ಈ ಯುದ್ಧಗಳಲ್ಲಿ ಇಲ್ಲಿಯ ರಾಯಚೂರು ಮತ್ತು ಮುದುಗಲ್ಲು

ಕೋಟೆಗಳು ಮಹತ್ವದ ಪಾತ್ರವಹಿಸಿದ್ದವು. ಇಂತಹ ಕಾಲಗಗಳಲ್ಲಿ ಕ್ರಿ.ಶ ೧೫೨೦ರಲ್ಲಿ ನಡೆದ ಯುಧ್ಧವು ರಾಯಚೂರು ಕಾಳಗ ಎಂದೇ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ.

ರಾಯಚೂರು ಕೋಟೆಯು ಆಯಕಟ್ಟಿನ ಸ್ಥಳದಲ್ಲಿ ತಲೆಯೆತ್ತಿ ನಿಂತಿದ್ದು, ಉತ್ತರದಲ್ಲಿ ಕೃಷ್ಣಾನದಿ, ದಕ್ಷಿಣದಲ್ಲಿ ತುಂಗಭದ್ರಾನದಿ ಇವುಗಳ ಮಧ್ಯದ ಶ್ರೀಮಂತ ನೆಲದ ಸುಭದ್ರ ಕೋಟೆ ಇದಾಗಿದೆ. ರಾಯಚೂರು ಎರಡು ಸುತ್ತಿನ ಕೋಟೆಗೋಡೆಯನ್ನು ಹೊಂದಿದ್ದು, ಒಳಸುತ್ತನ್ನು ಕಾಕತೀಯರು, ಹೊರಸುತ್ತನ್ನು ಬಹುಮನಿ ಸುಲ್ತಾನರು ನಿರ್ಮಿಸಿದರು. ಇದರ ದುರಸ್ತಿ ಪುನರ್ರಚನೆ ವಿಸ್ತರಣೆಯಲ್ಲಿ ವಿಜಯನಗರದ ಅರಸರು, ಆದಿಲ್‌ಷಾಹಿಗಳು ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಇದರ ರಚನೆಯಲ್ಲಿ ಮಲಿಯಾಬಾದ ಕಲಬುರ್ಗಿ, ಬೀದರ್, ವಿಜಯನಗರ ಕೋಟೆಗಳ ಪ್ರಭಾವವಿದೆ.

ರಚನೆ ವಿಸ್ತರಣೆಯಲ್ಲಿ ವಿಜಯನಗರದ ಅರಸರು, ಆದಿಲ್ ಷಾಯಿಗಳು ತಮ್ಮ ಕೊಡುಗೆಯನ್ನು ನೀಡಿದ್ದಾರೆ.ಇದರ ರಚನೆಯಲ್ಲಿ ಮಲಿಯಾಬಾದ ಕಲಬುರ್ಗಿ, ಬೀದರ, ವಿಜಯನಗರದ ಕೋಟೆಗಳ ಪ್ರಭಾವವಿದೆ.

ಚರಿತ್ರಾ ಪುಸ್ತಕಗಳಲ್ಲಿ ನಾವು ಗುಲಬರ್ಗಾ, ಬೀದರ್, ಬಿಜಾಪುರ ಸ್ಮಾರಕ, ಕೋಟೆಗಳ ಬಗ್ಗೆ ವಿವರಣೆಯನ್ನು ಕಾಣುತ್ತೇವೆ.ಅದೇ ರೀತಿಯ ಸ್ಮಾರಕಗಳನ್ನು ರಾಯಚೂರಿನ ಬಗ್ಗೆ ಸ್ವತಂತ್ರ ಕೃತಿಗಳಾವವೂ ಬಂದಿಲ್ಲ.ಹೀಗಾಗಿ ಈ ವಿಷಯವನ್ನು ನಾನು ಆಯ್ಕೆ ಮಾಡಿಕೊಳ್ಳಬೇಕಾಯಿತು.ಅಲ್ಲದೆ ನಮ್ಮ ಜಿಲ್ಲೆಯದೇ ವಿಷಯ ಎಂಬ ಅಭಿಮಾನ ಬೇರೆ.

ಈ ಪ್ರಬಂಧವನ್ನು ಸಿದ್ಧಪಡಿಸುವಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ನನಗೆ ದೊರೆತ ಮತ್ತು ಅರಿವಿಗೆ ಬಂದ ಆಕರ ಸಾಮಗ್ರಿಗಳನ್ನು ಆಧಾರವಾಗಿ ಬಳಸಿಕೋಂಡಿದ್ದೇನೆ.

ಪುರಾತತ್ವ ಇಲಾಖೆಯ ವರದಿಗಳು ಶಾಸನ ಸಂಪುಟಗಳು, ವಾಸ್ತು-ಶಾಸ್ತ್ರ ಗ್ರಂಥಗಳು, ವಿಶ್ವಕೋಶಗಳೂ, ಇತಿಹಾಸದ ಕ್ರತಿಗಳು ನಿಯತಕಾಲಿಕಗಳು ಮತ್ತು ಸ್ಮರಣಸಂಚಿಕೆಗಳು ಇದರಲ್ಲಿ ಸೇರಿವೆ. ಇವುಗಳಲ್ಲಿ ಉಪಯುಕ್ತವಾಗಿದ್ದ ಸಂಗತಿಗಳನ್ನು ಹೆಕ್ಕಿತೆಗೆದು ಒಂದೆಡೆ ಸಂಗ್ರಹಿಸುವ

ನಿರ್ದಿಷ್ಟ ರೂಪಕೋಡುವ ಕೆಲಸವನ್ನು ಇಲ್ಲಿ ನಾನು ಮಾಡಿದ್ದೇನೆ.ಅದರೋಂದಿಗೆ ಕೋಟೆಯಲ್ಲಿ ಹಾಗೂ ಗಬ್ಬೂರಿನಲ್ಲಿ ಕ್ಷೇತ್ರ ಕಾರ್ಯವನ್ನು ಕೈಗೊಂಡು ಅಲ್ಲಿ ಕಂಡುಕೊಂಡ ಸಂಗತಿಗಳನ್ನು ದಾಖಲಿಸಿದ್ದೇನೆ.

ನಾಮನಿಷ್ಪತ್ತಿ ಹಾಗೂ ನಾಮಾಂತರ ಇವುಗಳು ಜನತೆಯ ಆಡು ನುಡಿಯಲ್ಲಿ ನಿರಂತರವೂ ಬದಲಾವಣೆಯ ಪ್ರಕ್ರಿಯೆಗೆ ಮುಂದುವರೆಯುವದು ದುರ್ಲಭ. ಇದಕ್ಕನುಗುಣವಾಗಿ ನಮ್ಮ ದೇಶದ ಅನೇಕ ಊರು ಪಟ್ಟಣಗಳ ಹೆಸರು ಬದಲಾವಣೆಗೊಂಡಿರುವುದು ಕಂಡು ಬರುತ್ತದೆ. ರಾಯಚೂರು ಹೆಸರು ಕೂಡ ಬದಲಾವಣೆಯ ಪ್ರಕ್ರಿಯೆಯಿಂದ ಹೊರಗುಳಿದಿಲ್ಲ. ಇದು ತೀವ್ರ ಚರ್ಚೆಗೊಳಪಟ್ಟ ವಿಷಯವಾಗಿದೆ. ಈ ವಿಷಯವಾಗಿ ಡಾ. ಪಿ. ಬಿ. ದೇಸಾಯಿ, ಶ್ರೀ ಬಿ. ವಿ. ವೀರಭದ್ರಪ್ಪ ಮೊದಲಾದವರು ಚರ್ಚಿಸಿದ್ದಾರೆ.

ರಾಯಚೂರು ಹೆಸರನ್ನು ಉಲ್ಲೇಖಿಸುವ ಸ್ಥಳೀಯವಾದ ಮೊದಲ ಶಾಸನವೆಂದರೆ ಕಾಕತೀಯರ ಶಾಸನ. ಇದರ ಕಾಲ ಕ್ರಿ.ಶ. ೧೨೯೪ ಇದರಲ್ಲಿ ರಾಯಚೂರು ಹೆಸರಿನ ಉಲ್ಲೇಖವಿದೆ. ರಾಯಚೂರು ನಗರದಲ್ಲಿ ಇದಕ್ಕೂ ಪೂರ್ವದ (ಕಲ್ಯಾಣ ಚಾಳುಕ್ಯರು) ಅವಶೇಷಗಳು ಹಾಗೂ ಶಾಸನಗಳು ದೊರೆತಿವೆ.

ಆದರೆ ಈ ಶಾಸನಗಳು ಬಹುತೇಕವಾಗಿ ಒಡೆದು ಹೋಗಿದ್ದು ಅಲ್ಪ ಪ್ರಮಾಣದಲ್ಲಿ ಪಾತ್ರ ಲಭ್ಯವಾಗಿವೆ. ಇವು ಕಾಲ ನಿರ್ದೇಶನವನ್ನಾಗಲಿ, ಸ್ಥಳದ ಹೆಸರನ್ನಾಗಲಿ, ತಿಳಿಸುವಲ್ಲಿ ವಿಫಲವಾಗಿದೆ. ಲಿಪಿಶಾಸ್ತ್ರದ ಆಧಾರದ ಮೇಲಿಂದ ವಿದ್ವಾಂಸರು ಇವುಗಳ ಕಾಲ ಕ್ರಿ.ಶ. ೮ನೇ ಶತಮಾನದಿಂದ ೧೨ನೇ ಶತಮಾನ ಎಂದು ತಿಳಿಸಿದ್ದಾರೆ. ಹೀಗಾಗಿ ಈ ಸ್ಥಳದ ಹೆಸರಿನ ಮೂಲ ಸ್ವರೂಪವನ್ನು ತಿಳಿಯಲು ಹೊರಗಿನ ಶಾಸನಗಳನ್ನು ಅವಲಂಬಿಸುವುದು ಅನಿವಾರ್ಯವಾಗಿದೆ.

ಪಿ.ಬಿ. ದೇಸಾಯಿಯವರ ವಿಚಾರದ ಪ್ರಕಾರ ಕ್ರಿಶ. ೧೨ನೇ ಶತಮಾನಕ್ಕೆ ಸೇರಿದ ವಿಷ್ಣುವರ್ಧನನ ಉತ್ತರ ದಿಗ್ವಿಜಯವನ್ನು ವರ್ಣಿಸುವ ಹೊಯ್ಸಳರ ಶಾಸನಗಳೇ ರಾಯಚೂರಿನ ಸ್ಪಷ್ಟನಾಮ ನಿರ್ದೇಶನವನ್ನು ನೀಡುವ ಮೊದಲ ಶಾಸನಗಳಾಗಿವೆ. ಹೊಯ್ಸಳರಿಂದ ಹೊರಡಿಸಲ್ಪಟ್ಟ ಹುಲಿಕೇರಿ ಶಾಸನವು ರಾಚವೂರ್ ಎಂದು, ಪಟ್ಟಣ ಶಾಸನವು ಪೆರ್ಮನ ರಾಚವೂರ್ ಎಂದು, ಹಿರೇಹಳ್ಳಿ ಶಾಸನವು ರಾಚನೂರ್ ಎಂದು ಸ್ಥಳಸೂಚಿಯನ್ನು ನೀಡುತ್ತವೆ.

ಈ ಮೂರು ಶಾಸನಗಳಲ್ಲಿ ಉಕ್ತಿವಾದ ರಾಚವೂರ, ಪೆರ್ಮನ ರಾಚವೂರ ಮತ್ತು ರಾಚನೂರ ಎಂದು ಪದಗಳು ಇಂದಿನ ರಾಯಚೂರು ನಗರವನ್ನು ಸೂಚಿಸುತ್ತವೆ ಎಂಬುದು ವಿಷಯ ವರ್ಣನೆಯ ಕ್ರಮ, ಸ್ಥಳಗಳ ಆವರಣ ಮತ್ತು ಪ್ರಾದೇಶಿಕ ವಿವರಗಳಿಂದ ಸ್ಪಷ್ಟವಾಗುತ್ತದೆ ಎಂಬುದು ಪಿ.ಬಿ. ದೇಸಾಯಿಯವರ ಸ್ಪಷ್ಟೋಕ್ತಿ ಎರಡನೆಯ ಶಾಸನದಲ್ಲಿ ಪೆರ್ಮನ ರಾಚನೂರ ಎಂಬ ವಿಶಿಷ್ಟ ಹೆಸರಿನಿಂದ ರಾಯಚೂರನ್ನು ಉಲ್ಲೇಖಿಸಲ್ಪಟ್ಟ ರಾಚನೂರ ಎಂಬ ರಾಜ ಇಲ್ಲವೇ ಮುಖ್ಯಸ್ಥನ ಸಂಬಂಧದಿಂದ ಈ ಹೆಸರು ಬಂದಿರಬಹುದೆಂದು ಅವರು ಊಹಿಸುತ್ತಾರೆ.

ಹೊಯ್ಸಳರ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟ ರಾಜನೂರು ಸುಮಾರು ಒಂದು ಶತಮಾನದ ಅಂತರದಲ್ಲಿ ಕಾಕತೀಯರ ಶತಮಾನದ ಅಂತರದಲ್ಲಿ ಕಾಕತೀಯರ ಶಾಸನದಲ್ಲಿ ರಾಚೂರು ಎಂದು ಪ್ರಯೋಗಿಸಲ್ಪಟ್ಟಿತು.

ಇಲ್ಲಿಂದ ಪ್ರಾರಂಭವಾದ ಈ ಪದ ಪ್ರಯೋಗವು ಹೆಚ್ಚು ಕಡಿಮೆ ವಿಜಯನಗರದ ಅಂತ್ಯದವರೆಗೂ ಮುಂದುವರೆಯಿತು. ಇದನ್ನು ವಿಜಯನಗರದ ಕನ್ನಡ ತೆಲುಗು, ತಮಿಳು ಶಾಸನಗಳು ದೃಢೀಪಡಿಸುತ್ತವೆ. ಹೊಯ್ಸಳ ಸೇವುರಣರ ನಂತರದಲ್ಲಿ ಕಾಕತಿಯರ ಅಧೀನಕ್ಕೆ ಈ ಪ್ರದೇಶವು ಒಳಪಟ್ಟಿತ್ತು. ಆಗಿನ ತೆಲುಗಿನ ಜನತೆಯ ಸಂಪರ್ಕ ಹಾಗೂ ಅವರ ಪ್ರಭಾವದಿಂದಾಗಿ ಮತ್ತು ಆಂಧ್ರದವರ ಮಾತಿನ ಓಘಕ್ಕನುಗುಣವಾಗಿ ರಾಚನೂರು ರಾಚೂರು ಆಗಿ ಮಾರ್ಪಟ್ಟಿತೆಂದು ಊಹಿಸಬಹುದು. ಈ ರಾಚೂರು ಪದ ಬಳಕೆಯೇ ಸುಮಾರು ಒಂದೆರಡು ಶತಮಾನಗಳವರೆಗೆ ರೂಢಿಯಲ್ಲಿತ್ತೆಂದು ಹೇಳಬಹುದು.

ರಾಯಚೂರಿನ ರಾಮಲಿಂಗ ದೇವಾಲಯದಲ್ಲಿರುವ ಕನ್ನಡ ಶಾಸನವೊಂದು ಮೊಟ್ಟಮೊದಲಿಗೆ 'ರಾಯಚೂರು' ಎಂಬ ಪದ ಪ್ರಯೋಗವನ್ನು ತೋರಿಸುತ್ತದೆ. ಆದರೆ ಈ ಶಾಸನವು ಬಹುತೇಕವಾಗಿ ಒಡೆದು ಹೋಗಿದ್ದು, ಅದರ ಕಾಲಮಿತಿ ಮತ್ತಿತರ ವಿವರಗಳು ದೊರೆಯುವುದಿಲ್ಲ. ವಿದ್ವಾಂಸರು ಲಿಪಿಶಾಸ್ತ್ರದ ಆಧಾರದ ಮೇಲಿಂದ ಇದು ಹದಿನೈದನೆಯ ಶತಮಾನಕ್ಕೆ ಸೇರಿದ ಶಾಸನವೆಂದು ಹೇಳಿದ್ದಾರೆ.

ಮಧ್ಯಯುಗದಲ್ಲಿ ಮುಸ್ಲಿಮರ ಆಳ್ವಿಕೆಯ ಕಾಲದಲ್ಲಿ ತಮ್ಮ ಅಧಿಕಾರ ವ್ಯಾಪ್ತಿಗೊಳಪಟ್ಟ ಪಟ್ಟಣಗಳ, ಮೂಲ ಹೆಸರುಗಳನ್ನು ಬದಲಾಯಿಸಿ ಅರೇಬಿಕ್ ಮತ್ತು ಪರ್ಶಿಯನ್ ಭಾಷೆಗೆ ಅನುಗುಣವಾಗಿ ಹೊಸ ಹೆಸರುಗಳಿಂದ ಕರೆಯಲಾಯಿತು. ಇಂಥ ಕೆಲವು ಹೆಸರುಗಳು ಆಯಾ ಸುಲ್ತಾನನ ಹೆಸರನ್ನೇ ಪ್ರತಿ ಧ್ವನಿಸುತ್ತಿರುವುದು ಅನೇಕ ಕಡೆಗಳಲ್ಲಿ ಕಂಡು ಬರುತ್ತದೆ.

ಕಲಬುರ್ಗಿಯಿಂದ (ಗುಲ್ಬರ್ಗಾ) ಆಳಿದ ಬಹುಮನಿ ಸುಲ್ತಾನರಲ್ಲಿ ಫೀರೋಜ (ಕ್ರಿ.ಶ. ೧೩೯೭-೧೪೨೨) ಪ್ರಮುಖನು. ಇವನು ೧೫ನೆಯ ಶತಮಾನದ ಮೊದಲ ದಶಕದಲ್ಲಿ ಒಂದನೆಯ ದೇವರಾಯ (ಕ್ರಿ.ಶ. ೧೪೦೬-೧೪೨೨)ನೊಂದಿಗೆ ಯುದ್ಧಕ್ಕೆ ಇಳಿದಾಗ ರಾಯಚೂರು ಪ್ರದೇಶವು ಇವನ ಸ್ವಾಧೀನಕ್ಕೊಳಪಟ್ಟಿತು. ಈ ಸಂದರ್ಭದಲ್ಲಿ ಇವನು ರಾಯಚೂರು ನಗರವನ್ನು ಫಿರೋಜನಗರ ಎಂದು ಕರೆದನು.

ಕೆಲವು ಸಮಕಾಲೀನ ಪರ್ಶಿಯನ್ ಅರೇಬಿಕ್ ಗ್ರಂಥಗಳಲ್ಲಿಯೂ ರಾಯಚೂರನ್ನು ಫಿರೋಜನಗರ ಎಂದು ಕೆಲವು ಕಡೆಗಳಲ್ಲಿ ಕರೆಯಲಾಗಿದೆ. ಆದರೂ ರಾಯಚೂರಿಗೆ ಈ ಹೊಸ ಹೆಸರು ಅಷ್ಟಾಗಿ ಹೊಂದಿಕೊಳ್ಳಲಿಲ್ಲ. ದೇಶೀಯ ಅನೇಕ ಶಾಸನ ಹಾಗೂ ಸಾಹಿತ್ಯದಲ್ಲಿ ಇದನ್ನು ರಾಯಚೂರು ಎಂದೇ ಕರೆಯಲಾಗಿದೆ.

ಜನಸಾಮಾನ್ಯರು ಕೂಡ ಇದನ್ನು ರಾಯಚೂರ ಎಂದೇ ಗುರುತಿಸುತ್ತಿದ್ದರು. ಮುಸ್ಲಿಂರ ದಾಖಲೆಗಳಲ್ಲಿ ಫಿರೋಜನಗರ ಎಂದು ಬಳಕೆಯಲ್ಲಿದ್ದಿತು. ಔರಂಗಜೇಬನ ಶಾಸನದಲ್ಲಿ ಇದನ್ನು ರಾಯಚೂರ ಎಂದೇ ಉಳಿದುಕೊಂಡು ಬಂದಿತು.

ಈ ರೀತಿಯಾಗಿ ರಾಯಚೂರು ಹೆಸರು ಅನೇಕ ಬದಲಾವಣೆಯ ಪ್ರಕ್ರಿಯೆಗೆ ಒಳಪಟ್ಟಿರುವುದು ಕಂಡು ಬರುತ್ತದೆ. ಮೂಲತಃ ಕನ್ನಡದಲ್ಲಿ ರಾಚುನೂರ ಎಂದಿದ್ದ ಈ ಹೆಸರು ನಂತರದಲ್ಲಿ ತೆಲುಗಿನ ಪ್ರಭಾವಕ್ಕೆ ಒಳಪಟ್ಟು ರಾಚೂರ ಆಯಿತು ಮುಂದೆ ಮುಸ್ಲಿಂಮರ ಕೈಯಲ್ಲಿ ಫಿರೋಜ ನಗರ ಎಂದು ಮಾರ್ಪಟ್ಟು, ಪ್ರಸ್ತುತದಲ್ಲಿ ರಾಯಚೂರು ಎಂಬ ರೂಪವನ್ನು ತಾಳಿದೆ.

ರಾಯಚೂರು ಕೋಟೆ ಹಾಗೂ ಪ್ರದೇಶದ ಮಹತ್ವ:

ರಾಯಚೂರು ಕೋಟೆಯು ಕನ್ನಡ ನಾಡಿನ ಚರಿತ್ರೆಯಲ್ಲಿ ತುಂಬಾ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಎರಡು ನದಿಗಳ ಮಧ್ಯೆ ಇರುವ ಈ ಪ್ರದೇಶದ ಪ್ರಮುಖ ಕೋಟೆ ಇದಾಗಿದೆ. ಈ ಕೋಟೆಯ ಅಧಿಪತ್ಯಕ್ಕಾಗಿ ಆಗಿನ ಎಲ್ಲಾ ರಾಜ ಮನೆತನಗಳು ಹಾತೊರೆಯುತ್ತಿದ್ದವು. ಈ ಬಯಕೆಯು ವಿಜಯನಗರ ಮತ್ತು ಬಹುಮನಿ ರಾಜ್ಯಗಳ ಸ್ಥಾಪನೆಯೊಂದಿಗೆ ಮತ್ತಷ್ಟು ತೀವ್ರವಾಯಿತು.

ರಾಯಚೂರು ಪ್ರದೇಶವು ಮೊದಲಿನಂದಲೂ ಇತಿಹಾಸ ಪ್ರಸಿದ್ಧವಾಗಿದೆ. ಇದು ಎಡೆದೊರೆನಾಡು, ಎಡೆದೊರೆ ಇರ್ಪ್ಚಾಸಿರ, ಎಡೆದೊರೆ ಎರಡು ಸಾಸಿರ ಎಂಬ ಹೆಸರುಗಳೊಂದಿಗೆ ಖ್ಯಾತಿಯನ್ನು ಪಡೆದಿತ್ತು. ಮಧ್ಯಯುಗದಲ್ಲಿ ಮುಸ್ಲಿಮರ ಆಗಮನದ ನಂತರ ಇದು ದೋ-ಅಬ್ ಎಂಬ ಹೆಸರು ಪಡೆಯಿತು.

ಇಲ್ಲಿಯ ಎಡೆದೊರೆನಾಡು ಮತ್ತು ದೋ-ಅಬ್ ಹೆಸರು ಇಲ್ಲಿಯ ಭೌಗೋಳಿಕ ಪರಿಸರವನ್ನು ಸೂಚಿಸುವ ಪದಗಳಾಗಿವೆ. ಎಡೆದೊರೆ ಎಂದರೆ ಎರಡು ತೊರೆ ಅಥವಾ ನದಿಗಳಿಂದ ಕೂಡಿದ ಅಥವಾ ಸುತ್ತುವರೆದ ಭೂ ಪ್ರದೇಶ ಎಂಬ ಅರ್ಥವನ್ನು ನೀಡುತ್ತದೆ.

ಎಡದೊರೆ ಇಚ್ಛ್ವಾಸಿರ, ಎಡೆದೊರೆ ಎರಡು ಸಾಸಿರಃ ಪದಗಳು ವಿದ್ವಾಂಸರು. ಅಭಿಪ್ರಾಯ ತಾಳಿರುವಂತೆ ಈ ಪ್ರದೇಶದೆಲ್ಲಿರುವ ಎರಡು ಸಾವಿರ ಹಳ್ಳಿಗಳನ್ನು ಸೂಚಿಸುತ್ತದೆ.

ಎಡೆದೊರೆನಾಡು ಹಿಂದಿನ ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ಭೂಭಾಗದ ವ್ಯಾಪ್ತಿಯನ್ನು ಹೊಂದಿತ್ತು. ಆದರೆ ಹಿರೇಹಳ್ಳ ರಾಜಧಾನಿಗಳು ತೀರ ಹತ್ತಿರದಲ್ಲಿದ್ದ ಕಾರಣ ಒಬ್ಬರ ಮೇಲೆ ಇನ್ನೊಬ್ಬರು ದಾಳಿ ಮಾಡುವದು ಸ್ವಾಭಾವಿಕವಾಗಿತ್ತು. ಈ ದಾಳಿಯ ಭೀತಿಯು ಹೆಚ್ಚಾಗಿ ವಿಜಯನಗರಕ್ಕಿತ್ತು.

ಹೀಗಾಗಿ ಅದು ಕೃಷ್ಣಾ ನದಿಯನ್ನು ಬಹು ಎಚ್ಚರಿಕೆಯಿಂದ ಕಾಯುತ್ತಿತ್ತು. ಮುಂದೆ ಕ್ರಿ.ಶ. ೧೫೬೫ರಲ್ಲಿ ವಿಜಯನಗರವು ಕೃಷ್ಣಾ ನದಿಯನ್ನು ಎಚ್ಚರಿಕೆಯಿಂದ ಕಾಯುವಲ್ಲಿ ವಿಫಲಗೊಂಡು ರಾಯಚೂರು ಸೀಮೆಯನ್ನು ತನ್ನ ತಡೆ ಪ್ರದೇಶವನ್ನಾಗಿ ರಕ್ಷಿಸುವಲ್ಲಿ ವಿಫಲಗೊಂಡದ್ದೇ ಅದರ ರಾಜಧಾನಿಯ ಸ್ಥಳಾಂತರಕ್ಕೆ ಪ್ರಮುಖ ಕಾರಣವೆನ್ನಬಹುದು.

ರಾಯಚೂರು ಜಿಲ್ಲಾ ಪ್ರದೇಶವು ಒಳ್ಳೆಯ ಫಲವತ್ತತೆಯಿಂದ ಕೂಡಿದ ಭೂಭಾಗ ಇದರ ಎರಡು ಬದಿಗಳಲ್ಲಿ ನದಿಗಳು ಹರಿಯುವ ಕಾರಣ ನೀರಾವರಿಯ ಅನುಕೂಲತೆಯು ಉಂಟು. ಇದು ಕಪ್ಪು ಮಣ್ಣಿನ ಭೂಮಿಯಾಗಿದ್ದು, ಹತ್ತಿ ಹಾಗೂ ಅಕ್ಕಿ, ಜೋಳ ಬೆಳೆಗೆ ಹೆಸರಾಗಿದೆ. ತುಂಗಭದ್ರಾ ನದಿಯ ಪ್ರದೇಶದಲ್ಲಿ ನೀರಾವರಿಯ ಅನುಕೂಲತೆಯನ್ನು ಕಲ್ಪಿಸಿಕೊಂಡು ಭತ್ತ, ಕಬ್ಬು ಮೊದಲಾದ ಬೆಳೆಗಳನ್ನು ಬೆಳೆಯುತ್ತಾರೆ.



ರಾಯಚೂರಿನ ವಸ್ತುಸಂಗ್ರಹಾಲಯದ ಪ್ರವೇಶ ದ್ವಾರ

ಭೂಮಿಯ ಫಲವತ್ತತೆ ಹಾಗೂ ನೀರಿನ ಅನುಕೂಲದಿಂದ ಒಳ್ಳೆಯ ರೀತಿಯಲ್ಲಿ ಬೆಳೆಗಳು ಬೆಳೆಯುತ್ತದ್ದವು. ಹೀಗಾಗಿ ಜನತೆಗೆ ಆಹಾರ ಧಾನ್ಯಗಳು ದೊರೆಯುತ್ತಿದ್ದವು. ಇದರಿಂದಾಗಿ ಸೈನ್ಯ ಸಂಗ್ರಹಣೆಗೆ ಅನುಕೂಲಕರವಾಗಿತ್ತು. ಅಲ್ಲದೆ ಬೆಳೆಗಳು ಚೆನ್ನಾಗಿ ಬೆಳೆಯುತ್ತಿದ್ದ ಕಾರಣವಾಗಿ ಕಂದಾಯವು ಪ್ರಜೆಗಳಿಗೆ ಹೆಚ್ಚಿನ ತೊಂದರೆಯಿಲ್ಲದಂತೆ ವಸೂಲಾಗುತ್ತಿತ್ತು. ನ್ಯೂನಿಝುನು ಕೂಡ ಈ ಬಗ್ಗೆ ಉಲ್ಲೇಖಿಸಿದ್ದಾನೆ. ಇವನು ಅಚ್ಚುತರಾಯನು ಇಸ್ಮಾಯಿಲ್ ಆದಿಲ್‌ಷಾಹಿಗೆ ರಾಯಚೂರು ಪಟ್ಟಣವನ್ನು ಬಿಟ್ಟು ಕೊಡಬೇಕಾಯಿತೆಂದು ಮತ್ತು ಜಿಲ್ಲೆಯ ಭೂಮಿಯಿಂದ ೧೫,೦೦೦ ಫರ್ದೋಸ್ ಕಂದಾಯ ದೊರೆಯುತ್ತಿತ್ತೆಂದು ಹೇಳಿದ್ದಾನೆ.

ಇಂಥ ಫಲವತ್ತಾದ ಹಾಗೂ ಸಾಕಷ್ಟು ಆದಾಯವನ್ನು ತರುವ ಪ್ರದೇಶದ ಒಡೆತನವನ್ನು ಹೊಂದಲು ಎರಡು ರಾಜ್ಯಗಳು ಸತತವಾಗಿ ಪ್ರಯತ್ನಿಸುತ್ತದ್ದವು. ಇಂಥ ಪ್ರದೇಶವನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಬೇಕಾದರೆ ಹಾಗೂ ಶತ್ರುಗಳು ಅದನ್ನು ಆಕ್ರಮಿಸುವಂತೆ ನೋಡಿಕೊಳ್ಳಬೇಕಾದರೆ ಇಲ್ಲಿಯ ರಕ್ಷಣಾ ವ್ಯವಸ್ಥೆ ತುಂಬಾ ಸುವ್ಯವಸ್ಥಿತವಾಗಿರಬೇಕಾಗಿತ್ತು. ಹೀಗಾಗಿ ಈ ಪ್ರದೇಶದಲ್ಲಿರುವ ರಾಯಚೂರು ಮತ್ತು ಮುದಗಲ್ ಕೋಟೆಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡವು. ಈ ಕೋಟೆಗಳೇ ಇಲ್ಲಿಯ ಭೂಮಿಯ ರಕ್ಷಕರು ಹಾಗೂ ಒಡೆಯರಾಗಿ ಮಾರ್ಪಟ್ಟವು. ಹೀಗಾಗಿ ಈ ಕೋಟೆಗಳನ್ನು ಯಾರು ಹೊಂದುವರೋ ಅವರ ಅಧೀನದಲ್ಲಿ ಈ ಭೂಮಿಯು ಇರುತ್ತಿತ್ತು.

ಮೇರೆಯಾಗಿ ಕೊಪ್ಪಳ ತಾಲೂಕಿನ ಪಶ್ಚಿಮ ಭಾಗ ಮತ್ತು ಯಲಬುರ್ಗಿ ತಾಲೂಕಿನ ಕುಕನೂರು ಪ್ರದೇಶವು ಕ್ರಮವಾಗಿ ಪುಲಿಗೇರಿ ಮತ್ತು ಬೆಳ್ವಲನಾಡಿಗೆ ಸೇರಿದ್ದವು. ಪ್ರಾಚೀನ ಆಡಳಿತ ವಿಭಾಗಗಳಾದ ಕರಡಿಕಲ್ಲು-೩೦೦, ಮೊರಟ-೩೦೦ಗಳು ಎಡೆಯೊರೆ ನಾಡಿನಲ್ಲಿ ಸಮಾವೇಷಗೊಂಡಿದ್ದರೆ, ಯರಂಬರ್ಗೆಯ ಸಿಂಧರು ಕೆಳವಾಡಿ-೩೦೦ ಮತ್ತು ಕುಕ್ಕನೂರು-೩೦ನ್ನು ಆಳುತ್ತಿದ್ದರು.

ರಾಯಚೂರು, ಸಿರವಾರ, ಮೊರಟ, ಮಸ್ಕಿ, ನವಿಲೆ, ಕರಡಿಕಲೆ, ಒಳಗಾನೂರು, ಮುದಗಲ್ ಮೊದಲಾದವು ಎಡೆದೊರೆ ನಾಡಿನ ವ್ಯಾಪ್ತಿಗೊಳಪಟ್ಟಿದ್ದರೆ, ಯಲಬುರ್ಗವು ಕುಕ್ಕನೂರು ೩೦ರ ವ್ಯಾಪ್ತಿಗೊಳಪಟ್ಟಿದ್ದವು. ಪಿ. ಎಂ ಜ್ಯೋಶಿಯವರು ರಾಯಚೂರು ದೋ-ಅಬ್ ಎಂಬುದನ್ನು ಪೂರ್ವದಲ್ಲಿ ಕೃಷ್ಣ ಮತ್ತು ತುಂಗಭದ್ರ ನದಿಗಳ ಸಂಗಮ ಸ್ಥಾನದಿಂದ ಪಶ್ಚಿಮದಲ್ಲಿ ಮುದುಗಲ್ ಕೋಟೆಯವರೆಗಿನ ವ್ಯಾಪ್ತಿಗೊಳಪಟ್ಟ ಈ ಎರಡೂ ನದಿಗಳ ಮಧ್ಯದ ಪ್ರದೇಶ ಎಂಬುದಾಗಿ ಗುರುತಿಸುತ್ತಾರೆ.

ರಾಯಚೂರು ಜಿಲ್ಲಾ ಪ್ರದೇಶವು ಮೊದಲಿನಿಂದಲೂ ಎಲ್ಲಾ ರಾಜ ಮನೆತನಗಳ ಗಮನವನ್ನು ಸೆಳೆದ ಪ್ರದೇಶವಾಗಿದೆ. ರಾಯಚೂರು, ಮುದುಗಲ್, ಆನೆಗುಂದಿ ಕೋಟೆಗಳು ಮೊದಲಿನಿಂದಲೂ ಸೈನಿಕ ಚಟುವಟಿಕೆಯ ಕೇಂದ್ರಗಳಾಗಿದ್ದವು. ಮಧ್ಯಯುಗದಲ್ಲಿ ಅಂದರೆ

ವಿಜಯನಗರ ಕಾಲದಲ್ಲಿ ರಾಯಚೂರು ಕೋಟೆಯನ್ನು ಒಳಗೊಂಡಂತೆ ಈ ಪ್ರದೇಶವು ಮಹತ್ವ ಪಡೆಯಲು ಈ ಕೆಳಗಿನ ಅಂಶಗಳು ಕಾರಣವಾಗಿದ್ದವು. ವಿಜಯನಗರವು ತುಂಗಭದ್ರಾ ನದಿಯ ದಕ್ಷಿಣದಲ್ಲಿ ರಾಜಧಾನಿಯನ್ನು ಹೊಂದಿ ಅಸ್ತಿತ್ವಕ್ಕೆ ಬಂದಿತು.

ಇದೇ ಕಾಲಾವಧಿಯಲ್ಲಿ ಕಲಬುರ್ಗಿಯನ್ನು (ಗುಲ್ಬರ್ಗಾ) ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಬಹುಮನಿ ರಾಜ್ಯವು ವಿಜಾಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅಧಿಕಾರಕ್ಕೆ ಬಂದಿತು.

ಡೋಮಿಂಗೋ ಫೆಸನು ವಿಜಯನಗರಕ್ಕೆ ಭೇಟಿಕೊಟ್ಟ ಕಾಲದಲ್ಲಿ ಜನರು ಆನೆಗುಂದಿಯಿಂದ ವಿಜಯನಗರಕ್ಕೆ ಬರಲು ವೃತ್ತಾಕಾರದ ಬುಟ್ಟಿಗಳನ್ನು ಉಪಯೋಗಿಸಿ ಅವುಗಳ ಸಹಾಯದಿಂದ ನದಿಯನ್ನು ದಾಟುತ್ತಿದ್ದ ಬಗ್ಗೆ ಉಲ್ಲೇಖವಿದೆ. ಆಗ ವಿಜಯವಿಠ್ಠಲ ದೇವಾಲಯದ ಎದುರುಗಡೆ ಕಂಡು ಬರುವ ಕಲ್ಲಿನ ಸೇತುವೆ ಇರಲಿಲ್ಲವೆಂದೂ ಅದು ನಂತರದ ಕಾಲದ ರಚನೆ ಎಂದು ರಾಬರ್ಟಸಿವೆಲ್‌ರು ಅಭಿಪ್ರಾಯ ಪಡುತ್ತಾರೆ.

ಈ ಸೇತುವೆಯು ರಕ್ಕಸಗಿ-ತಂಗಡಗಿ ಕಾಳಗಕ್ಕಿಂತ ಮೊದಲಿನ ಕೆಲವು ವರ್ಷಗಳಲ್ಲಿ ರಾಮರಾಯನಿಂದ ನಿರ್ಮಿಸಲ್ಪಟ್ಟಿತ್ತೆಂದು ಮತ್ತು ಈ ಸೇತುವೆಯ ಮೂಲಕವೇ ರಕ್ಕಸಗಿ-ತಂಗಡಗಿ ಕಾಳಗದಲ್ಲಿ ಜಯಸಾಧಿಸಿದ ಷಾಹಿ ಸೈನ್ಯಗಳು ತುಂಗಭದ್ರಾ ನದಿಯನ್ನು ದಾಟಿದವು ಎಂದು ಹೆನ್ರಿ ಹೆರಾಸರವರು ಹೇಳುತ್ತಾರೆ. ಒಂದು ವೇಳೆ ಬಹುಮನಿ ಅಥವಾ ಆದಿಲ್‌ಷಾಹಿಗಳು ತುಂಬಭದ್ರಾ ನದಿಯತ್ತ ಧಾವಿಸಿದರೆ ಅವರು ಅಷ್ಟು ಸರಳವಾಗಿ ವಿಜಯನಗರವನ್ನು ಪ್ರವೇಶಿಸಲು ಅನುಕೂಲವಾಗಬಾರದೆಂಬ ಕಾರಣಕ್ಕಾಗಿ ಈ ಕಲ್ಲಿನ ಸೇತುವೆ ಅಷ್ಟು ಪೂರ್ವದಲ್ಲಿ ರಚನೆಗೊಂಡಿರಲಿಕ್ಕಿಲ್ಲ.

ಈ ಎಲ್ಲಾ ಹಿನ್ನೆಲೆಯಲ್ಲಿ ವಿಜಯನಗರ ಸಾಮ್ರಾಜ್ಯವು ರಾಯಚೂರು ಜಿಲ್ಲಾ ಪ್ರದೇಶವನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಂಡು ಅದನ್ನು ತಡೆ ಪ್ರದೇಶವನ್ನಾಗಿ ಉಪಯೋಗಿಸಿತ್ತು. ಏಕೆಂದರೆ ಈ ಎರಡು ರಾಜ್ಯ ಅಥವಾ ನಾಡಿನ ಅಂತಃಸತ್ವ

ಅಡಕವಾಗಿರುವುದು ಅದರ ಸಾಂಸ್ಕೃತಿಕ ಜೈವಿಕ ನೆಲೆಗಟ್ಟನ್ನು ಆಧರಿಸಿರುತ್ತದೆ. ಮಾನವ ನಾಗರಿಕ ನೆಲೆಗಟ್ಟನ್ನು ಭದ್ರಪಡಿಸಿಕೊಂಡ ನಂತರ ಜೈವಿಕ ಆಯಾಮವು ವಿಸ್ತಾರವಾಗುತ್ತ ನಡೆಯಿತು. ನದಿ ಸಂಸ್ಕೃತಿಯ ಅಂಚಿನಲ್ಲಿ ಬದುಕನ್ನು ಆರಂಭಿಸಿದ.

ಕೃಷಿಯನ್ನು ಜೀವನೋಪಾಯಕ್ಕೆ ಪ್ರಮುಖ ಆಧಾರವಾಗಿಟ್ಟುಕೊಂಡು ನೆಲೆನಿಂತನು. ಬದುಕಿನುದ್ದಕ್ಕೂ ಉಂಟಾಗುವ ಪ್ರಾಕೃತಿಕ ವೈಪರಿತ್ಯಗಳಿಗೆ ಕಾರಣ ಪುರುಷನಿರಬೇಕೆಂಬ ನಂಬಿಕೆಯನ್ನು ಹೊಂದಿದ ಜನಪದರು ತಾವು ಅನುಭವಿಸುವ ಪ್ರಕೃತಿಯ ಘಟನೆ, ಪ್ರಕೋಪಗಳನ್ನು ದೇವನುಂಟು ಮಾಡುತ್ತಾನೆಂದು ನಂಬಿದರು, ರಕ್ಷಣೆಗೋಸ್ಕರ ನಿಸರ್ಗದ ಚರಾಚರ ವಸ್ತುಗಳನ್ನು ಆರಾಧಿಸಿದರು. ಇಂಥ ಆರಾಧನಾ ಸಂದರ್ಭಗಳಲ್ಲಿ ಕೆಲವರು ಜನಪದ ಸಾಹಿತ್ಯದ ವೈವಿಧ್ಯಮಯವಾದ ಕಲೆಗಳು ಪ್ರದರ್ಶಿಸಲ್ಪಟ್ಟವು.

ಹೈದ್ರಾಬಾದ್ ಕರ್ನಾಟಕವು ೧೯೪೮ರವರೆಗೂ ನಿಜಾಂಶಾಹಿ ಆಳ್ವಿಕೆಯಲ್ಲಿ ತತ್ತರಿಸಿದ್ದರೂ ಇಲ್ಲಿಯ ಜನಪದ ಜೀವನ, ಕಲೆ ಸಮೃದ್ಧವಾಗಿದೆ. ಈ ಭಾಗದ ಜನಪದ ಸಾಹಿತ್ಯವನ್ನು ಪ್ರತ್ಯೇಕಿಸಲು ಕಾರಣಗಳಿವೆ, ಇಲ್ಲಿಯ ಜನರ ಮಾತೃಭಾಷೆಯ ಮೇಲೆ ಉರ್ದು, ತೆಲುಗು, ಹಿಂದಿ ಭಾಷೆಗಳ ಪ್ರಭಾವವಿದೆ. ಕಲಾವಿದರ ಶೈಲಿ, ಸಾಹಿತ್ಯ, ನೃತ್ಯ, ತಾಳ, ವಾದ್ಯಗಳ, ಪರಿಕರಗಳು, ವೇಷಭೂಷಣಗಳಲ್ಲಿ -------- ವೈವಿಧ್ಯತೆಯನ್ನು ಕಾಣಬಹುದಾಗಿದೆ.

ಪ್ರಾದೇಶಿಕ ಭಿನ್ನತೆಯಿಂತ ಜನಪದ ಸಾಹಿತ್ಯದ ಹೊಸ-ಹೊಸ ರೂಪಗಳು ದೊರಕುತ್ತವೆ. "ಜೀವನದ ಸಾಹಿತ್ಯ ಬರವಣಿಗೆಯ ಅಭಾವದ ಮೂಲಕ ಭೇದಗಳನ್ನು ಆಳಿಸಿಕೊಂಡು ಪ್ರಾಂತ-ಭೇದಗಳನ್ನು ಉಳಿಸಿಕೋಳ್ಳುತ್ತದೆಂಬ ಕಲಬುರ್ಗಿಯವರ ವಿಚಾರದಂತೆ ಪ್ರಾದೇಶಿಕ ಭಿನ್ನತೆಯನ್ನು ಗುರುತಿಸಬಹುದಾಗಿದೆ.

ಜನಪದ ಕಲೆಗಳ ವಿವರಗಳೆಂದರೆ ಜನಪದ ಜೀವನ ಸಂಸ್ಕ್ರತಿಗಳ ವಿವರಗಳೆ ಆಗಿವೆ. ಕುರಿತೋದದಯಂ ಕಾವ್ಯ ಪ್ರಯೋಗ ಪರಿಮಿತ ಮತಿಗಳೆಂಥೂ' ಕವಿರಾಜ ಮಾರ್ಗಕಾರ ಕರೆದಿರುವಂತೆ ಜನಪದ ಸಾಹಿತ್ಯವನ್ನು ಉಳಿಸಿಕೊಟ್ಟ ದುಡಿಯುವ ವರ್ಗವು ಅಕ್ಷರಾಭ್ಯಾಸವಿಲ್ಲದೆ

ಅನುಭಾವದ ಮೂಲಕ ನಿತ್ಯ ಜೀವನದಲ್ಲಿ ಕಂಡುಂಡ ವಸ್ತುಗಳನ್ನೆ ಕಾವ್ಯವೆನಿಸಿದ ಜನಪದ ಸಾಹಿತ್ಯವು ಬಾಯಿಂದ-ಬಾಯಿಗೆ ಹರಿದು ಬಂದು ನಮ್ಮ ಸಂಸ್ಕೃತಿಯನ್ನು ಬೆಳೆಸುವ ವಾಹಕಗಳಾಗಿದದ್ದಾರೆ.

ನಮ್ಮ ಜಿಲ್ಲೆಯಲ್ಲಿ ದೊರೆಯುವ ಜಾನಪದ ಕಲೆಗಳನ್ನು ಸ್ಥೂಲವಾಗಿ ನೋಡಲಾಗಿದೆ.ಪ್ರತಿ ಊರಲ್ಲಿಯೂ ಜಾನಪದ ಕಲಾವಿದರು ಅಸಂಖ್ಯಾತರಾಗಿದ್ದು ಅವರೆಲ್ಲರ ಪರಿಚಯವನ್ನು ಮಾಡಲು ಸಾಧ್ಯವಾಗಲ್ಲೆಂಬುದನ್ನ (ಈ ಲೇಖನದ ಮಿತಿಯಿಂದಾಗಿ ಪೂರ್ಣ ಪರಿಚಯ ನೀಡಲಾಗುತ್ತಿಲ್ಲ) ತಿಳಿಸುತ್ತೇನೆ.

ಜನಪದ ಕಲೆಗಳಾದ ಬಯಲಾಟ(ದೊಡ್ಡಾಟ), ಸಣ್ಣಾಟ, ದಪ್ಪಿನಾಟ, ತೊಗಲು ಬೊಂಬೆಯಾಟ..ಮುಂತಾದ ರಂಗ ಪ್ರದರ್ಶನ ಕಲೆಗಳು, ಹಾಗೂ ಸಾಂರ್ದಭಿಕ ಕಲೆಗಳಾದ ಸುಗ್ಗಿಹಾಡು(ಹಂತಿಪದ), ಕೋಲಾಟದ ಹಾಗೂ ರಿವಾಯತ್ ಪದಗಳು, ಲಾವಣಿಪದ, ಗೀಗೀಪದ, ಗೊಂದಲಿಗೇರ ಕಥನ, ಗೀತೆಗಳು.

ಅಧ್ಯಾಯ-೩

ರಾಯಚೂರಿನ ವಸ್ತು ಸಂಗ್ರಹಾಲಯದ ಸ್ಥಾಪನೆಯ ಹಿನ್ನಲೆ.

ಅಧ್ಯಾಯ–೩

ರಾಯಚೂರಿನ ವಸ್ತು ಸಂಗ್ರಹಾಲಯದ ಸ್ಥಾಪನೆಯ ಹಿನ್ನಲೆ.

ಕರ್ನಾಟಕದ ಕಲೆ ಸಂಸ್ಕೃತಿಯ ಹಿಂದೆ ಸಾಕಷ್ಟು ಜನರ ಪರಿಶ್ರಮ ಅಡಗಿದೆ. ಸಾವಿರಾರು ಕಲಾವಿದರು ನಾಡಿನ ಕಲೆ ಸಂಸ್ಕೃತಿಯ ಸಲುವಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟು ಕೆಲಸ ಮಾಡಿದ್ದಾರೆ. ಈ ಹಿನ್ನಲೆಯಲ್ಲಿ ಲಲಿತ ಕಲೆಗಳ ಪಾತ್ರ ಬಹುಮುಖ್ಯವಾಗಿದೆ ಎನ್ನಬಹುದು. ಯಾವುದೇ ಒಂದು ಪರಂಪರೆಯ ಹಿಂದೆ ಆ ಸಂಸ್ಕೃತಿಯ ತಾಯಿ ಬೇರು ಇರುವುದನ್ನು ಗಮನಿಸಲಾಗುತ್ತದೆ. ಚಿತ್ರ, ಶಿಲ್ಪಕಲೆ, ಸಂಗೀತ, ನಾಟಕ, ನೃತ್ಯ ಮುಂತಾದ ಕಲಾಪ್ರಕಾರಗಳಲ್ಲಿ

ಇಂಥ ಸಂಸ್ಕೃತಿಯನ್ನು ಗುರುತಿಸಲಾಗುತ್ತದೆ. ಈ ಪರಂಪರೆಯ ಹಿಂದೆ ನಿಂತು ದುಡಿದ ಕಲಾವಿದರ ಕೊಡುಗೆ ಅಮೂಲ್ಯವಾಗಿದೆ.

ಸಂಸ್ಕೃತಿಯ ಆಶಯಗಳು ಮುಂದಿನ ಪಿಳಿಗೆಗೂ ತಲುಪಬೇಕಾದರೆ ಹಿರಿಯ ಕಲಾವಿದರ ದಾಖಲೆಗಳು, ಕಲಾಕೃತಿಗಳು ನಮ್ಮ ಯುವ ಕಲಾವಿದರಿಗೆ ಅಧ್ಯಯನಕ್ಕಾಗಿ ಸಿಗುವಂತಾಗಬೇಕು. ವಿದೇಶಗಳಲ್ಲಿ ಈ ಬಗ್ಗೆ ತುಂಬಾ ಜಾಗೃತಿವಹಿಸಿ ಸಾಕಷ್ಟು ಕಲಾಸಾಹಿತ್ಯಗಳ ಪ್ರಕಟಣೆಯಾಗಿರುವುದನ್ನು ಕಾಣುತ್ತೇವೆ. ಗತಿಸಿ ಹೋದ ಕಲಾವಿದರ ಬಗ್ಗೆ ಹೇರಳವಾಗಿ ಮಾಹಿತಿಗಳು ಲಬ್ಯವಾಗುತ್ತವೆ. ಆದರೆ ನಮ್ಮಲ್ಲಿ ಇಂಥ ಪರಂಪರೆಗೆ ಈಗಷ್ಟೇ ಚಾಲನೆ ಸಿಕ್ಕಿದೆ ಎನ್ನಬಹುದು. ಈ ನಿಟ್ಟಿನಲ್ಲಿ ನಮ್ಮ ದೇಶದಲ್ಲಿಯ ಕಲಾಸಂಗ್ರಹಾಲಯಗಳು, ಚಿತ್ರಶಾಲೆಗಳು, ಸ್ತೂಪಗಳು, ಗುಹಾಂತರ ದೇವಾಲಯಗಳು, ಮನೆ, ಮಠ, ಅರಮನೆಗಳು ಸಂಸ್ಕೃತಿಯನ್ನು ಹುಡುಕುವ ಆಕರ ಸಾಮಗ್ರಿಗಳಾಗಿದ್ದವು.

ಈ ಪರಂಪರೆಯಲ್ಲಿ ನಡೆದು ಬಂದ ಹೆಜ್ಜೆಯ ಗುರುತುಗಳು ಇಲ್ಲಿ ಕಾಣಲು ಸಿಗುತ್ತಿದ್ದವು. ಇಂಥ ಕಾರ್ಯವನ್ನು ಈಗ ಮೂಲಕ ವಸ್ತು ಸಂಗ್ರಹಾಲಯಗಳ ಅಧ್ಯಯನ ಕೈಗೊಂಡು ಸಂಗ್ರಹಿತ ಸಮಗ್ರ ವಸ್ತುಗಳನ್ನು ಅಧ್ಯಯನ ಮಾಡುವ ಅವಶ್ಯಕತೆ ಈಗಿನ ಅತ್ಯಂತ ಮಹತ್ವದ ಅಂಶವಾಗಿದೆ.

"ಮ್ಯೂಸಿಯಂ" ಪದಕ್ಕೆ ವಿವರಣೆಯನ್ನು ಕೊಡುವುದು ತುಂಬಾ ಕಠಿಣವಾಗಿದೆ, ಈ ಶಬ್ದ ಗ್ರಿಕ್ ಕಲಾಭಿಮಾನಿ ದೇವತೆಗಳ ಗರ್ಬಗುಡಿ (Santuary of muses) ಎಂಬ ಅರ್ಥವನ್ನು ಸೂಚಿಸುವ ಗ್ರೀಕ ಶಬ್ದದಿಂದ ಉತ್ಪತಿಯಾಗಿದೆ. ಇದಕ್ಕೆ ಕಾರಣ ಅದರ ಅಗಾಧ ವ್ಯಾಪ್ತಿ ಮತ್ತು ವೈವಿಧ್ಯಮಯ ಲಕ್ಷಣ. ಈ ಕಲಾಭಿಮಾನಿ ದೇವತೆ ಎಲ್ಲಾ ವಿದ್ಯೆ ಮತ್ತು ಕಲೆಗಳ ಅಧಿದೇವತೆ ಶೈಕ್ಷಣಿಕ ಅನುಸಂಧಾನಕ್ಕೆ ಸಂಬಂಧಿಸಿದ ಅದರ ಲಕ್ಷಣ ಒಂದಲ್ಲ ಒಂದು ರೂಪದಲ್ಲಿ ಇಂದು ವಸ್ತು ಸಂಗ್ರಹಲಾಯಗಳಲ್ಲಿ ಉಳಿದುಕೊಂಡು ಬಂದಿದೆ.

ಇಷ್ಟಾದರೂ ಆಧುನಿಕ ವಸ್ತುಸಂಗ್ರಹಾಲಯದ ಪರಿಕಲ್ಪನೆಯಲ್ಲಿಯೆ ಗಮನಾರ್ಹವಾದ ಬದಾಲಾವಣೆಯೊಂದು ನಡೆದಿದೆ. ಬಳಕೆಯಿಂದ ಹೊರತಾದ ಅನುಪಯುಕ್ತ ವಸ್ತುಗಳ ಸಂಗ್ರಹವೇ ವಸ್ತು ಸಂಗ್ರಹಾಲಯವೆಂದು ಇಂದು ಭಾವಿಸುವಂತಿಲ್ಲ. ವಸ್ತು ಸಂಗ್ರಹಾಲಯಗಳು ನಿರ್ದಿಷ್ಟ ಪ್ರದೇಶದ ಅಥವಾ ಸಮುದಾಯದ ಕಲೆ ಮತ್ತು ಸಂಸ್ಕೃತಿಗಳನ್ನು ಉಳಿಸಿಕೊಂಡು ಬರುವುದರಲ್ಲಿ ಮಾತ್ರವಲ್ಲದೆ, ಮಾನವನ ಸೃಜನಶಿಲ ಮತ್ತು ಪ್ರಕೃತಿಯ ಮೇಲಣ ನಿಂಯತ್ರಣದ ಬಗ್ಗೆ ಮೂಲಭೂತ ಸಾಕ್ಷ್ಯಗಳನ್ನು ಸಾದರ ಪಡಿಸುವುದರ ಮೂಲಕ ಮಾನವತೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಉತ್ಥಾನಕ್ಕೆ ನೇರವಾಗುವುದರಲ್ಲೂ ಜೀವಂತ ಪಾತ್ರವಹಿಸುವುದು. ಇದು ವಸ್ತು ಸಂಗ್ರಹಾಲಯಗಳ ಉದ್ದೇಶವಾಗಿದೆ. ಇಂತಹ ವಸ್ತುಗಳನ್ನು ಸಂರಕ್ಷಿಸುವುದು ಅವು ಮಾಡಬೇಕಾಗಿರುವ ಅತ್ಯಂತ ಅವಶ್ಯಕ ಕಾರ್ಯಗಳಲ್ಲಿ ಒಂದೆಂಬುದೇನೋ ನಿಜ, ಆದರೆ ಇಂದಿನ ಸಾಮಾಜಿಕ ಅನುಕೂಲಕರವಾಗುವ ರೀತಿಯಲ್ಲಿ ಈ ವಸ್ತುಗಳನ್ನು ಬಳಸುವುದೇ ಆಧುನಿಕ ಯುಗದ ವಸ್ತು ಸಂಗ್ರಹಾಲಯಗಳ ಹೊಣೆಯಾಗಿದೆ.

ವಸ್ತುಗಳ ಭೌತಿಕ ರೂಪಕ್ಕಿಂತ ಅವುಗಳ ವಾಸ್ತವಿಕ ಮೌಲ್ಯಗಳೇ ಪ್ರದಾನವಾಗಿ ಪರಿಗಣಿತವಾಗಿದೆ. ಯಾವುದೇ ವಸ್ತುವೂ ಅದು ಎಷ್ಟೇ ಮುಖ್ಯವಾದರು ಅದರ ಮೂಲ ಹಿನ್ನಲೆಯಲ್ಲಿ, ಅದನ್ನು ತೀರಿಸಿದ ಹೊರತು ಅದು ಪರಿಪೂರ್ಣವೆನಿಸುವುದಿಲ್ಲ, ತತ್ಪರಿಣಾಮವಾಗಿ ವಸ್ತು ಸಂಗ್ರಹಲಯಗಳಲ್ಲಿ ಇಂದು ವಸ್ತುಗಳ ಸಂಗ್ರಹ ಹಾಗೂ ಸಂರಕ್ಷಣೆ ಕಾರ್ಯಗಳಾಗಿ ಅವುಗಳ ಶೈಕ್ಷಣಿಕ ಗುಣ ಪ್ರಾಧ್ಯನ್ಯ ಪಡೆಯುತ್ತಿದೆ.

ಪ್ರದರ್ಶನಕ್ಕಿಟ್ಟಿರುವುದು ನಮ್ಮ ಕಥೆಯನ್ನು ತಾವೇ ಹೇಳುವಂತೆ ಜೋಡಿಸಲಾಗಿರುತ್ತದೆ. ಒಳ್ಳೆಯ ಯೋಜಿತ ವಸ್ತುಸಂಗ್ರಹಾಲಯ ತನ್ನ ವಸ್ತುಗಳ ಸಂಗತಿವಾದ ಕಥೆಯನ್ನು ತಾವೇ ಹೇಳಲು ಪ್ರಯತ್ನಿಸುತ್ತದೆ ಮತ್ತು ನೇರ ಸೂಚನೆಗಳನ್ನು ಕೊಡುವ ಮೂಲಕ ಸಂದರ್ಶಕನಿಗೆ ನೋಡುವ ಮತ್ತು ಅನುಭವಿಸುವ ಮೂಲಕ ಜ್ಞಾನವನ್ನು ಬೇಳಸಿಕೊಳ್ಳಲು ಉತ್ತೇಜನ ನೀಡುತ್ತದೆ.

ಈ ಒಂದು ಗುರಿಯನ್ನು ಸಾದಿಸಲು ಸುಗಮವಾಗುವ ದಾರಿಯ ವಸ್ತು ಸಂಗ್ರಹಾಲಯಗಳು ಒಂದೆಡೆ ಗತಕಾಲದ ವಸ್ತುಗಳನ್ನು ಸಂಗ್ರಹಿಸಿ, ಸಂರಕ್ಷಿಸಿ ಅವನ್ನು ವ್ಯವಸ್ಥಿತ ರೀತಿಯಲ್ಲಿ ನೀರೂಪಣೆ ಮಾಡಬೇಕು ಮತ್ತು ಜ್ಞಾನವನ್ನು ಬೇಳಸಿಕೊಳ್ಳಲು ಉತ್ತೇಜನ ನೀಡುತ್ತದೆ ಮತ್ತು ಇನ್ನೊಂದೆಡೆ ಜನತೆಗೆ ಮನರಂಜನೆಯನ್ನು ಜ್ಞಾನಪ್ರಕಾಶವನ್ನು ನೀಡಬೇಕು.

ವಿದ್ವಾಸಂರೊಬ್ಬರು ಅದರ ವ್ಯಾಪ್ತಿಯನ್ನು ಸೂಚಿಸುವಂತೆ ಸಂಗ್ರಹವಾಗಿ ಹೇಳಬೇಕೆಂದರೆ ಇಂದು ವಸ್ತುಸಂಗ್ರಹಾಲಯ, ವಸ್ತು ವಿಷಯಗಳ ಭೋಧನಾ ಶಾಲೆ ಸಂಸ್ಕ್ರತಿಕ ಆನಂದ ಪಡೆಯುವ ತಾಣ ಪ್ರೇಕ್ಷಕನು ತನ್ನ ದಿನನಿತ್ಯದ ದುಡಿತದ ಬಳಲಿಕೆ ಅಥವಾ ಆಂತಕಗಳಿಂದ ವಿರಾಮ ಪಡೆಯುವ ಹಾಗೂ ವಿಶಾಲ ಜ್ಞಾನ ದಿಗಂತಗಳನ್ನು ಕಾಣುವ ಸ್ಥಳ. ಅಲೆಗ್ಸಾಂಡ್ರಿಯ ಬಾಲೆಮಿಯ ಅದ್ಬುತ ಸಂಗ್ರಹವನ್ನು ಅದರ ಸರ್ವವ್ಯಾಪಕ ಲಕ್ಷಣದಿಂದಾಗಿ ಒಂದು ಸಂಶೊಧನಾ ಸಂಸ್ಥೆಯೊಂದೇ ವಿಶ್ವವಿದ್ಯಾನಿಲಯವೇಂದೆ ಕರೆಯಬಹುದಾದರು, ಆಧುನಿಕ ಸಂದರ್ಭದಲ್ಲಿ ಅದನ್ನು ವಸ್ತು ಸಂಗ್ರಹಹಾಲಯವೇಂದು ಕರೆಯುವಂತಿಲ್ಲ.

ಐರೋಪ್ಯ ಧನಿಕರ ಖಾಸಗಿ ಬೀರುಗಳನ್ನು ತುಂಬಿರುವ ಅಮೂಲ್ಯ ನಿಧಿ ಎನಿಸಿಕೋಂಡ ಹಲವಾರು ಸಂಗ್ರಹಗಳಾಗಲಿ ಅಥವಾ ಮದ್ಯಯುಗದ ಪ್ರತಿಷ್ಠತರು ತಮ್ಮ ಸಿರಿವಂತಿಕೆಯನ್ನು ಜ್ಞಾನವನ್ನು ಅಥವಾ ಉತ್ತಮ ಕಲಾಭಿರುಚಿಯನ್ನು ತೊರಿಸಲು ಸಂಗ್ರಹಿಸಿ ತಮ್ಮ ಭವನಗಳನ್ನು ಅಲಂಕರಿಸಿರುವ ಅತ್ಯುತ್ತಮ ಕಲಾಸಂಗ್ರಹಗಳು, ಆಧುನಿಕ ವಸ್ತುಸಂಗ್ರಹಾಲಯಗಳ ವರ್ಗಕ್ಕೆ ಸೇರುವುದಿಲ್ಲ ಅವು ಸಂಗ್ರಹಕಾರರು ಸಮಾಜದಲ್ಲಿ ಗಳಿಸಿದ್ದ ಅಂತಸ್ತನ್ನು ಆ ವ್ಯಕ್ತಿಗಳ ಸೌಂದರ್ಯಾನುಭೂತಿಯನ್ನು ತೋರಿಸುತ್ತದೆ.

ಅವನು ಯಾವುದೇ ವಿಶೇಷ ಸಂದರ್ಭದಲ್ಲಿ ತಮ್ಮ ಮಿತ್ರರಿಗೆ ಹಾಗೂ ವಿಶೇಷ ಆಹ್ವಾನಿತರಿಗೆ ಮಾತ್ರ ತೋರಿಸಲಾಗುತ್ತಿತ್ತು.

ಮೇಲಾಗಿ ಈ ಸಂಗ್ರಹಗಳು ಸಾಮಾನ್ಯ ಜನರಿಗಾಗಿ ಇರುವುದಿಲ್ಲ ಎರಡನೆಯದಾಗಿ ಇವುಗಳನ್ನು ಸಂಗ್ರಹಿಸುವಾಗ ಯಾವುದೇ ಒಂದು ನಿರ್ದಿಷ್ಟ ಕಾರ್ಯ ನೀತಿಯನ್ನು

ಅನುಸರಿಸಿರುವುದಿಲ್ಲ. ಹಿಂದಿನ ಕಾಲದ ವಸ್ತು ಸಂಗ್ರಹಾಲಯಗಳಲ್ಲಿ ಸಂಗ್ರಹವಸ್ತುಗಳ ಬಗ್ಗೆ ಅಸ್ಪಷ್ಟ ಪರಿಕಲ್ಪನೆ ಮತ್ತು ಜನಸಾಮಾನ್ಯರಿಂದ ಕಲಾವಸ್ತುಗಳನ್ನು ಮುಚ್ಚಿಕೊಡುವ ಧೋರಣೆಗಳು ದೀರ್ಘಕಾಲದವರೆಗೆ ಉಳಿದು ಬಂದಿದ್ದವು.

ಈ ವಸ್ತುಸಂಗ್ರಹಗಳಿಗೆ ಬಿಳಿಯ ಟೈಯನ್ನು ಎತ್ತರವಾದ ಹ್ಯಾಟನ್ನು ಧರಿಸಿದ ವ್ಯಕ್ತಿಗಳು ಮಾತ್ರ ಹೋಗಬಹುದಿತ್ತು.

೧೮ ಮತ್ತು ೧೯ನೆಯ ಶತಮಾನಗಳಲ್ಲಿಯೂ ಸಹ ವಸ್ತುಸಂಗ್ರಹಾಲಯಗಳ ಸಾಮಾನ್ಯವಾಗಿ ಗಣ್ಯರು,ಪಂಡಿತರು ಮತ್ತು ಕಲಾದಿಗ್ಗರಿಗೆ ಮಾತ್ರ ಸೀಮಿತವಾಗಿದ್ದವು, ಈ ರೀತಿಯಲ್ಲಿ ಮೊದಲ ಮಹಾಯುದ್ಧಕ್ಕೆ ಮೊದಲು ಸಾಧ್ಯವಾದಷ್ಟು ಸಾಮಾನ್ಯ ಜನತೆಗೆ ತೆರೆದಿರಬೇಕಾಗಿದ್ದ ವಸ್ತು ಸಂಗ್ರಹಾಲಯಗಳು ಸಮಾಜದ ಪ್ರತಿಷ್ಠಿತ ವ್ಯಕ್ತಿಗಳಿಗೆ ವಿದ್ಯಾವಂತರಿಗೆ ಮಾತ್ರ ಮೀಸಲಾಗಿದ್ದವು.

ಭಾರತದ ವಸ್ತು ಸಂಗ್ರಹಾಲಯಗಳ ಮೂನ್ಸೂಚಕಗಳಾಗಿ ಕೂತೂಹಲಕರವಾದ ಖಾಸಗಿ ಸಂಗ್ರಹಗಳು ಹಾಗೂ ರಾಜರ ಕಲೆ ಮತ್ತು ಪುರಾತತ್ವ ನಿವೇಶನಗಳ,ಮತ್ತು ಉತ್ಖನನಗಳ ಮಾದರಿಗಳಾಗಿ ಸಂಗ್ರಹಿಸಿದ ಪುರಾತತ್ವ ವಸ್ತುಗಳ ಸಂಗ್ರಹಗಳೇ ಮುಖ್ಯವಾದವು ಪುರಾತತ್ವ ಶೋಧನೆಯಲ್ಲಿ ದೊರೆತ ವಸ್ತುಗಳನ್ನೇ ಮಾದರಿಗಾಗಿ ಸಂಗ್ರಹಿಸುವುದು ಮುಖ್ಯವಾದಿತು.ಈ ಸಂಗ್ರಹಗಳನ್ನೊಳಗೊಂಡ ವಸ್ತುಸಂಗ್ರಹಾಲಯಗಳು ಇಂದು ಸಾಮಾನ್ಯ ಜನತೆಯ ಪಾಲಿಗೆ ಅಜಾಯಬ್ ಘರ್ ಅಥವಾ ಅದ್ಭುತ ವಿಗ್ರಹಗಳಾಗಿವೆ.

ಆಧುನಿಕ ವಸ್ತು ಸಂಗ್ರಹಾಲಯಗಳ ಬೆಳವಣಿಗೆಯು ಇತಿಹಾಸವನ್ನು ೩೦೦ ವರ್ಷಗಳಷ್ಟು ಹಿಂದಿನಷ್ಟೆ ಗುರುತಿಸಬಹುದಾಗಿದೆ.ಸುಮಾರಾಗಿ ೧೯ನೇ ಶತಮಾನದ ಮದ್ಯಭಾಗಕ್ಕೆ ೧೯ನೆಯ ಶತಮಾನದ ಆದಿಗೇ ಮದ್ಯ ಜನತಾ ವಸ್ತುಸಂಗ್ರಹಾಲಯದ ಹೊಸ ಕಲ್ಪನೆ ಐರೋಪ್ಯ ಸಮಾಜದಿಂದ ರೂಪಿತವಾಯಿತು.ಸಾಧ್ಯಾವಾದ ಎಲ್ಲ ಸಾಧನಗಳಿಂದಲೂ

ಜನತೆಗೆ ಶಿಕ್ಷಣವನ್ನೊದಗಿಸುವ ಭಾವನೆಯನ್ನು ಉಂಟುಮಾಡಿದ ಜ್ಞಾನೋದಯ ಯುಗದ ಸ್ಫೂರ್ತಿಯೇ ದ್ರಶ್ಯ ಶಿಕ್ಷಣದ ಬಗ್ಗೆ ವಿಕಸಿತ ದ್ರಷ್ಟಿ ಮೂಡಲು ಮೂಲಕಾರಣವಾಯಿತು.

೧೮ನೆಯ ಶತಮಾನದಲ್ಲಿ ಉಂಟಾದ ಸಾಂಸ್ಕೃತಿಕ ಅರಿವು ಮತ್ತು ಜ್ಞಾನದ ವಿಕಾಸವೇ ವಸ್ತುಸಂಗ್ರಹಾಲಯಗಳ ಬಗ್ಗೆ ಇದ್ದ ಮೂಲಭೂತ ದ್ರಷ್ಟಿ ಬದಲಾಗಲು ಕಾರಣವಾಯಿತು.ಖಾಸಗಿ ವಸ್ತುಸಂಗ್ರಹ ಉಪಯೋಗವು ಸಮಾಜದ ಎಲ್ಲ ವ್ಯಕ್ತಿಗಳಿಗೂ ದೊರೆಯಬೇಕೆಂಬ ಭಾವನೆ ನ್ಯಾಯಯುತವಾಗಿಯೇ ಮೂಡಿತು. ಈಜಿಪ್ತ್, ಪರ್ಷಿಯಾ, ಇಂಡಿಯಾ, ಚೀನಾ ಮೊದಲಾದ ಭವ್ಯನಾಗರೀಕತೆಯ ಬಗ್ಗೆ ನಡೆದ ಪುರಾತತ್ವ ಸಂಶೋಧನೆಗಳು ಪುರಾತನ ವಸ್ತುಗಳ ಬಗ್ಗೆ ಅಪೂರ್ವ ರಾಭಿರುಚಿಗಳನ್ನುಂಟು ಮಾಡಿದವು. ಜನಮನವು ತಮ್ಮ ಪೂರ್ವಜರ ಹುದುಗಿ ಹೋಗಿದ್ದು ಭವ್ಯತೆಯತ್ತ ಹರಿಯಿತು.ಈ ಸ್ಮಾರಕ ಶಿಲಾಶಾಸನಗಳು ಉನ್ನತ ಕಲಾವಸ್ತು,ಸಾಮಾನ್ಯವಾಗಿ ದೊರೆಯದ ಸಸ್ಯಗಳೂ ವ್ಯಕ್ತಿಗಳ ವೈಪರಿತ್ಯ ಅಥವಾ ಕುತೂಹಲಕಾರಕ ವಸ್ತುಗಳಾಗಿ ಮಾತ್ರ ಉಳಿಯಲಿಲ್ಲ.

ಸಾಮಾನ್ಯವಾಗಿ ಮಾನವನ ತಿಳುವಳಿಕೆಯ ದೃಷ್ಟಿಯಿಂದಲೂ ಅವು ಹೊಂದಿರುವ ಪ್ರಾಮುಖ್ಯವನ್ನು ಗುರುತಿಸ ತೊಡಗಿದರು. ಇದರಿಂದ ಖಾಸಗಿ ಸಂಗ್ರಹಕಾರಕ ಮನೋಭಾವದಲ್ಲಿ ಮಾರ್ಪಾಡಾಗಿ ಅವರು ತಮ್ಮ ವಸ್ತುಸಂಗ್ರಹಗಳನ್ನು ಸಾಮಾನ್ಯ ಪ್ರಜೆಗೆ ತೆರೆದಿಡಲು ಮೊದಲು ಮಾಡಿದರು.ಇದು ವಿಶ್ವದ ಆಧುನಿಕ ವಸ್ತುಸಂಗ್ರಹಾಲಯಗಳ ಇತಿಹಾಸದಲ್ಲಿ ಒದಗಿ ಬಂದ ಮಹಾಘಟನೆಯಾಗಿದೆ.

ಲಂಡನ್ನಿನ ಬ್ರಿಟಿಷ ಮ್ಯೂಸಿಯಂ ಸೇರಿದಂತೆ ಪ್ರಪಂಚದ ಕೆಲವು ದೊಡ್ಡ ಸಂಗ್ರಹಾಲಯಗಳು ಈ ಪರಿವರ್ತನ ಕಾಲದಲ್ಲಿ ಅಂಕುರಿಸಿದುದಾಗಿದೆ.೧೮ ಮತ್ತು ೧೯ನೆಯ ಶತಮಾನಗಳಲ್ಲಿ ವಸ್ತುಸಂಗ್ರಹಗಳು ಜನತೆಯ ಆಸಕ್ತಿಯನ್ನು ಜಾಗ್ರತೆಗೊಳಿಸಿದ್ದರೂ, ಪ್ರೇಕ್ಷಕರಲ್ಲಿ ಬಹುಪಾಲು ಅನುಕೂಲಸ್ಥ ಮತ್ತು ವಿದ್ಯಾವಂತ ವರ್ಗದವರೇ ಆಗಿದ್ದರು. ಆದರೆ ಈ ಶತಕದಲ್ಲಿ ವಸ್ತುಸಂಗ್ರಹಾಲಯಗಳಲ್ಲಿ ಸಾಧಿಸಿರುವ ತಾಂತ್ರಿಕ ಪರಿಣಿತಿಯ ಕೆಲವು ಅಂಶಗಳು ಗಮನಿಸುವಂತಹವಾಗಿದೆ.

ಇವುಗಳಲ್ಲಿ ಅತ್ಯಂತ ಮುಖ್ಯವಾದ ಸಾಧನೆಯೆಂದರೆ ವಸ್ತುಸಂಗ್ರಹಾಲಯದ ರೂಪರೇಷೆಗಳನ್ನು ಸಿದ್ದಪಡಿಸುವಾಗ ಅವರ ಮುಖ್ಯ ಉದ್ದೇಶವನ್ನು ಗಮನದಲ್ಲಿಟ್ಟುಕೋಳ್ಳುವ ವಿಚಾರದ ವಿಕಸನ.ಯಾವ ಗೋತ್ತುಗುರಿಯೂ ಇಲ್ಲದೆ ಆತ್ಮ ತೃಪ್ತಿಗಾಗಿ ಮನವಳಿಸಿದಂತೆ ಸಿಕ್ಕಿದ ಎಲ್ಲ ವಸ್ತುಗಳನ್ನು ಒಂದೆಡೆ ಕಲೆ ಹಾಕುತ್ತಿದ್ದ ಕಾಲ ಕೊನೆಗೊಂಡಿತು.

ಇಂದು ವಸ್ತುಸಂಗ್ರಹ ತತ್ವದ ನಿಕ್ರಷ್ಟತೆ ಪುರಾತತ್ವ ಶೋಧನೆ ಇತಿಹಾಸ ಮಾನವಶಾಸ್ತ್ರ ಕಲೆ ಮೊದಲಾದ ಹಲವು ವಿಧವಾದ ವಸ್ತು ಸಂಗ್ರಹಾಲಯಗಳ ಸ್ಥಾಪನೆಗೆ ದಾರಿ ಮಾಡಿಕೊಟ್ಟಿತು. ಇದರಲ್ಲಿ ಕಂಡುಬರುವ ಮತ್ತೊಂದು ಮುಖ್ಯ ಅಂಶವೆಂದರೆ ವಿಧಾನಗಳ ನಿರೂಪಣೆಯ ವರ್ಗದಲ್ಲಿ ಕಂಡುಬರುವ ಉತ್ತಮತೆ ನಿರ್ದಿಷ್ಟವಾದ ಸಂದೇಶವನ್ನು ಬಿತ್ತರಿಸುವಂತಹ ರೀತಿಯಲ್ಲಿ ವಸ್ತುಗಳ ಕ್ರಮಬದ್ಧ ಜೋಡಣೆ, ಅರ್ಥವತ್ತಾದ ಪ್ರದರ್ಶನ ಅತ್ಯಂತ ಮುಖ್ಯವೆಂದು ಪರಿಗಣಿಸಲಾಯಿತು.

"ವಸ್ತು ಸಂಗ್ರಹಾಲಯಗಳು ನಿರ್ದಿಷ್ಟ ಪ್ರದೇಶದ ಅಥವಾ ಸಮುದಾಯದ ಕಲೆ ಮತ್ತು ಸಂಸ್ಕ್ರತಿಗಳನ್ನು ಉಳಿಸಿಕೊಂಡು ಬರುವುದರಲ್ಲಿ ಮಾತ್ರವಲ್ಲದೆ, ಮಾನವನ ಸೃಜನಶೀಲತೆ ಮತ್ತು ಪ್ರಕೃತಿಯ ಮೇಲಿನ ನಿಯಂತ್ರಣದ ಬಗ್ಗೆ ಮೂಲಭೂತ ಸಾಕ್ಷಿಗಳನ್ನು ಸಾದರ ಪಡಿಸುವುದರ ಮೂಲಕ ಮಾನವತೆಯ ಸಾಮಾಜ ಮತ್ತು ಸಾಂಸ್ಕ್ರತಿಕ ಉತ್ಥಾನಕ್ಕೆ ನೆರವಾಗುವುದರಲ್ಲೂ ಜೀವಂತ ಪಾತ್ರವಹಿಸಿವುದು ಇಂದು ವಸ್ತುಸಂಗ್ರಹಾಲಯಗಳ ಉದ್ದೇಶವಾಗಿದೆ.

ಈ ವಸ್ತುಸಂಗ್ರಹಾಲಯಗಳು ಪ್ರೇಕ್ಷಕನಿಗೆ ಮನರಂಜನೆ, ವಿಶಾಲ ಜ್ಞಾನ, ಸಾಂಸ್ಕೃತಿಕ ಆನಂದ ಪಡೆಯುವ ಮತ್ತು ಜ್ಞಾನದ ಕೇಂದ್ರಗಳಾಗಿವೆ. ಹೀಗಾಗಿ ಇಂದು ದೇಶ-ವಿದೇಶಗಳಲ್ಲಿ ಸಾವಿರಾರು ವಸ್ತುಸಂಗ್ರಹಾಲಯಗಳು ಇಂದು ಸ್ಥಾಪನೆಯಾಗಿವೆ.

ಅವುಗಳಲ್ಲಿ ಮುಖ್ಯವಾಗಿ ಈಜಿಪ್ತ, ಚೀನಾ, ಪರ್ಶಿಯಾ, ಬ್ರಿಟಿಷ್, ಅಲ್ಲದೆ ಕಲಾ ವಸ್ತುಸಂಗ್ರಹಾಲಯ ನ್ಯೂಯಾರ್ಕ, ಬ್ರಿಟಿಷ್ ಮ್ಯುಜಿಯಂ, ತಾಂತ್ರಿಕ ವಸ್ತುಸಂಗ್ರಹಾಲಯ, ಹಾಗೂ ಜನಪದ ವಸ್ತುಸಂಗ್ರಹಾಲಯ ಸ್ಟಾಕ್-ಹೋಮ್, ರಾಷ್ಟ್ರೀಯ ವಸ್ತುಸಂಗ್ರಹಾಲಯ,

ವೇಲ್ಸ್, ಫಾರಜೀಮ್ ವಸ್ತುಸಂಗ್ರಹಾಲಯ ರುಕಿನ್ಸಹಾನ್ಸ್, ಜನಪದ ವಸ್ತುಸಂಗ್ರಹಾಲಯ ಸ್ವಿಡೀಷ್ ಮುಂತಾದವು ಹೆಸರುವಾಸಿಯಾಗಿವೆ.

ಭಾರತದಲ್ಲಿ ವಸ್ತುಸಂಗ್ರಹಾಲಯಗಳ ಸ್ಥಾಪನೆಗೆ ಆಗಿನ ಬ್ರಿಟಿಷ್ ಅಧಿಕಾರಿಗಳೆ ಕಾರಣರಾಗಿದ್ದಾರೆ ಎಂದು ಹೇಳಬಹುದು. ಭಾರತದಲ್ಲಿ ಇದುವರೆಗೆ ಸಾವಿರಾರು ವಸ್ತುಸಂಗ್ರಹಾಲಯಗಳು ಸ್ಥಾಪನೆಗೊಂಡಿವೆ.

೧೮೫೧ರಲ್ಲಿ ಮದ್ರಾಸ್‌ದಲ್ಲಿ, ೧೮೫೭ರಲ್ಲಿ ತಿರುವನಂತಪುರದಲ್ಲಿ ೧೮೬೩ರಲ್ಲಿ ಲಕ್ನೋ ಮತ್ತು ನಾಗಪುರ, ೧೮೬೫ರಲ್ಲಿ ಬೆಂಗಳೂರು, ೧೮೬೮ರಲ್ಲಿ ದೆಹಲಿ, ೧೮೭೨ರಲ್ಲಿ ಕಲ್ಕತ್ತಾ, ೧೮೭೪ರಲ್ಲಿ ಮಥುರಾ, ೧೮೭೫ರಲ್ಲಿ ರಾಯಪೂರ, ೧೮೮೭ರಲ್ಲಿ ತಿರುಚೂರು, ಉದಯಪೂರ, ಭೂಪಾಲ ಮತ್ತು ಜಯಪೂರ, ೧೮೮೮ರಲ್ಲಿ ರಾಜಕೋಟೆ, ೧೮೯೪ರಲ್ಲಿ ಬರೋಡ ಮತ್ತು ವಿಜಯವಾಡ, ೧೮೯೩ರಲ್ಲಿ ತಿರುಚನಾಪಳ್ಳಿ, ೧೯೦೯ರಲ್ಲಿ ಚಂಬ ಮತ್ತು ಜೋಧಪೂರಗಳಲ್ಲಿ ೧೯೧೦ರಲ್ಲಿ ಖುಜರಾಹೋ ಮತ್ತು ಗ್ವಾಲಿಯಾರಗಳಲ್ಲಿ, ೧೯೧೪ರಲ್ಲಿ ಪ್ರಿನ್ಸ್ ಆಫ್ ವೆಲ್ಸ್ ಮ್ಯುಜಿಯಂ ಬೊಂಬಾಯಿ ಹೀಗೆ ಅನೇಕ ವಸ್ತುಸಂಗ್ರಹಾಲಯಗಳು ದೇಶದಲ್ಲಿ ಸ್ಥಾಪನೆಯಾದವು.

ಅವುಗಳಲ್ಲಿ ಮುಖ್ಯವಾಗಿ ದೆಹಲಿ, ಕಲ್ಕತ್ತಾ, ಮುಂಬಯಿ, ಚೆನ್ನೈಗಳಲ್ಲಿಯ ವಸ್ತುಸಂಗ್ರಹಾಲಯಗಳು ಜಗತ್ಪ್ರಸಿದ್ಧಿ ಪಡೆದಿವೆ. ಅಲ್ಲದೆ ಹೈದರಾಬಾದ, ಮೈಸೂರು, ಬೆಂಗಳೂರು, ಅಹಮದಾಬಾದ, ಜಯಪೂರ, ಪಾಟ್ನಾ, ಪುಣೆ, ಪಾಟಿಯಾಲ, ಬರೋಡ, ಭೂಪಾಲ, ಭುವನೇಶ್ವರ, ಪಣಜಿ, ಗುವಾಟಿ, ತಂಜಾವೂರ, ತಿರುವನಂತಪೂರ, ವಾರಣಾಸಿ, ಉದಯಪೂರ, ಅಮೃತಸರ, ಭರತಪೂರ, ಅಜ್ಮೀರ, ಕಾಲಿಬಂಗನ, ಗ್ವಾಲಿಯರ್ ಕೋಟೆ, ಕೊಲ್ಹಾಪೂರ, ಆಗ್ರಾ, ಬುದ್ಧಗಯಾ, ನಲಂದಾ, ಸಾಂಚಿ, ಮುರ್ಷಿದಾಬಾದ್, ರತ್ನಗೀರಿ, ಕೋನಾರ್ಕ, ಖುಜರಾಹೋ, ಅಮರಾವತಿ, ನಾಗಾರ್ಜುನ ಕೊಂಡ, ಕೋಚಿನ್, ಲಕ್ನೋ, ಶಾಂತಿನಿಕೇತನ, ಅಲಹಾಬಾದ್, ರಾಜಸ್ತಾನ, ಕೊಯಮತ್ತೂರು ಮುಂತಾದ ಸ್ಥಳಗಳಲ್ಲಿಯ ವಸ್ತುಸಂಗ್ರಹಾಲಯಗಳು ಹೆಸರುವಾಸಿಯಾಗಿವೆ.

ಇವುಗಳಲ್ಲಿ ಇಂಡಿಯನ್ ಮ್ಯುಜಿಯಂ ಕಲ್ಕತ್ತಾ, ಮತ್ತು ಸಾಲಾರಜಂಗ್ ಮ್ಯುಜಿಯಂ ಹೈದರಾಬಾದ್ ಅವು ರಾಷ್ಟ್ರೀಯ ವಸ್ತು ಸಂಗ್ರಹಾಲಯಗಳೆಂದು ಘೋಷಿತವಾಗಿವೆ.

"ವಸ್ತುಸಂಗ್ರಹಾಲಯಗಳು ವೈವಿಧ್ಯಮಯ ವಸ್ತುಗಳ ಅಪೂರ್ವ ಖಜಾನೆ ಅಲ್ಲಿ ಕಾಣಸಿಗುವ ವಸ್ತು ವಿಶೇಷಗಳು ಬೇರೆಲ್ಲಿಯೂ ನೋಡಸಿಗುವದಿಲ್ಲ. ಆ ವಸ್ತುಗಳಲ್ಲಿ ನಾವು ಒಂದು ಪರಂಪರೆಯನ್ನು ಗುರುತಿಸಲು ಸಾಧ್ಯವಾಗುತ್ತದೆ. ಮ್ಯೂಸಿಯಂ ಎಂದರೆ ಕೇವಲ ವಸ್ತುಗಳ ಸಂಗ್ರಹಾಲಯ ಎಂದಷ್ಟೆ ತಿಳಿದರೆ ತಪ್ಪಾದೀತು, ಅದು ಒಂದು ಅಧ್ಯಯನ ಕೇಂದ್ರವೂ ಹೌದು. ನಮ್ಮ ದೇಶದ ಚರಿತ್ರೆ, ಕಲೆ, ಸಾಹಿತ್ಯ, ಸಂಸ್ಕೃತಿ, ಸಂಗೀತ, ವಸ್ತು ಇವನ್ನೆಲ್ಲ ಅಲ್ಲಿನ ವಸ್ತುಗಳನ್ನು ಅವಲೋಕಿಸಿ ವಿಷಯ ಗ್ರಹಿಸಿ ತಿಳಿಯಲು ಅವಕಾಶವಿರುತ್ತದೆ. ಆಯಾ ವಸ್ತುಗಳು ಒಂದು ವಿಭಿನ್ನ ಕಾಲವನ್ನು ಇಲ್ಲವೇ ಇತಿಹಾಸಯುಗವನ್ನು ಪ್ರತಿನಿಧಿಸುತ್ತವೆ. ಕೆಲವು ಮ್ಯೂಸಿಯಂಗಳು ತುಂಬಾ ಅಪರೂಪದ ವಸ್ತುಗಳನ್ನೊಳಗೊಂಡಿರುತ್ತವೆ."

ಈ ಹಿನ್ನೆಲೆಯಲ್ಲಿ ವಸ್ತುಸಂಗ್ರಹಾಲಯಗಳ ಇತಿಹಾಸ ಗಮನಿಸಿದಾಗ ಆದಿ ಮಾನವನ ಗುಹೆಗಳು, ಸ್ತೂಪಗಳು, ಗುಹಾಂತರ ದೇವಾಲಯಗಳು, ಅರಮನೆಗಳು, ಗುಡಿ ಗುಂಡಾರಗಳು, ಮಠಗಳು, ಈಗಿನ ವಸ್ತುಸಂಗ್ರಹಾಲಯಗಳು ಮುಂತಾದವುಗಳ ಹೆಸರಿನಲ್ಲಿ ರೂಪಾಂತರ ಕಂಡರೂ ಉದ್ದೇಶ ಮಾತ್ರ ಒಂದೇ ಆಗಿತ್ತು. ಅದು ಜನರ ಜ್ಞಾನದಾಹ ತೀರಿಸುವುದು. ಮನೋರಂಜನೆ ಒದಗಿಸುವುದು, ಇತಿಹಾಸ ಮತ್ತು ಸಂಸ್ಕೃತಿಯನ್ನು ಕಾಪಾಡುವುದು. ಅಲ್ಲದೇ ಸಂಸ್ಕೃತಿಯ ರಕ್ಷಣೆ ಮತ್ತು ಪ್ರಶಂಸೆಗೆ ಒತ್ತು ನೀಡುವುದಾಗಿದೆ.

"ನಹಿ ಜ್ಞಾನೇನ ಸದೃಶಂ" (ಜ್ಞಾನಕ್ಕೆ ಸಮಾನವಾದುದು ಯಾವುದೂ ಇಲ್ಲ) ಎಂಬುದನ್ನು ಮನಗಂಡಿದ್ದ ನಮ್ಮ ಹಿರಿಯರು ಇಂತಹ ವಸ್ತು ಸಂಗ್ರಹಾಲಯಗಳ ಸ್ಥಾಪನಾ ಕಾರ್ಯಕ್ಕೆ ಕೈಹಾಕಿದರು. ಇವುಗಳ ಮೂಲಕ ಲಕ್ಷಾಂತರ ಜನರಿಗೆ ಜ್ಞಾನ ಒದಗಿಸುವುದು, ಜಿಜ್ಞಾಸುಗಳನ್ನು ತನ್ನತ್ತ ಸೆಳೆಯುವ ಮಹತ್ವದ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶ ನಿಜಕ್ಕೂ ಶ್ಲಾಘನೀಯ.

ಇಲ್ಲಿ ನಮ್ಮ ಚಾರಿತ್ರಿಕ ಇತಿಹಾಸ ಕಟ್ಟಿಕೊಡುವ ಪ್ರಯತ್ನವಿದೆ. ಐತಿಹಾಸಿಕ ಸ್ಮಾರಕಗಳನ್ನು ಸಂಗ್ರಹಿಸುವ ಕಳಕಳಿಯಿದೆ. 'ಹಳೇ ಬೇರು ಹೊಸ ಚಿಗುರು' ಎಂಬಂತೆ ಹಳೆಯ ವಸ್ತುಗಳು ಹೊಸ ಜೀವನಕ್ಕೆ ಪ್ರೇರಣೆ ನೀಡುತ್ತವೆ. ಇದು ನಮ್ಮ ಸಂಸ್ಕೃತಿಗಳ ಸಂವರ್ಧನೆ ಹಾಗೂ ಸಂರಕ್ಷಣೆಯ ಮಹಾದಾಶೆಯಿಂದ ಪ್ರಾರಂಭಿಸಿದ ವಸ್ತು ಸಂಗ್ರಹಾಲಯಗಳಲ್ಲಿರುವ ಚಿತ್ರಕಲಾಕೃತಿಗಳನ್ನು, ಶಿಲ್ಪ, ಪ್ರಾಚ್ಯವಸ್ತುಗಳು, ಜನಪದ ವಸ್ತುಗಳನ್ನು ಸಂಗ್ರಹಿಸಿ ಪ್ರದರ್ಶಿಸಲಾಗಿದೆ.

ಭಾರತದಲ್ಲಿ ವಸ್ತುಸಂಗ್ರಹಾಲಯಗಳ ಹಿನ್ನೆಲೆಯ ಅಧ್ಯಯನ ಪ್ರಾಚೀನ ಕಾಲದಲ್ಲಿ ಪಿರಾಮಿಡ್, ಸ್ತೂಪಗಳು, ಕಲಾಮಂದಿರಗಳು, ಚಿತ್ರಶಾಲೆಗಳು, ಇವು ವಸ್ತಸಂಗ್ರಹಾಲಯಗಳ ಕಾರ್ಯವನ್ನು ನಿರ್ವಹಿಸುತ್ತಿದ್ದವು. ಇವುಗಳಲ್ಲಿ ಮುಖ್ಯವಾಗಿ ಕಲಾಮಂದಿರಗಳು, ಚಿತ್ರಶಾಲೆಗಳ ವಿವರವನ್ನು ಕುರಿತು ವಿವೇಚಿಸಲಾಗಿದೆ.

ವಿಶ್ವದ ಪ್ರಾಚೀನ ವಿಶ್ವ ಪ್ರಸಿದ್ಧ ಕೆಲವು ವಸ್ತುಸಂಗ್ರಹಾಲಯಗಳಾದ ಕ್ಯಾಪಿಟಲೈನ ಮ್ಯೂಸಿಯಂ, ವ್ಯಾಟಿಕನ್ ಮ್ಯೂಸಿಯಂ, ಅಮರಬಾಚ್ ಕ್ಯಾಬಿನೆಟ್ ಮ್ಯೂಸಿಯಂ, ರಾಯಲ್ ಆರ್ಮರಿಸ್ ಮ್ಯೂಸಿಯಂ, ಅಸಮೋಲಿಯನ್ ಮ್ಯೂಸಿಯಂ, ಮ್ಯೂಸೀಡೇಸ ಬಿಯಾಕ್ಸ-ಆರ್ಟ್ಸ ಎಟ್ ಫ್ರೇಂಚ್ ಆರ್ಕಿಯೋಲಾಜಿ ಮ್ಯೂಸಿಯಂ, ಬ್ರಿಟಿಷ್ ಮ್ಯೂಸಿಯಂ, ಹೆರ್ಮಿಟೇಜ್ ಮ್ಯೂಸಿಯಂ, ಉಫ್ಪಿಟ್ಟಿ ಮ್ಯೂಸಿಯಂ, ಬ್ರೇರಾ ಮ್ಯೂಸಿಯಂ, ಲೌವ್ರೇ ಮ್ಯೂಸಿಯಂ ಮುಂತಾದವುಗಳಲ್ಲದೆ ಬಂಗಾಳದ ಏಶಿಯಾಟಿಕ ಸಂಸ್ಥೆ, ಭಾರತೀಯ ಪುರಾತತ್ವ ವಸ್ತುಸಂಗ್ರಹಾಲಯಗಳು, ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂ ಮುಂಬೈ, ಕಲ್ಕತ್ತಾದ ಭಾರತೀಯ ವಸ್ತುಸಂಗ್ರಹಾಲಯ, ಹೈದ್ರಾಬಾದ್‌ನ ಸಾಲಾರಜಂಗ್ ಮ್ಯೂಸಿಯಂ, ಶ್ರೀ ಭವಾನಿಚಿತ್ರ ಸಂಗ್ರಹಾಲಯ ಔಂದ, ಅಲ್ಲದೆ ರಾಜಾ ದಿನಕರ ಕೇಳಕರ ಮ್ಯೂಸಿಯಂ ಪುಣೆ, ಮಹಾತ್ಮಾ ಫುಲೆ ವಸ್ತುಸಂಗ್ರಹಾಲಯ ಪುಣೆ, ಶಾಹಜಿ ಛತ್ರಪತಿ ವಸ್ತುಸಂಗ್ರಹಾಲಯ ಕೊಲ್ಹಾಪೂರ, ತಾಜ್ ವಸ್ತುಸಂಗ್ರಹಾಲಯ ಆಗ್ರಾ, ಪಂಜಾಬಿ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯ ಪಟಯಾಲಾ ಮುಂತಾದ ಭಾರತದ ಪ್ರಾತಿನಿಧಿಕ ವಸ್ತುಸಂಗ್ರಹಾಲಯಗಳನ್ನು ಹೆಸರಿಸಲಾಗಿದೆ.

ಕರ್ನಾಟಕದ ವಸ್ತುಸಂಗ್ರಹಾಲಯಗಳ ಸ್ವರೂಪ ಮತ್ತು ವೈವಿಧ್ಯತೆ

ಕರ್ನಾಟಕದಲ್ಲಿ ಭಾರತೀಯ ಪುರಾತತ್ವ ಇಲಾಖೆಯ ಅಧೀನದಲ್ಲಿರುವ ವಸ್ತುಸಂಗ್ರಹಾಲಯಗಳು, ರಾಜ್ಯ ಸರಕಾರದ ಅಧೀನದಲ್ಲಿಯ ವಸ್ತು ಸಂಗ್ರಹಾಲಯಗಳು. ವ್ಯಕ್ತಿಗತ ಖಾಸಗಿ ವಸ್ತುಸಂಗ್ರಹಾಲಯಗಳು ಧಾರ್ಮಿಕ ಸಂಸ್ಥೆ ವಸ್ತುಸಂಗ್ರಹಾಲಯಗಳು, ಅರಮನೆ ವಸ್ತುಸಂಗ್ರಹಾಲಯಗಳು, ಶಿಕ್ಷಣ ಸಂಸ್ಥೆಯ ವಸ್ತುಸಂಗ್ರಹಾಲಯಗಳು, ವಿಶ್ವವಿದ್ಯಾಲಯಗಳ ವಸ್ತುಸಂಗ್ರಹಾಲಯಗಳು, ಕಲಾ ವಸ್ತಸಂಗ್ರಹಾಲಯಗಳು ಎಂದು ವರ್ಗೀಕರಿಸಿಕೊಳ್ಳಲಾಗಿದೆ.

ಕರ್ನಾಟಕದ ವಸ್ತುಸಂಗ್ರಹಾಲಯಗಳನ್ನು ಎರಡು ರೀತಿಯಲ್ಲಿ ಪ್ರಮುಖವಾಗಿ ವರ್ಗೀಕರಿಸಿಕೊಳ್ಳಲಾಗಿದೆ.

ಅ. ಸರಕಾರಿ ವಸ್ತುಸಂಗ್ರಹಾಯಗಳು

ಆ. ಖಾಸಗಿ ವಸ್ತುಸಂಗ್ರಹಾಲಯಗಳು

ಅ. ಸರಕಾರಿ ವಸ್ತುಸಂಗ್ರಹಾಲಯಗಳು

೧. ಕರ್ನಾಟಕದಲ್ಲಿ ಭಾರತೀಯ ಪುರಾತತ್ವ ಇಲಾಖೆಯ ಒಟ್ಟು ಹನ್ನೆರಡು ವಸ್ತುಸಂಗ್ರಹಾಲಯಗಳು ಇವೆ. ಅವುಗಳೆಂದರೆ ಭಾರತೀಯ ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯ ಬಿಜಾಪೂರ, ಶ್ರೀರಂಗಪಟ್ಟಣ, ಹಳೆಬೀಡು, ಕಮಲಾಪೂರ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಅಲ್ಲದೆ ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ ಬೆಂಗಳೂರು, ಇಂದಿರಾಗಾಂಧಿ ಮಾನವ ವಸ್ತುಸಂಗ್ರಹಾಲಯ ಮೈಸೂರು, ಮುಂತಾದ ವಸ್ತುಸಂಗ್ರಹಾಲಯಗಳಲ್ಲಿ ಕಲಾಕೃತಿಗಳು ಸಂಗ್ರಹಿಸಲ್ಪಟ್ಟಿವೆ.

೨. ಕರ್ನಾಟಕ ಸರಕಾರದ ಪ್ರಾಚ್ಯ ವಸ್ತು ಇಲಾಖೆಯ ಒಟ್ಟು ಇಪ್ಪತ್ತೊಂದು ವಸ್ತಸಂಗ್ರಹಾಲಯಗಳು ಇವೆ. ಅವುಗಳೆಂದರೆ ಸರಕಾರಿ ವಸ್ತುಸಂಗ್ರಹಾಲಯ ಬೆಂಗಳೂರು,

ಚಿತ್ರದುರ್ಗ, ಧಾರವಾಡ, ಶ್ರೀಮಂತಿಬಾಯಿ ವಸ್ತುಸಂಗ್ರಹಾಲಯ ಮಂಗಳೂರು, ಶಿವಮೊಗ್ಗ, ಕಿತ್ತೂರು ಚೆನ್ನಮ್ಮ ವಸ್ತುಸಂಗ್ರಹಾಲಯ ಕಿತ್ತೂರು, ವೆಂಕಟಪ್ಪಾ ಕಲಾಸಂಗ್ರಹಾಲಯ ಬೆಂಗಳೂರು, ಸರಕಾರಿ ವಸ್ತುಸಂಗ್ರಹಾಲಯ ಗದಗ, ಮಡಿಕೇರಿ, ಬಸವಕಲ್ಯಾಣ, ಹಾಸನ, ಶ್ರೀರಂಗಪಟ್ಟಣ, ಮೈಸೂರು, ಗುಲ್ಬರ್ಗಾ, ಹೂವಿನ ಹಡಗಲಿ, ಅಥಣಿ, ಜನಪದ ವಸ್ತುಸಂಗ್ರಹಾಲಯ ಬಾಗಲಕೋಟೆ, ಕುವೆಂಪು ವಸ್ತುಸಂಗ್ರಹಾಲಯ ಕುಪ್ಪಳ್ಳೀ, ಕೆಂಪೇಗೌಡ ವಸ್ತುಸಂಗ್ರಹಾಲಯ ಬೆಂಗಳೂರಿನಲ್ಲಿ ಅನೇಕ ಕಲಾಕೃತಿಗಳು ಸಂಗ್ರಹಿಸಲ್ಪಟ್ಟಿವೆ.

೩. ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ ಒಟ್ಟು ಏಳು ವಸ್ತು ಸಂಗ್ರಹಾಲಯಗಳಿವೆ. ಅವುಗಳೆಂದರೆ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ಮೈಸೂರು ವಿಶ್ವವಿದ್ಯಾಲಯದ ಜನಪದ ವಸ್ತುಸಂಗ್ರಹಾಲಯ ಮೈಸೂರು, ಬೆಂಗಳೂರು ವಿ.ವಿಯ ಕನ್ನಡ ಅಧ್ಯಯನ ಕೇಂದ್ರದ ವಸ್ತುಸಂಗ್ರಹಾಲಯ ಬೆಂಗಳೂರು, ಕುವೆಂಪು, ವಿ.ವಿ. ಶಿವಮೊಗ್ಗ, ಕನ್ನಡ ವಿ.ವಿ. ಹಂಪಿ, ನಾಡೋಜ ಆರ್.ಎಂ. ಹಡಪದ ಕಲಾಸಂಗ್ರಹಾಲಯ ಬಾದಾಮಿ, ಬನಶಂಕರಿ, ಕುವೆಂಪು ಸಹ್ಯಾದ್ರಿದೇಶಿ ವಸ್ತುಸಂಗ್ರಹಾಲಯ ಕುಪ್ಪಳ್ಳಿ ಮುಂತಾದ ಕಡೆಗಳಲ್ಲಿ ಕಲಾಕೃತಿಗಳನ್ನು ಸಂಗ್ರಹಿಸಲಾಗಿದೆ.

ಆ. ಖಾಸಗಿ ವಸ್ತುಸಂಗ್ರಹಾಲಯಗಳು

೧. ಸಾಂಸ್ಥಿಕ(ಸಂಸ್ಥೆಯ) ವಸ್ತುಸಂಗ್ರಹಾಲಯಗಳು ಇಲ್ಲಿ ಒಟ್ಟು ಏಳು ವಸ್ತುಸಂಗ್ರಹಾಲಯಗಳು ಇವೆ. ಅವುಗಳೆಂದರೆ ಚಿತ್ರಕಲಾ ಪರಿಷತ್ ಕಲಾಸಂಗ್ರಹಾಲಯ ಬೆಂಗಳೂರು, ಶಾಶ್ವತಿ ವಸ್ತುಗಂಗ್ರಹಾಲಯ ಬೆಂಗಳೂರು, ಮಂಜೂಷಾ ವಸ್ತುಸಂಗ್ರಹಾಲಯ ಧರ್ಮಸ್ಥಳ, ಸುತ್ತೂರ ಮಠದ ವಸ್ತುಸಂಗ್ರಹಾಲಯ ಶ್ರೀಕ್ಷೇತ್ರ ಸುತ್ತೂರು, ಚಿತ್ರದುರ್ಗದ ಬ್ರಹನ್ಮಠದ ವಸ್ತುಸಂಗ್ರಹಾಲಯ ಚಿತ್ರದುರ್ಗ, ಮಂಜೂಶ್ರೀ ವಸ್ತುಸಂಗ್ರಹಾಲಯ ಬೆಂಗಳೂರು, ಸಿದ್ಧಸಂಸ್ಥಾನ ಮಠದ ವಸ್ತುಸಂಗ್ರಹಾಲಯ ಚಿಂಚಣಿ ಮುಂತಾದ ಸಾಂಸ್ಥಿಕ ವಸ್ತುಸಂಗ್ರಹಾಲಯಗಳಲ್ಲಿ ಕಲಾಕೃತಿಗಳನ್ನು ಸಂಗ್ರಹಿಸಲಾಗಿದೆ.

೨. ವ್ಯಕ್ತಿಗತ ವಸ್ತುಸಂಗ್ರಹಾಲಯಗಳಲ್ಲಿ ಒಟ್ಟು ಐದು ವಸ್ತು ಸಂಗ್ರಹಾಲಯಗಳಿವೆ. ಅವುಗಳೆಂದರೆ ಜಗನ್ಮೋಹನ ವಸ್ತುಸಂಗ್ರಹಾಲಯ ಮೈಸೂರು, ಟಿ.ಎನ್.ಗಂಡುಗಲಿ ವಸ್ತುಸಂಗ್ರಹಾಲಯ ಚಿತ್ರದುರ್ಗ, ಜಾನಪದಲೋಕ ವಸ್ತುಸಂಗ್ರಹಾಲಯ ರಾಮನಗರ, ರಾಣಿ ಅಬ್ಬಕ್ಕ ವಸ್ತುಸಂಗ್ರಹಾಲಯ ಸಂಚಯಗಿರಿ, ಭಾರತೀಯ ಶಾಸ್ತ್ರೀಯ ವಸ್ತುಸಂಗ್ರಹಾಲಯ ಹುಬ್ಬಳ್ಳಿ, ಹಸ್ತಶಿಲ್ಪ ಹೆರಿಟೇಜ್ ವಿಲೇಜ್ ವಸ್ತುಸಂಗ್ರಹಾಲಯ ಮಣಿಪಾಲದಲ್ಲಿ ಅನೇಕ ಕಲಾಕೃತಿಗಳ ಸಂಗ್ರಹವನ್ನು ಕಾಣಬಹುದಾಗಿದೆ.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ

"ನವರಂಗ ದರವಾಜ"ದ ಮಹತ್ವ

ಕ್ರಿ.ಶ. ೧೨೯೪ರಲ್ಲಿ ನಿರ್ಮಾಣವಾದ ರಾಯಚೂರು ಶಿಲಾಕೋಟೆಯು ದಿನದಿನವು ಶಿಥಿಲಗೊಳ್ಳುತ್ತಿದ್ದರೂ, ಕೋಟೆಯ ಅಳಿದುಳಿದ ಸುಂದರ ಹೆಬ್ಬಾಗಿಲುಗಳಾದ "ನವರಂಗದರವಾಜ" ನವರಂಗ ದರವಾಜ ಹಿಂದೂಗಳ ಪವಿತ್ರ ಸ್ಥಳವೆನಿಸಿದೆ.

ಈ ದರವಾಜದ ಒಳಾಂಗಣದ ಶಿಲಾಗೋಡೆಗಳ ಜೋಡಣೆಯಲ್ಲಿ ರಾಮಾಯಣ, ಮಹಾಭಾರತ ಪುರಾಣಗಳ ವಿವಿಧ ಘಟನಾವಳಿಗಳನ್ನಾಧರಿಸಿ ಅತಿ ನಾಜೂಕು ಅನಿಸದಿದ್ದರೂ, ಸುಂದರವಾದ ಶಿಲ್ಪಕಲಾ ಕೆತ್ತನೆಗಳನ್ನು ಗೋಪಾಲ ಕೃಷ್ಣನ ಕೊಳಲ ದನಿಗೆ ಮೇವನ್ನೇ ಮರೆತು ತನ್ಮಯತೆಯಿಂದ ತಲೆಯೆತ್ತಿ ನಿಂತಿರುವ ಗೋವುಗಳು, ಗೋವರ್ಧನಗಿರಿಧಾರಿಯಾಗಿ ಗೋವುಗಳಿಗೆ ರಕ್ಷಣೆ ನೀಡುತ್ತಿರುವ ಶ್ರೀ ಕೃಷ್ಣನ ಚಿತ್ರ, ಕಳಿಂಗ ಮರ್ಧನ, ಕೃಷ್ಣ ಗೋಪಿಕೆಯರ ವಸ್ತ್ರಾಪಹರಣ ಮಾಡಿ ಮರದ ಮೇಲೆ ಕುಳಿತು ಅವರನ್ನು ಕಾಡಿಸುತ್ತಾ ಆಟವಾಡುತ್ತಿರುವ ಕೃಷ್ಣ.



ವಿಷ್ಣುವಿನ ಕೆಲವು ಅವತಾರಗಳು, ಬೇಡರ ಕಣ್ಣಪ್ಪನು ತನ್ನ ಕಣ್ಣುಗಳನ್ನು ಶಿವನಿಗೆ ಅರ್ಪಿಸುವ ದೃಶ್ಯ ಹಿರಣ್ಯಕಶಿಪುವಿನ ವಧೆ, ಪ್ರಹ್ಲಾದನನ್ನು ಮೈದದವುತ್ತಿರುವ ನರಸಿಂಹ, ಲಕ್ಷ್ಮೀ ಸಮೇತನಾದ ಶಾಂತ ನರಸಿಂಹ, ಶೇಷ ಶಯನ ವಿಷ್ಣು, ವಿಷ್ಣುವಿನ ವಾಮನವತಾರ ಅಲ್ಲದೆ ರಾಮಾಯಣದ ಚಿತ್ರಣದ ಪ್ರಯತ್ನ ಇಲ್ಲಿ ನಡೆದಿದೆ.

ಸೀತಾದೇವಿಯ ಅಪಹರಣ, ಜಟಾಯುವಧೆ ವಾಲಿ, ಸುಗ್ರೀವರ ಯುದ್ಧ, ಅಶೋಕ ವನದಲ್ಲಿ ಸೀತೆಯ ದರ್ಶನ ಮಾಡುತ್ತಿರುವ ಹನುಮ, ವಿಭೀಷಣ ಮತ್ತು ಶ್ರೀರಾಮನ ಸಂಭಾಷಣೆ. ಕಪಿ ಮುಖಂಡರೊಂದಿಗೆ ಶ್ರೀರಾಮನು ರಾವಣನೊಂದಿಗೆ ಯುದ್ಧ ಮಾಡುತ್ತಿರುವುದು. ಸೀತಾಮಾತೆಯ ಹಿನ್ನೆಲೆಯಲ್ಲಿ ಲವ, ಕುಶರು ಶ್ರೀರಾಮನೊಡನೆ ಯುದ್ಧ ಮಾಡುತ್ತಿರುವುದು ಇವುಗಳಲ್ಲಿದೆ.



ಶಿವಲಿಂಗಕ್ಕೆ ಹಾಲಿನ ಅಭಿಷೇಕ ಮಾಡುತ್ತಿರುವ ಕಾಮಧೇನು, ದ್ವಿಮುಖ ಕಪಿಗಳು, ಹಣ್ಣು ತಿನ್ನುತ್ತಿರುವ ಹನುಮ, ನವಿಲಿನ ಚಿತ್ರ, ಮೋಕ್ಷ ಸಾಧನೆಯ ಬಗ್ಗೆ ಹಿಂದೂ ಧರ್ಮದ ಸಾಂಕೇತಿಕ ಚಿತ್ರಣ, ನರಸಿಂಹನ ಕೆಲವು ಲೀಲಾವತಾರಗಳು, ರಂಗೋಲಿ ಕೆತ್ತನೆಗಳು, ಪುಷ್ಪಕೆತ್ತನೆ, ಹುಲಿಬೇಟೆಯ ಚಿತ್ರಗಳು, ಒಂದೇ ಚಿತ್ರದಲ್ಲಿ ಆನೆ ಮತ್ತು ವೃಷಭ ಚಿತ್ರಣ ಕುಳಿತ ಭಂಗಿಯಲ್ಲಿ ಮತ್ತು ನಿಂತ ಭಂಗಿಯಲ್ಲಿ ಸಿಂಹವನ್ನು ಒಂದೇ ಚಿತ್ರದಲ್ಲಿ ಕೆತ್ತಿರುವುದು. ಈ ಶಿಲ್ಪ ಕಲೆಯು ಕೆಟ್ಟ ದೃಷ್ಟಿಗೆ ಬೀಳಬಾರದೆಂದೆನಿಸಿ.

ಈ ಶಿಲ್ಪಕಲೆಗಳ ಅನೇಕ ಕಡೆಗಳಲ್ಲಿ ಮಿಥನ ಶಿಲ್ಪಕಲೆ ಚಿತ್ರಿಸಿರುವುದು ಇಲ್ಲಿನ ಶಿಲ್ಪಕಲಾ ವೈಭವಗಳಾಗಿವೆ. ನವರಂಗದರವಾಜದ



ನವರಂಗ ದರವಾಜದ ಒಳನೋಟ

ಪ್ರಮುಖ ಹೆಬ್ಬಾಗಿಲನ್ನು ಪ್ರೇರೆಪಿಸುವ ಮೊದಲು ಈ ಹೆಬ್ಬಾಗಿಲಿನ ಮೇಲಿನ ಶಿಲ್ಪಕಲೆಯ ಬಗ್ಗೆ ಚಿಕ್ಕ ಮಹಡಿಯನ್ನೇ ನಿರೂಪಿಸುವ ಶಿಲ್ಪ ಕಲೆ ಇದೆ ಅಲ್ಲದೆ ತಿರುಪತಿ ವೆಂಕಟಾಚಲನ ಲಾಂಛನ ಅದೇ ಆಚೆ ಕಡೆ ಶಂಖು ಮತ್ತು ಚಕ್ರಗಳ ಸಂಕೇತ ಶಿಲ್ಪಕಲೆ ಇರುವುದರಿಂದ ಕಾಕತೇಯರು ಅಥವಾ ವಿಜಯನಗರದ ಅರಸರು ಕಟ್ಟಿಸಿರಬಹುದೆಂದು ತೋರುತ್ತದೆ.

ಅಧ್ಯಾಯ-೪

ರಾಯಚೂರಿನ ವಸ್ತು ಸಂಗ್ರಹಾಲಯದ ಶಿಲ್ಪ ಕಲಾಕೃತಿಗಳು

ಅಧ್ಯಾಯ–೪

ರಾಯಚೂರಿನ ವಸ್ತು ಸಂಗ್ರಹಾಲಯದ ಶಿಲ್ಪ ಕಲಾಕೃತಿಗಳು

"ಶಿಲ್ಪ" ಎಂಬ ಸಂಸ್ಕೃತಿ ಪದಕ್ಕೆ ಮೂರ್ತಿಶಿಲ್ಪ, ವರ್ಣ ಚಿತ್ರ, ಫಲಕ ಮುಂತಾದ ಅನೇಕ ಅರ್ಥಗಳು ಇರುವುದಲ್ಲದೆ, ಗೀತ, ವಾದ್ಯ, ನೃತ್ಯ ಮುಂತಾದ ಲಲಿತಕಲೆಗಳಲ್ಲೂ ಅದರ ಅರ್ಥ ವ್ಯಾಪ್ತಿಯೊಂದಿಗೆ ವಾಸ್ತುರಚನೆಯ ಅವಲೋಕನವೂ ಅವಶ್ಯಕವಾಗಿದ್ದು, ಇಲ್ಲಿ ವಾಸ್ತು-ರಚನೆಯನ್ನು ತುಸು ಗಮನಿಸಿ ಅಧ್ಯಯನ ಮಾಡಲಾಗಿದೆ. ಈ ಅವಲೋಕನದಿಂದ ಬಹು ದೇವೋಪಾಸಿಯ ಆಚರಣೆಯಲ್ಲಿ ಪರೋಕ್ಷವಾಗಿ 'ಏಕದೇವ ಪಾರಮ್ಯತೆಯು' ಪ್ರತಿಫಲಿವಾಗುವುದನ್ನು ಕಾಣಬಹುದು.

ಭಾರತೀಯ ಶಿಲ್ಪಕಲಾ ಸಂಪತ್ತು ಅಸಾಮಾನ್ಯವಾದದ್ದು ಹಾಗೂ ಅಸಾದೃಶ್ಯವಾದದ್ದು, ಶಿಲ್ಪತಯಾರಿಕೆಯಲ್ಲಿ ಕಂಡರಚನೆಯಲ್ಲಿ ಭಾರತೀಯರು ತೋರಿರುವಷ್ಟು ಉತ್ಸಾಹ, ಕಾಳಜಿ, ಪ್ರಯತ್ನ ಪ್ರಾಯಶಃ ಪ್ರಪಂಚದ ಇನ್ನಾವದೇ ಶಿಲ್ಪಕಲೆಯಲ್ಲಿ ಕಂಡು ಬರುವುದಿಲ್ಲ ಎಂಬ ವಿಚಾರ ನಿಜಕ್ಕೂ ಆಶ್ಚರ್ಯಕರ, ಭಾರತವು ಪ್ರಪಂಚದ ಯಾವುದೇ ರಾಷ್ಟ್ರ ಶಿಲ್ಪಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿದೆ ಎಂಬುದು ಭಾರತೀಯ ಇತಿಹಾಸದ ದೇವಾಲಯದಲ್ಲಿನ ಶಿಲ್ಪಗಳನ್ನು ನೋಡಿದಾಗ ತಿಳಿದುಬರುತ್ತದೆ.

"ಭಾರತೀಯ ಶಿಲ್ಪದ ಉಗಮ ಮತ್ತು ವಿಕಾಸಗಳಿಗೆ ಇಲ್ಲಿನ ಧಾರ್ಮಿಕ ಭೂಮಿಕೆಯು ಮಹತ್ತರವಾದ ಕಾಣಿಕೆಯನ್ನು ನೀಡಿದೆ. ಪ್ರಮುಖವಾಗಿ ಆಯಾಕಾಲದ ಧಾರ್ಮಿಕ ಅವಶ್ಯಕತೆಗಳನ್ನು ಪೂರೈಸುವ ವಸ್ತುಗಳಾಗಿ ರೂಪುಗೊಂಡಿದೆ. ಶಿಲ್ಪದ ನಿರೂಪಣೆಗೆ ಆಯಾಕಾಲದ ಧಾರ್ಮಿಕ, ಸಾಹಿತ್ಯ, ಕಲಾತ್ಮಕತೆ ಮತ್ತು ತಂತ್ರಗಳು ಪ್ರತ್ಯಕ್ಷವಾಗಿ ಪ್ರಭಾವ ಬೀರಿವೆ. "ಕಲೆ" ಎಂಬ ಮಹಾವೃಕ್ಷವನ್ನು ನೀರೆರೆದು ಪೋಷಿಸಿ, ಬೆಳೆಸಿದ ಅಮೃತವಾಹಿನಿಯೇ 'ಧರ್ಮ' ಧರ್ಮವು ತನ್ನ ಅಸೀಮ ಕಲ್ಪನೆಯಿಂದ ಅಪಾರ ಸಾಹಿತ್ಯವನ್ನು ನೀಡಿ ಕಲಾಕ್ಷೇತ್ರವನ್ನು ಬೆಳೆಸಿ ಪೋಷಿಸಿದೆ.

ಅಂತೆಯೇ ಅಮೂರ್ತವಾದ ಧಾರ್ಮಿಕ ಭಾವನೆ ಕಲ್ಪನೆಗಳಿಗೆ ಸಾಕಾರರೂಪವನ್ನು ನೀಡುವಲ್ಲಿ ಕಲೆಯ ಪಾತ್ರವು ಬಹಳ ಹಿರಿಮೆಯನ್ನು ತಂದಿದೆ. ಭಾರತದ ಮಟ್ಟಿಗಂತೂ, ಕಲೆಯ ಹಲವು ಮಜಲುಗಳನ್ನು ನೀರೆರೆದು ಪೋಷಿಸಿದುದು ಧರ್ಮವೇ ಎಂಬುದು ನಿರ್ವಿವಾದ ಶಿಲ್ಪ, ಅಪಾರ ವಸ್ತುವನ್ನು ಒದಗಿಸಿದೆ. ಅಂತೆಯೇ ಭಾರತೀಯ ಕಲೆಯು ಭಕ್ತಿಯ ಅಂತರ್ಯವನ್ನು ಹೊಂದಿದ್ದು, ವಿಶ್ವದ ಇತರ ರಾಷ್ಟ್ರಗಳ ಕಲೆಗಳಂತೆ ಕೇವಲ ಮನೋರಂಜಕ ಸಾಧನವಾಗದೆ ಆರಾಧನೆಯ ಒಂದು ಪ್ರಕಾರವಾಗಿ ರೂಪುತಳದಿದೆ.

ಅಂತೆಯೇ ಅಮೂರ್ತವಾದ ಧಾರ್ಮಿಕ ಭಾವನೆ ಕಲ್ಪನೆಗಳಿಗೆ ಸಾಕಾರ ರೂಪವನ್ನು ನೀಡುವಲ್ಲಿ ಕಲೆಯ ಪಾತ್ರ ಬಹು ಹಿರಿದು ಭಾರತದ ಮಟ್ಟಿಗಂತೂ, ಶಿಲ್ಪ, ವಾಸ್ತು, ಸಂಗೀತ ಮತ್ತು ನೃತ್ಯ ಮುಂತಾದ ವಿವಿಧ ಕ್ಷೇತ್ರಗಳಿಗೆ ಧಾರ್ಮಿಕ ಸಾಹಿತ್ಯವು ಅಪಾರ ವಸ್ತವನ್ನು

ಒದಗಿಸಿದೆ. ಅಂತೆಯೇ ಭಾರತೀಯ ಕಲೆಯು ಭಕ್ತಿಯ ಅಂತರ್ಯವನ್ನು ಹೊಂದಿದ್ದು, ವಿಶ್ವದ ಇತರ ರಾಷ್ಟ್ರಗಳ ಕಲೆಗಳಂತೆ ಕೇವಲ ಮನೋರಂಜಕ ಸಾಧನವಾಗಿದೆ. ಆರಾಧನೆಯ ಒಂದು ಪ್ರಕಾರವಾಗಿ ರೂಪುತಳೆದಿದೆ.

ಮಾನವನ ಬದುಕಿನ ಅನೇಕ ಪರಿಣಾಮಕಾರಿ ಕ್ಷೇತ್ರಗಳಲ್ಲಿ 'ಕಲೆ ಮತ್ತು ಧರ್ಮ' ಬಹು ಪ್ರಭಾವಶಾಲಿಯಾದ ಅಭಿವ್ಯಕ್ತಿಗಳು. ಪ್ರಖ್ಯಾತ ಕಲಾಮೀಮಾಂಸಕರಾದ 'ಆನೆಸಾಕಿ'ಯವರು ಕಲೆ ಮತ್ತು ಧರ್ಮದ ಬಗೆಗೆ ಬರೆಯುತ್ತಾ, 'ಕಲೆ ಮತ್ತು ಧರ್ಮ'ಗಳು ಮಾನವನ ಬದುಕಿನ ಬಹು ಸತ್ವಶಾಲಿ ಪ್ರಕಾರಗಳು ಧರ್ಮವೆಂಬುದು ಮಾನವನ ಅಂತಸ್ಯತ್ವವನ್ನು ಪ್ರಚೋದಿಸಿ ಅದನ್ನು ಪ್ರೇರೆಪಿಸಿ ಜೀವಂತಿಕೆಯತ್ತ ಕೊಂಡೊಯ್ಯುತ್ತದೆ.

ಗಣಿತ ಶಾಸ್ತ್ರಜ್ಞನಾದ 'ವರಾಹಮಿಹಿರ'ನು ತನ್ನ 'ಬೃಹತ್ಸಂಹಿತಾ' ಎಂಬ ಗ್ರಂಥದಲ್ಲಿ 'ಶಿಲ್ಪಗಳಲ್ಲಿ ದೇಶಕಾಲಗಳ ಉಡುಗೆ-ತೊಡುಗೆಗಳು ಸಂಭವನೀಯ' ಎಂದು ಹೇಳುವ ಮಾತುಗಳು ಆಧುನಿಕ ಇತಿಹಾಸಕಾರರು ಮೆಚ್ಚುಗೆಯ ಅಂಶವಾಗಿದೆ. ಸುದೀರ್ಘ ಇತಿಹಾಸವನ್ನು ಹೊಂದಿರುವ ಭಾರತೀಯ ಶಿಲ್ಪ ಪರಂಪರೆ ವಿಸ್ತೃತ ಅಧ್ಯಯನವನ್ನು ನಾವು ಅದಕ್ಕೆ ಸಲ್ಲಬೇಕಾದ ರೀತಿಯಲ್ಲಿ ಮಾಡಿಲ್ಲವೆಂದೇ ಹೇಳಬೇಕು.

ಕ್ರಿ.ಶ. ೧೯-೨೦ನೇ ಶತಮಾನಗಳಲ್ಲಿ ಪಾಶ್ಚಾತ್ಯ ವಿದ್ವಾಂಸರು ಭಾರತೀಯ ಶಿಲ್ಪಗಳ ಅಧ್ಯಯನವನ್ನು ಅವರದ್ದೇ ಆದ ರೀತಿಯಲ್ಲಿ ಮಾಡಿದರು. ಅವರು ಅನುಸರಿಸಿದ ಹಾದಿಯನ್ನೇ ಭಾರತೀಯ ವಿದ್ವಾಂಸರು ಸಹ ತುಳಿದು ಅಥವಾ ತುಳಿಯುತ್ತಾ ಭಾರತೀಯ ಶಿಲ್ಪಕಲೆಯ ಅಧ್ಯಯನವನ್ನು ಮಾಡಿದ್ದಾರೆ. ಮಾಡುತ್ತಾ ಬಂದಿದ್ದಾರೆ.

ಈ ಎಲ್ಲಾ ಅಧ್ಯಯನಗಳೂ ಕೇವಲ ಸಾಂಪ್ರದಾಯಿಕ ರೀತಿಯದ್ದೆನಿಸುತ್ತದೆ. ಸಾಂಪ್ರದಾಯಿಕ ಅಧ್ಯಯನ ರೀತಿಯೆಂದರೆ ಶಿಲ್ಪಗಳನ್ನು ಅವುಗಳ ಕಂಡ ವಿಧಾನದ ಮೇಲೆ ವಸ್ತು ವಿಷಯದ ಆಧಾರದ ಮೇಲೆ ಕಾಲ, ದೇಶ, ಪ್ರಾಂತ್ಯಗಳ ಆಧಾರದ ಮೇಲೆ ಅವುಗಳ

ಜಾತಿ ಪಂಥಗಳ ಆಧಾರದ ಮೇಲೆ ಹೀಗೆ ವಿವಿಧ ಉಪಾಧಿಗಳನ್ನಿಟ್ಟುಕೊಂಡು ಅಧ್ಯಾಯನ ಮಾಡಿದ್ದಾರೆ.

ಭಾರತೀಯ ಸಂಸ್ಕೃತಿಯ ಬಹುಪಾಲು ಶಿಲ್ಪಗಳಲ್ಲಿ ಸ್ವೀಕೃತವಾಗಿರುವ ಧಾರ್ಮಿಕ ಸಿಧ್ಧಾಂತವು (ಆಗಮ, ಸಿಧ್ಧಾಂತ ಮುಂತಾದ ನಿಯಂತ್ರಣಗಳ ಪ್ರಭಾವವು) ಪ್ರತಿಫಲನಗೊಳ್ಳುತ್ತದಾದರೂ, ಅದರಲ್ಲಿ ಶಿಲ್ಪಿಯ ಸ್ವಂತಿಕೆ ಹಾಗೂ ಸಮಕಾಲೀನ ಕಲಾತ್ಮಕ ದೃಷ್ಟಿಕೋನಗಳಿಗೂ ಸ್ವಾತಂತ್ರ್ಯವಿರುವುದು ವ್ಯಕ್ತವಾಗುತ್ತದೆ. ಆದರೆ, ಇಲ್ಲಿ ಸ್ವಾತಂತ್ರ್ಯಕ್ಕಿಂತ ಸ್ರೀಕೃತಿ ಧಾರ್ಮಿಕ ಸಿಧ್ಧಾಂತಕ್ಕೆ ಪ್ರಥಮ ಪ್ರಾಶಸ್ತ್ಯ ಎನ್ನಿಸುವುದನ್ನು ಮರೆಯುವಂತಿಲ್ಲ. ಆದರೂ ತನ್ನ ಸ್ವಂತಿಕೆಯ ಸಿಂಚನದಿಂಧ ಶಿಲ್ಪದಲ್ಲಿ ಹೊಸತನ ಮೂಡಿಸುವ ಶಿಲ್ಪಿಯ ಪ್ರಯತ್ನವು ಶಿಲ್ಪದ "ಶೈಲಿಯ' ವಿಕಾಸಕ್ಕೆ ಕಾರಣವಾಗುತ್ತದೆ.

ಈ ವಿಕಾಸವು ಆಯಾ ವಿಕಾಸಗಳು ದೇಶ-ಕಾಲಗಳ ಹಾಗೂ ಶಿಲಾಮಾಧ್ಯಮ ಮತ್ತು ತಂತ್ರಜ್ಞತೆಗಳ ಎರಕದಲ್ಲಿ ರೂಪುಗೊಂಡು ಹೊಸ ಶೈಲಿಗಳಾಗಿ ಕಾಣಿಸಿಕೊಳ್ಳುತ್ತವೆ. ಇಂತಹ ಶೈಲಿಗಳು ದಿಢೀರನೆ ಹುಟ್ಟಿಕೊಳ್ಳಲು ಸಾಧ್ಯವಿಲ್ಲ, ಇದು ಒಂದು ದೇಶದ ಭಾಷೆ ಮತ್ತು ಲಿಪಿಗಳಂತೆ ನಿರಂತರ ವಿಕಾಸದಿಂದ ರೂಪುಗೊಳ್ಳುವ ಅಂಶವಾಗಿದೆ.

ಒಟ್ಟಾರೆ ಶಿಲ್ಪಗಳು ಕೇವಲ ಮೇಲುನೋಟಕ್ಕೆ ಕಾಣುವ ನಿರ್ಜಿವ ಪ್ರತಿಮೆಗಳಾಗಿರದೆ, ಸಮಕಾಲೀನ ಧಾರ್ಮಿಕ ಮತ್ತು ಸಾಮಾಜಿಕ ಆಶಯಗಳನ್ನು ಪ್ರತಿಫಲಿಸುವ ಐತಿಹಾಸಿಕ ಆಕರಗಳಾಗಿರುವುದು ವ್ಯಕ್ತವಾಗತ್ತದೆ.

"ಕರ್ನಾಟಕದ ಇತಿಹಾಸ ಮತ್ತು ಪರಂಪರೆಯಲ್ಲಿ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳಿಗೆ ಒಂದು ಮಹತ್ವದ ಸ್ಥಾನವಿದೆ. ಯಾವುದೇ ಸಂಸ್ಕೃತಿ ಅಥವಾ ಪರಂಪರೆಗೆ ಮೂಲಭೂತವಾಗಿ ಎರಡು ಮುಖಗಳಿರುತ್ತವೆ. ಅವುಗಳೆಂದರೆ, ೧ ಅಮೂರ್ತ ರೂಪದಲ್ಲಿ ಮೊದಲು ಕಾಣಿಸಿಕೊಳ್ಳುತ್ತವೆ.

'ಅಮೂರ್ತ ರೂಪಗಳನ್ನು ಸಾಕಾರಗೊಳಿಸಿ, ಅವುಗಳಿಗೆ ಮೂರ್ತರೂಪಗಳನ್ನು ನೀಡುವುದೇ ವಾಸ್ತುಶಿಲ್ಪ ಮತ್ತು ಮೂರ್ತಿ ಶಿಲ್ಪಗಳ ಪ್ರಮುಖ ಗುರಿ' ಎಂದು ಹೇಳಬಹುದು. ಅಂದರೆ, ಯಾವುದೇ ಮೂರ್ತಿಶಿಲ್ಪದ ಅಧ್ಯಯನದ ಹಿನ್ನೆಲೆಯಲ್ಲಿ ಭಾವನೆಗಳ ಸಮುಚ್ಚಯ ಅಮೂರ್ತವಾಗಿ ಅಡಗಿರುತ್ತದೆ ಎಂದಾಯಿತು.

ಆದುದರಿಂದ ಆಸಕ್ತಿಯುಳ್ಳವರು ಒಂದು ಪರಂಪರೆಯ ಮೂರ್ತಿಶಿಲ್ಪದ ಅಧ್ಯಯನವನ್ನು ಮಾಡುವಾಗ ಆಯಾಕಾಲ, ಪರಿಸರ, ಸಾಮಾಜಿಕ ನಂಬಿಕೆಗಳು, ಆಚರಣೆಗಳು ಮತ್ತು ಇತರ ಅನೇಕ ಅಂಶಗಳನ್ನು ಗಮನಿಸಬೇಕಾದುದ್ದು ಅವಶ್ಯ. ಮೂರ್ತಿಶಿಲ್ಪದ ಅಧ್ಯಯನವು ಅದರ ಐತಿಹಾಸಿಕ ಮತ್ತು ಪಾರಂಪರಿಕ ಹಿನ್ನೆಲೆಯಲ್ಲಿಯೇ ನಡೆಯಬೇಕಾದುದ್ದು ಅನಿವಾರ್ಯ".

ಈ ಎಲ್ಲಾ ಶಿಲ್ಪಗಳ ಅಧ್ಯಯನವು ಧಾರ್ಮಿಕ ಶಿಲ್ಪಗಳಿಗೆ ಮಾತ್ರ ಮೀಸಲಾಗಿದೆ ಎನ್ನಬಹುದು. ಯಾವುದೇ ಒಂದು ಧರ್ಮದ ಶಿಲ್ಪಗಳನ್ನು ಆರಿಸಿಕೊಂಡು ಅದಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥಗಳನ್ನು ಹುಡುಕಿ ಅವುಗಳಲ್ಲಿ ದೊರಕುವ ವಿವರಣೆಗಳನ್ನು ಸಂಗ್ರಹಿಸಿ ಪ್ರಸಕ್ತ ಶಿಲ್ಪದೊಂದಿಗೆ ತುಲನೆ ಮಾಡಿ ಅವುಗಳ ನಡುವಿನ ಸಾಮ್ಯವನ್ನು ಮತ್ತು ವ್ಯತ್ಯಾಸವನ್ನು ಪಟ್ಟಿಮಾಡಿ ತುಲನಾತ್ಮಕ ಅಧ್ಯಯನ ಮಾಡುವದು ಪ್ರಾಂತೀಯ ವೈಲಕ್ಷಣ ವಿಭಿನ್ನತೆಗಳನ್ನು ಗುರುತಿಸುವದು, ಶಿಲ್ಪಕಲಾ ಶೈಲಿಯ ವಿಶೇಷತೆಗಳನ್ನು ಹೇಳುವದು ಪರಸ್ಪರ ಶೈಲಾತ್ಮಕ ಭಾವಗಳನ್ನು ಅಧ್ಯಯನ ಮಾಡುವದು, ವಿವರಿಸುವದು, ಶಿಲ್ಪಕಲಾ ಬೆಳವಣಿಗೆಯನ್ನು ಕಾಲದ ಆಧಾರದ ಮೇಲೆ ನಿಗದಿಪಡಿಸುವುದು.

ಕೊನೆಯದಾಗಿ ಸೌಂದರ್ಯದ ದೃಷ್ಟಿಯಿಂದ ಶಿಲ್ಪದ ಗುಣಮಟ್ಟವನ್ನು ಹೆಚ್ಚು ಮಾಡುವುದು. ಇವೇ ನಮ್ಮ ಇದುವರೆಗಿನ ಶಿಲ್ಪಕಲೆಯ ಅಧ್ಯಯನದ ಮುಖ್ಯ ಉದ್ದೇಶಗಳಾಗಿವೆ ಎನ್ನಬಹುದು.

ಹೊರನಾಡಿನಿಂದ ಬಂದು ಭಾರತೀಯ ಸಂಸ್ಕೃತಿಯ ಕೇವಲ ಹೊರ ಪದರದ ಸ್ವರೂಪವನ್ನು ಮಾತ್ರವೇ ಗ್ರಹಿಸಿದ್ದ ಅಥವಾ ಅರ್ಥ ಮಾಡಿಕೊಂಡಿದ್ದ ಪಾಶ್ಚಾತ್ಯಾ ವಿದ್ವಾಂಸರ ಶಿಲ್ಪಕಲಾ ಅಧ್ಯಯನದ ಈ ರೀತಿಯ ಪರಿಕಲ್ಪನೆ ಅಂತರ ಅಧ್ಯಯನ ದೃಷ್ಟಿಯ ಮಟ್ಟಿಗೆ ಸರಿ ಎನ್ನಿಸಬಹುದು ನರನಾಡಿಗಳಲ್ಲಿ ಭಾರತೀಯ ರಕ್ತವನ್ನು ಹೊಂದಿರುವ ನಮ್ಮ ವಿದ್ವಾಂಸರ ಶಿಲ್ಪಕಲಾ ಅಧ್ಯಯನ ಬೇರೆಯದೇ ರೀತಿಯದ್ದಾಗಿರಬೇಕಾಗುತ್ತದೆ ಎಂಬುದು ಇಲ್ಲಿ ಗಮನಿಸಬೇಕಾದ ಅಂಶ.

ಪಾಶ್ಚಾತ್ಯಕಲೆ ಅಧ್ಯಯನದಲ್ಲಿ ಇರುವಂತೆ ನಮ್ಮ ಸಂಪತ್ತಿನ ಅಧ್ಯಯನವೂ ಸಹ ವೈವಿಧ್ಯಮಯ ದೃಷ್ಟಿಕೋನವನ್ನು ಹೊಂದಿರಬೇಕಾಗುತ್ತದೆ. ನಮ್ಮ ಮೇಲೆ ತಿಳಿಸಿದ ರೀತಿಯ ಅಧ್ಯಯನಗಳು ತೀರಾ ಸಂಪ್ರದಾಯಿಕವೆನಿಸಿದರೆ ಹೊಸ ರೀತಿಯ ಅಧ್ಯಯನದಿಂದ ಶಿಲ್ಪಕ್ಕೆ, ಶಿಲ್ಪಿಗೆ, ಶಿಲ್ಪಕಂಡರಣಾ ವಿಧಾನಕ್ಕೆ ಶಿಲ್ಪದ ಉದ್ದೇಶಕ್ಕೆ ಹಾಗೂ ಇನ್ನೂ ಅನೇಕ ತರವಾದ ವಿಷಯ ಸಂಗ್ರಹಕ್ಕೆ ಅನುಕೂಲವಾಗುತ್ತದೆ.

ಕೇವಲ ಧರ್ಮ, ಜಾತಿ, ಸಾಮಾಜಿಕ, ಚಾರಿತ್ರಿಕ, ಧಾರ್ಮಿಕ ಮುಂತಾದ ಇನ್ನೂ ಅನೇಕ ವಿಷಯಗಳಿಗೆ ಸಂಬಂಧಿಸಿದ ಸಾಂಕೇತಿಕ ಹಾಗೂ ನಿಗೂಢ ಮಾಹಿತಿಗಳನ್ನು ಹೊಸ ರೀತಿಯ ಅಧ್ಯಯನ ವಿಧಾನಗಳಿಂದ ತಿಳಿಸಬಹುದಾಗಿದೆ. ಈ ಹೊಸ ರೀತಿಯ ಅಧ್ಯಯನದ ಕೆಲವೊಂದು ಮಾರ್ಗಗಳನ್ನು ವಿಧಾನಗಳನ್ನು ಈ ಕೆಳಗೆ ಪಟ್ಟಿ ಮಾಡುವ ಪ್ರಯತ್ನ ಮಾಡಲಾಗಿದೆ.

ಶಿಲ್ಪ ಕೆತ್ತನೆಯ ತಾಂತ್ರಿಕ ಅಂಶಗಳು

ಯಾವುದೇ ಒಂದು ವಸ್ತುವಿನ ತಯಾರಿಕೆಯ ಹಿಂದಿನ ತಾಂತ್ರಿಕ ಜ್ಞಾನ ಅತ್ಯಂತ ಮುಖ್ಯ. ಶಿಲ್ಪವನ್ನು ಕೆತ್ತನೆ ಮಾಡುವಾಗ ಶಿಲ್ಪದ ಸಂಪೂರ್ಣ ಗುಣಲಕ್ಷಣದ ಕಲ್ಪನೆ ಶಿಲ್ಪಿಗಿರಬೇಕು. ಅದಕ್ಕಾಗಿ ಪ್ರಾರಂಭದ ಹಂತದಿಂದಲೂ ಆತನು ಮುಂದಾಲೋಚನೆಯಿಂದ ಮುನ್ನೆಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು.

ಎಲ್ಲರಿಗೂ ತಿಳಿದಿರುವಂತೆಯೇ ಶಿಲ್ಪ ಕೆತ್ತನೆಯ ವಿಧಾನದಲ್ಲಿ ಉಬ್ಬುಶಿಲ್ಪ, ಪೂರ್ಣಶಿಲ್ಪ ವಿಧಾನಗಳೂ ಬಹಳ ಮುಖ್ಯವಾದವು. ಉಬ್ಬು ಶಿಲ್ಪದ ಕೆತ್ತನೆಯಲ್ಲಿ ತಾಂತ್ರಿಕ ಮುಂದಾಲೋಚನೆ ಸ್ವಲ್ಪಮಟ್ಟಿಗೆ ಕಡಿಮೆ ಏಕೆಂದರೆ ಇದರಿಂದಾಗಿ ಮುಂದೆ ಎದುರಾಗುವ ಎಡರು–ತೊಡರು ಅಲ್ಪ. ಮೂರು ಆಯಾಮ (3D)ದ ಶಿಲ್ಪಗಳು ಕೆತ್ತನೆಯಲ್ಲಿ ಹೆಚ್ಚು ಪ್ರಯಾಸಕರ ಶಿಲ್ಪದ ಎತ್ತರ ಅಗಲಕ್ಕನುಗುಣವಾಗಿ ಭಾವಭಂಗಿಗೆ ಅನುಗುಣವಾಗಿ ಅದರ ಆಳವೂ ವ್ಯತ್ಯಾಸವಾಗುತ್ತದೆ.

ಶಿಲ್ಪಿಗೆ ಇದೆಲ್ಲದರ ಒಂದು ಪರಿಕಲ್ಪನೆ ಅತ್ಯವಶ್ಯಕ ಇದ್ದು ಇದರ ಅನುಗುಣವಾಗಿ ಆತ ಕೆತ್ತನೆಯ ಕಾಯಕ ಪ್ರಾರಂಭಿಸಬೇಕಾಗುತ್ತದೆ. ಶ್ರವಣಬೆಳಗೊಳದ ಜಗದಿಖ್ಯಾತ ಬಾಹುಬಲಿ ೬೦ ಅಡಿ ಎತ್ತರದ ವಿಗ್ರಹ, ಬೃಹದಾಕಾರದ ಶಿಲ್ಪ ತಯಾರಿಕೆಯಲ್ಲಿ ಭಾರತೀಯ ಶಿಲ್ಪಿಗಳಿಗಿದ್ದ ಅಪ್ರತಿಮ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.

ಕರ್ನಾಟಕ ರಾಜ್ಯದಲ್ಲಿ ಅನೇಕ ಪ್ರಖ್ಯಾತ ರಾಜವಂಶಗಳಿಗೆ ಸೇರಿದ ರಾಜ, ಮಹಾರಾಜ, ಚಕ್ರವರ್ತಿಗಳು ಆಳ್ವಿಕೆ ನಡೆಸಿದ್ದಾರೆ. ಕಂದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಯಾದವ, ಹೊಯ್ಸಳ, ವಿಜಯನಗರ, ಕೆಳದಿ, ಮೈಸೂರು ಒಡೆಯರ ಮುಂತಾದ ರಾಜವಂಶಗಳ ರಾಜರು ತಮ್ಮ ಧೈರ್ಯ, ಶೌರ್ಯ, ರಸಿಕತೆ ಪ್ರಜಾರಹಿತ ಆಡಳಿತ, ದಾನ ಧರ್ಮಕಾರ್ಯಗಳು, ಸಾಹಿತ್ಯ ಸಂಗೀತ, ವಾಸ್ತುಶಿಲ್ಪ ಇವುಗಳ ನಿರ್ಮಾಣ ಹೀಗೆ ಹಲವಾರು ರೀತಿಯ ಕಾರ್ಯಗಳಿಂದ ಜನರ ಮನಸ್ಸಿನಲ್ಲಿ ಅಚ್ಚಳಿಯದ ನೆನವು, ಗೌರವು ಮೂಡಿಸಿದ್ದಾರೆ.

ರಾಜರುಗಳೇ ಅಲ್ಲದೇ ಸಾಮಂತರು, ಅಧಿಕಾರಿಗಳು, ಸಿರಿವಂತ ಪ್ರಜೆಗಳು ದೈವಭಕ್ತಿಯುಳ್ಳ ಸಾಮಾನ್ಯ ಜನರು ಅನೇಕ ಜನೋಪಕಾರಿ ಕಾರ್ಯಗಳನ್ನು ಎಸಗಿದುದೇ ಅಲ್ಲದೆ ಹಿಂದು, ಜೈನ, ಬೌದ್ಧ ಮುಂತಾದ ವಿವಿಧ ಧರ್ಮಗಳಿಗೆ ಸೇರಿದ ಪ್ರಜಾ ಸ್ಥಳಗಳನ್ನು ನಿರ್ಮಿಸಿದ್ದಾರೆ. ವಾಸ್ತು ಮತ್ತು ಶಿಲ್ಪಗಳ ಉತ್ಕೃಷ್ಟತೆಯ ಕೋನದಿಂದ ನೋಡಿದಾಗ, ಅನೇಕ ದೇವಾಲಯಗಳು ನೋಡುವವರನ್ನು ಅಚ್ಚರಿಗೊಳಿಸುತ್ತದೆ.

ಈ ರಾಜ್ಯವನ್ನು ಆಳಿದ ಹಲವಾರು ಪ್ರಮುಖ ರಾಜವಂಶಗಳಲ್ಲಿ ಕಲ್ಯಾಣ ಚಾಲುಕ್ಯರು ಒಬ್ಬರು ಕ್ರಿ.ಶ. ೯೭೩ರಿಂದ ಕ್ರಿ.ಶ. ೧೧೨೬ರವರೆಗೂ ಸುಮಾರು ಎರಡು ಶತಮಾನಗಳ ಕಾಲ ಆಳ್ವಿಕೆ ನಡೆಸಿದ ಈ ವಂಶದ ಅರಸರು ರಾಜಕೀಯ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಭಾರತದ ಇತಿಹಾಸದ ಪುಟಗಳಲ್ಲಿ ಅಳಿಸಲಾಗದ ಹೆಜ್ಜೆಗುರುತುಗಳನ್ನು ಮೂಡಿಸಿದ್ದಾರೆ.

ಈ ಅವಧಿಯಲ್ಲಿ ಇವರ ಸಾಮ್ರಾಜ್ಯದ ದಕ್ಷಿಣಕ್ಕಿದ್ದ ಚೋಳರೊಂದಿಗೆ ಕದನಗಳಲ್ಲಿ ನಿರತರಾಗಿದ್ದರೂ, ಸಹ ಸಾಮ್ರಾಜ್ಯದಲ್ಲಿ ಶಾಂತಿ, ಸಮೃದ್ಧಿ ನೆಲೆಸುವಂತೆ ಮಾಡಿದ ಕಾರ್ಯಗಳಿಗೆ, ಅದರಲ್ಲೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಾಢವಾದ ಚಟುವಟಿಕೆಗಳಿಗೋಸ್ಕರ ಪ್ರಖ್ಯಾತರಾಗಿದ್ದಾರೆ. ಈ ಅವಧಿಯಲ್ಲಿ ರಾಜರೇ ಅಲ್ಲದೇ ರಾಜ್ಯದ ಶ್ರೀಮಂತರು ಮತ್ತು ಗಣ್ಯರು ಪುಣ್ಯ ಸಂಪಾದನೆ ಗಳಿಸಬೇಕೆಂಬ ತೀವ್ರವಾದ ಇಚ್ಛೆಯಿಂದ ಅನೇಕ ಪ್ರಜಾಸ್ಥಳಗಳ ನಿರ್ಮಾಣಕ್ಕೆ ಕಾರಣರಾದರು. ಪ್ರಜಾಸ್ಥಳಗಳ ನಿರ್ಮಾಣದ ಸಂಖ್ಯೆಯ ದೃಷ್ಟಿಯಿಂದ ಈ ಅವಧಿ ಮಹತ್ವವಾದದು.

ಈ ರಾಜವಂಶೀಯರ ಆಳ್ವಿಕೆಯ ಕಾಲದ ಹಿಂದಿನದು ಹಾಗೂ ನಂತರದ ಅವಧಿಗಳಿಗಿಂತ ಅತಿ ಹೆಚ್ಚು ಸಂಖ್ಯೆಯ ನಿರ್ಮಾಣ ಒಂದು ದಾಖಲೆಯನ್ನೇ ಸೃಷ್ಟಿಸಿತು. ಪ್ರಜಾ ಸ್ಥಳಗಳು ಹಿಂದೂ ಜೈನ, ಬೌದ್ಧ ಪಂಥಗಳಿಗೆ ಸೇರಿದ್ದವು.

ಕರ್ನಾಟಕ ರಾಜ್ಯದ ಉದ್ದಗಲಕ್ಕೂ ಈ ಸಂಪ್ರದಾಯ ಶೈಲಿಯಲ್ಲಿ ನಿರ್ಮಿತವಾದ ಅನೇಕ ಪ್ರಜಾ ಸ್ಥಳಗಳಿವೆ. ಬೇಲೂರು ಹಳೇಬೀಡು, ಬದಾಮಿ, ಹಂಪಿ, ಚಿತ್ರದುರ್ಗ, ಕುಕ್ಕನೂರಿನ ನವಲಿಂಗ ಮತ್ತು ಕಲ್ಲೇಶ್ವರ ದೇವಾಲಯಗಳು ಲಕ್ಕುಂಡಿಯಲ್ಲಿನ ಕಾಳಿ ವಿಶ್ವೇಶ್ವರ ದೇವಾಲಯ ಮತ್ತು ಜೈನ ಬಸದಿ ಬೀದರ ಜಿಲ್ಲೆಯ ಜಲಸಂಗಿಯ ಶಿವದೇವಾಲಯ, ಗುಲ್ಬರ್ಗ ಜಿಲ್ಲೆಯ ಅರಳೀ ಕಟ್ಟೆಯ ಹನುಮದೇವಾಲಯ, ಇತ್ಯಾದಿ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾದ ದೇವಾಲಯಗಳಲ್ಲಿ ಹಲವೊಮ್ಮೆ ಮಿತವಾದ ಹಲವೊಮ್ಮೆ ಅತಿಯಾದ ಅಲಂಕರಣ ಕಾಣಬರುತ್ತದೆ. ಆದರೆ ಕ್ರಿ.ಶ. ೧೧-೧೨ನೇ

ಶತಮಾನಗಳಲ್ಲಿ ನಿರ್ಮಿಸಲಾದ ಕಲ್ಯಾಣ ಚಾಲುಕ್ಯರ ದೇವಾಲಯಗಳು ಅಲಂಕಾರ ರಹಿತವಾಗಿವೆ. ಸಾಮಾನ್ಯವಾಗಿ ಈ ಕಾಲದ ದೇವಾಲಯಗಳನ್ನು ವೇಸರ ಹಾಗೂ ನಾಗರ ಶೈಲಿಯಲ್ಲಿ ನಿರ್ಮಿಸಿದೆ. ಆದರೆ ಶಿವ ದೇವಾಲಯಯಗಳು ರೇಖಾ ನಾಗರ ಶೈಲಿಯಲ್ಲಿವೆ.

ರಾಷ್ಟ್ರಕೂಟರ ಆಳ್ವಿಕೆಯ ನಂತರ ಕಲ್ಯಾಣಚಾಲುಕ್ಯರ ಆಳ್ವಿಕೆ ಪ್ರಾರಂಭವಾಯಿತು. ಈ ಕಾರಣದಿಂದ ರಾಷ್ಟ್ರಕೂಟ ಶೈಲಿಯ ನಂತರ ತಕ್ಷಣವೇ ಕಲ್ಯಾಣ ಚಾಲುಕ್ಯ ಶೈಲಿ ಆರಂಭವಾಯಿತಾದರೂ ರಾಷ್ಟ್ರಕೂಟರ ಶೈಲಿಯ ಸಂಪ್ರದಾಯದಿಂದ ನಿಶ್ಚಿತ ರೂಪದ ಭಿನ್ನತೆ ಕಂಡುಬರುವುದು. ರಾಷ್ಟ್ರಕೂಟರ ಕಾಲದ ವೈಶಿಷ್ಟವಾದ ಬಂಡೆಗಳಿಂದ ಕಡೆದ ಶಿಲ್ಪ ತಯಾರಿಸುವ ರೀತಿ ನಿಂತಿತ್ತು. ಕಲ್ಯಾಣ ಚಾಲುಕ್ಯರಕಾಲದ ಶಿಲ್ಪಗಳು ಬಳಸುವ ಸಾಧನ ಹಾಗೂ ಶಿಲ್ಪತಯಾರಿಕೆಯ ಕ್ರಮದಲ್ಲಿ ಬದಲಾವಣೆಗಳನ್ನು ಬಳಸಿದರು.

ಇದರಿಂದ ಈ ಶೈಲಿಯನ್ನು ಅನುಸರಿಸಿದ ಶಿಲ್ಪಗಳಿಗೆ ವಿಶಾಲವಾದ ಶಿಲ್ಪವನ್ನು ಸಂಯೋಜಿಸಲು ಅನುಕೂಲಕರವಾದ ಅಂಶ ನಷ್ಟವಾಯಿತು. ಮತ್ತೊಂದು ಮಹತ್ವದ ಅಂಶವೆಂದರೆ ಈ ಶೈಲಿಯನ್ನು ಅನುಸರಿಸಿದ ಶಿಲ್ಪಿಗಳು ಶಿಲ್ಪಗಳ ಕಡೆಯುವಿಕೆಗೆ ಕಗ್ಗಲನ್ನು ಬಿಟ್ಟು ಕರಿಗಲ್ಲನ್ನು ಆಯ್ಕೆ ಮಾಡಿದ್ದು, ಈ ಕಲ್ಲು ಮೆದುವಾಗಿರುವುದಲ್ಲದೇ ಉತ್ಕೃಷ್ಟವಾದ ಕಣಕಣಗಳ ಶಿಲ್ಪಗಳ ರಚನೆ ಮಾಡಲು ಅನುಕೂಲಕರವಾಗಿದ್ದು ಅಲ್ಲದೆ,

ಈ ಕಲ್ಲಿನ ಉಪಯೋಗ ಆರಂಭದೊಡನೆ, ಶಿಲ್ಪರಚನೆಯಲ್ಲಿ ಒಂದು ಹೊಸತನ ಮೂಡಿ ಹೊಸ ಸಂಪ್ರದಾಯದ ಆರಂಭವಾಯಿತು. ಕರಿಗಲ್ಲಿನಲ್ಲಿ ಕಡೆದ ಮೂರ್ತಿಗಳು ಕಲ್ಲಿನಲ್ಲಿ ಕಡೆದ ಮೂರ್ತಿಗಳಿಗಿಂತ ಸಣ್ಣ ಪ್ರಮಾಣದ್ದಾದವು.

ಸ್ತ್ರೀ ಅಥವಾ ದೇವತೆಗಳ ಬಿಡಿ ಮೂರ್ತಿಗಳು ಪ್ರಚಾರಕ್ಕೆ ಬಂದವು ಇದನ್ನು ಗಮನಿಸಿದವರಿಗೆ ಈ ಶೈಲಿ ರಾಷ್ಟ್ರಕೂಟರ ಕಾಲದ ಶೈಲಿಗಿಂತ ಸ್ಪಷ್ಟವಾಗಿ ಭಿನ್ನವಾಗಿರುವುದು ವೇದ್ಯವಾಗುತ್ತದೆ. ಈ ಮೆದು ಸ್ವಭಾವದ ಕಲ್ಲು ಶಿಲ್ಪಗಳು ಕೆತ್ತುವಿಕೆ, ಗೋರುವಿಕೆ ಮುಂತಾದವುಗಳನ್ನು ಸುಲಭವಾಗಿ ಸಾಧ್ಯವಾಗುವಂತೆ ಮಾಡಬಹುದಾಗಿತ್ತು.

ಶಿಲ್ಪಿಗಳು ಸೂಕ್ಷ್ಮರೀತಿಯ ಕೆತ್ತನೆ ಕಡೆ ಒಲವು ತೋರಿದರು ಬಳಿಕ ಕೆಲಸದ ಅಲಂಕಾರದಂತೆ ಈ ಸೂಕ್ಷ್ಮ ಕೆತ್ತನೆ ಕಂಡು ಬಂತು ಮೂರ್ತಿಗಳ ಶಿಲ್ಪದಲ್ಲಿ ಆಭರಣಗಳಿಲ್ಲದ ಹೊರಮೈಯ ಭಾಗಗಳಿಗೆ ಮೆರಗು ಕೊಡುವ ಪದ್ಧತಿ ಭಾರತದ ಶಿಲ್ಪ ತಯಾರಿಕೆಯ ವಿಧಾನದಲ್ಲಿ ಮೊದಲ ಬಾರಿಗೆ ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪಗಳಿಂದ ಆರಂಭವಾಯಿತು.

ಕಲ್ಯಾಣ ಚಾಲುಕ್ಯರ ಕಾಲದ ಶಿಲ್ಪಗಳೆಲ್ಲಾ ಶಿಲೆಯಲ್ಲಿ ಕಡೆದವುಗಳು ಹಲವಾರು ಮೂರ್ತಿಗಳನ್ನು ಅವಲೋಕಿಸಿದಾಗ ಅಂದಿನ ಶಿಲ್ಪಿಗಳು ಈ ಮೂರ್ತಿಗಳನ್ನು ಕಡೆದಾಗ, ಕೆಳಗೆ ಸೂಚಿಸಿದ ಅಭಿಪ್ರಾಯವನ್ನು ಹೊಂದಿದ್ದರೆಂದು ನಮಗೆ ಮನವರಿಕೆಯಾಗುತ್ತದೆ.

೧. ಪ್ರಜಾ ಸ್ಥಳಗಳಲ್ಲಿ ಹಾಗೂ ಗೋಡೆಗಳಲ್ಲಿನ ಗೂಡುಗಳಲ್ಲಿ ಬಳಸುವಿಕೆ.

೨. ಗೋಡೆಗಳ ಮೇಲೆ, ಕಂಬಗಳ ಮೇಲೆ ಹಾಗೂ ಮೇಲ್ಛಾವಣಿಗಳಲ್ಲಿನ ಮೂರ್ತಿಗಳು.

೩. ಸಾಂಪ್ರದಾಯಿಕ ಕಥೆಗಳ ನಿರೂಪಣೆಯಿರುವ ಪಟ್ಟಿಕೆಗಳು.

೪. ಕೀರ್ತಿಮುಖ ಹಾಗೂ ಹೂವುಬಳ್ಳಿಗಳಿಂದ ಅಲಂಕೃತವಾದ ಶಿಲ್ಪಗಳು.

ಪ್ರಜಾಸ್ಥಳಗಳಲ್ಲಿ ಹಿಂದೂ, ಶೈವ, ಜೈನ, ಬೌದ್ಧಮೂರ್ತಿಗಳಿವೆ. ಹಿಂದೂ ಧರ್ಮಕ್ಕೆ ಸೇರಿದ ದೇವ ದೇವತೆಗಳ ಮೂರ್ತಿಗಳು ಅತಿ ಹೆಚ್ಚು ಸಂಖ್ಯೆಯಲ್ಲಿವೆ. ಸಾಕಷ್ಟು ಮೂರ್ತಿಗಳಿವೆ. ಆದರೆ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಮೂರ್ತಿಗಳು ವಿರಳವಾಗಿವೆ. ಕಿವಿ ಮುರುವು ಕಂಠಿಹಾರ, ಶಿರಸ್ತ್ರಾಣ ಮೊದಲಾದ ಕಲ್ಯಾಣ ಚಾಲುಕ್ಯ ಶಿಲ್ಪಕಲೆಯ ವೈಶಿಷ್ಟ್ಯತೆಯಾಗಿದೆ. ಕಿರೀಟ ಹಾಗೂ ಜಟಾಮುಕುಟಗಳೂ ಸಂತಾ ಸುಂದರವಾದ ವಿನ್ಯಾಸಗಳು ರಚಿಸಲಾಗಿದೆ.

ಹಿರೇಮನ್ನೂರಿನ ವಿಷ್ಣುಮೂರ್ತಿ, ಕರುವತ್ತಿಯಲ್ಲಿನ ಅನೇಕ ಮದನಿಕಾ ಮೂರ್ತಿಗಳು, ಜಲಸಂಗಿಯ ಶಾಸನ ಸುಂದರಿ, ಮಡಿಹಾಳದ ಆನೆ ಮುಂತಾದವು ಈ ಕಾಲದ ಶಿಲ್ಪಗಳ ಕೌಶಲ್ಯದ ಸಾಕ್ಷಿಗಳು, ಈ ಕಾಲದಲ್ಲೇ ದಕ್ಷತ್ರಾಕಾರದ ಹೊರಭಕ್ತಿ ಮತ್ತು ಜಲಸಂಗಿಯ------ ಭಿತ್ತಿಯಲ್ಲಿ ಕೋಷ್ಟಕ ಶಿಲ್ಪಗಳು ಕಂಡು ಬಂದಿರುವುದು ನೋಡಬಹುದು.

ಕಲ್ಯಾಣ ಚಾಲುಕ್ಯರ ಶಿಲ್ಪಶೈಲಿಯಲ್ಲಿ ಬಾದಾಮಿ ಚಾಲುಕ್ಯರ ಶಿಲ್ಪ ಶೈಲಿಯಲ್ಲಿದ್ದ ತೇಜಸ್ಸು, ಚೈತನ್ಯ, ಸರಳತೆ, ಶಕ್ತಿ, ಶೌರ್ಯದೊಂದಿಗೆ ಬೆಳವಣಿಗೆಯ ಹಂತವಾಗಿ ಅಲಂಕಾರಿಕ ಅಂಶಗಳು ಬಳ್ಳಿಗಳ ನಿರೂಪಣೆ ಮತ್ತು ಕೇಶವಿನ್ಯಾಸ ಆಭರಣಗಳ ರಚನೆಯಲ್ಲಿ ಕಂಡು ಬಂದಿದ್ದು ಹೊಳಪಿನಿಂದ ಕೂಡಿದ ಶಿಲ್ಪಗಳ ರಚನೆಯ ಪ್ರಾರಂಭಿಕ ಹಂತವನ್ನು ಇಲ್ಲಿ ಗುರುತಿಸುತ್ತಾರೆ.

'ಡಾ. ಶಿವರಾಂ ಕಾರಂತ'ರು ತಮ್ಮ ಭಾರತೀಯ ಶಿಲ್ಪಕಲೆಯಲ್ಲಿ ಇದನ್ನು ಅವನ ಆಯ್ದ ಹಂತ ಎಂದು ಗುರುತಿಸಿದ್ದಾರೆ, ಕಲ್ಯಾಣ ಚಾಲುಕ್ಯರ ನಂತರ ಬಂದ ಹೊಯ್ಸಳರ ಶಿಲ್ಪಗಾರಿಕೆಯಲ್ಲಿ ಅತಿ ನಯಗಾರಿಕೆ ಹೊಳಪು ಮೂಡುವಂತೆ ಆಭರಣಗಳ ಹೇರುವಿಕೆ ಕುಸುರಿ ಕೆಲಸದ ಹೆಚ್ಚಳ ಇಲ್ಲಿದ್ದು ಈ ಶಿಲ್ಪಿಗಳ ಮುಖಾಂತರ ಗುರುತಿಸಬಹುದು. ಈ ಸಂಗ್ರಹಾಲಯದಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ಹಲವು ಹಿಂದೂ, ಜೈನ ಶಿಲ್ಪಗಳಲ್ಲಿ ಈ ಮೇಲಿನ ಅಂಶಗಳನ್ನು ಗಮನಿಸಬಹುದು.

೧)ವೀರಗಲ್ಲು

ಈ ಶಿಲ್ಪದಲ್ಲಿ ವೀರದಂಪತಿಗಳು ನಿಂತಿರುವ ಭಂಗಿಯಲ್ಲಿ ಕೆತ್ತಲಾಗಿದೆ. ಈ ಶಿಲ್ಪದ ಅಂಗರಚನಾಕೃತಿಯು ಕುಂಠಿತಗೊಂಡಿದ್ದು, ಕುಬ್ಜಾಕೃತಿಯನ್ನು ನಾವುಈ ಶಿಲ್ಪದಲ್ಲಿ ಕಾಣುತ್ತೇವೆ. ಇಲ್ಲಿ ವೀರನ ಕೈಯಲ್ಲಿ ಖಡ್ಗವನ್ನು ಹಿಡಿದಿದ್ದಾನೆ. ವೀರದಂಪತಿಗಳ ಕೇಶ-ವಿನ್ಯಾಸ ಮತ್ತು ಉಡುಗೆ ತೊಡುಗೆಯು ವಿಶಿಷ್ಟವಾಗಿದೆ.

೨)ವೀರಗಲ್ಲು.

ಈ ಶಿಲ್ಪವು ಕಾಲ ಕ್ರಿ.ಶ ೧೭ನೇ ಶತಮಾನದಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸ್ಥಳ ಗಂಗಾವತಿಯಿಂದ ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಶಿಲ್ಪವು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದ್ದು, ಈ ಶಿಲ್ಪದ ಅಂಗರಚನೆಯ

ಪ್ರಮಾಣ ಬದ್ದತೆಯು ಕುಂಠಿತಗೊಂಡಿಂದ್ದು, ಈ ಶಿಲ್ಪದಲ್ಲಿ ವೀರನು ಯುದ್ದದಲ್ಲಿ , ಯುದ್ದ ಮಾಡುವ ಒಂದು ಸನ್ನಿವೇಶವನ್ನು ಇಲ್ಲಿ ನಿಂತ ಭಂಗಿಯಲ್ಲಿ ಕೇತ್ತಲಾಗಿದೆ.

ಈ ಶಿಲ್ಪದಲ್ಲಿ ತನ್ನ ಎರಡು ಕೈಗಳಲ್ಲಿ ಸಶಸ್ತ್ರಗಳನ್ನು ಹಿಡಿದಿದ್ದಾನೆ. ಬಲಗೈಯಲ್ಲಿ ಕತ್ತಿಯನ್ನು ಎಡಗೈಯಲ್ಲಿ ಪಂಚಕಾಚರೀಯನ್ನು ಹಿಡಿದ್ದು. ಯುದ್ದದಲ್ಲಿ ನಿರತರಾಗಿದ್ದಾನೆ. ಯುದ್ದದ ವಸ್ತ್ರಾಭರಣಗಳನ್ನು ಧರಿಸಿದ್ದಾನೆ. ಸೂರ್ಯ ಮತ್ತು ಚಂದ್ರನ್ನು ಸಂಕೇತಿಕಾವಾಗಿ ಹೀಂಭಾಗದಲ್ಲಿ ಕೆತ್ತಿಲಾಗಿದೆ. ಮುಖದ ಭಾಗವು ಸ್ವಲ್ಪಹಾನಿಯಾಗಿದೆ.

೩) ವೀರಗಲ್ಲು.

ಈ ಶಿಲ್ಪವು ಕಾಲ ಕ್ರಿ ಶ ೧೮ನೇ ಶತ,ಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ, ಸ್ಥಳ ಗಬ್ಬೂರಿನಿಂದ ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಲಾಗಿದೆ. ಈ ಶಿಲ್ಪವನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪದ ಅಂಗ ರಚನಾ ಪ್ರಮಾಣ ಬದ್ದವು ಚೌಕಟ್ಟಿನ ಒಳಗೆ ವೀರಗಲ್ಲಿನ ಶಿಲ್ಪವನ್ನು ಕೆತ್ತಲಾಗಿದೆ. ಇಲ್ಲಿ ವೀರನು ಯುದ್ದ ಮಾಡುವ ನೊಂತ ಭಂಗಿಯಲ್ಲಿದ್ದು , ಬಾಣ ಮತ್ತು ಬಿಲ್ಲು ಸಶಸ್ತ್ರಗಳನ್ನುಉ ಕೈಯಲ್ಲಿಡಿದಿದ್ದಾನೆ. ವಸ್ತ್ರವಿನ್ಯಾಸವು ಅಸ್ಪಷ್ಟ ರೇಖೆಗಳಿಂದ ಕೂಡಿದೆ.

೪) ವೀರಗಲ್ಲು.

ಈ ಶಿಲ್ಪವು ಕಾಲ ಕ್ರಿ.ಶ. ೧೭ನೇ ಶತಮಾನದಲ್ಲಿ ಕೆತ್ತಲಾಗಿದ್ದು. ರಾಯಚೂರು ಜಿಲ್ಲೆಯ ರಾಯಚೂರು ತಾಲೂಕಿನ ಸ್ಥಳ ರಾಮಲಿಂಗೇಶ್ವರ ದೇವಸ್ಥಾನದಿಂದ ರಾಯಚೂರಿನ ವಸ್ತು ಸಂಗ್ರಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವನ್ನು ಕಪ್ಪು ಸೋಪ್ ಕಲ್ಲಿನಲ್ಲಿ ಕೇತ್ತಲಾಗಿದೆ. ಈ ಶಿಲ್ಪದಲ್ಲಿ ವೀರನ ಅಂಗರಚನೆಯು ಪ್ರಮಾಣಬದ್ದವಾಗಿದ್ದು.

ಯುದ್ದದ ಒಂದು ಸನ್ನಿವೇಶವನ್ನು ಇಲ್ಲಿ ನಾವು ಕಾಣಬವುದು. ಈ ಶಿಲ್ಪದಲ್ಲಿ ವೀರನ ಕೈಯಲ್ಲಿ ಖಡ್ಗ ಮತ್ತು ಗುರಾಣಿ ಸಶಸ್ತ್ರವನ್ನು ಹಿಡಿದಿದ್ದಾನೆ. ಈ ಶಿಲ್ಪದಲ್ಲಿ ವೀರನ ವಸ್ತ್ರ ಮತ್ತು ಕೇಶವಿನ್ಯಾಸವು ವಿಶೇಷವಾಗಿದೆ. ವೀರನ ಹಿಂಬಾಗದಲ್ಲಿ ಸೈನಿಕರು ಯುದ್ದದಲ್ಲಿ ನಿರತರಾಗಿರುವ ದೃಶ್ಯವನ್ನು ಸೂಕ್ಷ್ಮದಾದ ರೇಖೆಗಳಿಂದ ಕೆತ್ತಲಾಗಿದೆ. ವೀರನ ಮುಖವು ಭಗ್ನವಾಗಿದೆ.

೫) ವೀರಗಲ್ಲು.

ಈ ಶಿಲ್ಪವು ಕ್ರಿ ಶ. ೧೬ ಮತ್ತು ೧೭ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಲ್ಪವು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಗಂಗಾವತಿ ಸ್ಥಳದಿಂದ ರಾಯಚೂರು ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಪಾಚಿ ನೀಲಿಗಲ್ಲಿನಲ್ಲಿ ಕೆತ್ತಲಾಗಿದೆ.

ಈ ಶಿಲ್ಪದಲ್ಲಿ ವೀರನು ಕುದುರೆಯ ಮೇಲೆಕುಳಿತು ಯುದ್ದಕ್ಕೆ ಹೋಗುವ ಅಥವಾ ಯುದ್ಧದಲ್ಲಿ ನಿರತರಾಗಿರುವ ದೃಶ್ಯದ ಸನ್ನಿವೇಶವು ಇದಾಗಿದೆ. ಈ ಶಿಲ್ಪದಲ್ಲಿ ಇಬ್ಬರು ಸೇವಕರನ್ನು ಕುಬ್ಜವನ್ನು ಆಕಾರವುಗಳಾಗಿದ್ದು ಸೇವಕರ ಕೈಯಲ್ಲಿ ಚಾಮರ ಹಿಡಿದು ಹೊಗುತ್ತಿರುವ ದೃಶ್ಯವಾಗಿದೆ. ಈ ಶಿಲ್ಪದಲ್ಲಿ ರಾಜನ ಮುಖವು ಭಗ್ನವಾಗಿದೆ, ರಾಜನ ವಸ್ತ್ರವಿನ್ಯಾಸದ ಕೆತ್ತನೆಯು ಅತ್ಯಂತ ಸುಂದರವಾಗಿದೆ.

೬) ವೀರಗಲ್ಲು.

ಈ ಶಿಲ್ಪವು ಕ್ರಿ.ಶ. ೧೭ ಮತ್ತು ೧೮ನೇ ಶತಮಾನದಲ್ಲಿ ರಾಯಚೂರ ಜಿಲ್ಲೆಯ ದೇವದುರ್ಗ ತಾಲೂಕಿನ ಸ್ಥಳ ಗಬ್ಬೂರಿನಿಂದ ರಾಯಚೂರನ ವಸ್ತು ಸಂಗ್ರಹಲಾದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವನ್ನು ಗಚ್ಚಿ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪದಲ್ಲಿ ವೀರನು ನವಿಲಿನ ಮೇಲೆ ಕುಳಿತು ಯುದ್ದ ಮಾಡುವ ಒಂದು ದೃಶ್ಯವಾಗಿದೆ. ವೀರನು ತನ್ನ ಕೈಯಲ್ಲಿ ಬಿಲ್ಲು ಮತ್ತು ಬಾಣವನ್ನು ಹಿಡಿದು ಯುದ್ದದಲ್ಲಿ ಮಗ್ನರಾಗಿರುವ ದೃಶ್ಯವನ್ನು ಇಲ್ಲಿ ಕಾಣಬಹುದು.

೭) ವೀರಗಲ್ಲು.

ಈ ಶಿಲ್ಪವನ್ನು ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವನ್ನು ಗಚ್ಚಿಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪ ಅಂಗರಚನಾ ಕೃತಿಯು ಕಂಠಿತಗೊಂಡಿದೆ. ವೀರನು ತನ್ನ ಕೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ. ಪಕ್ಕದಲ್ಲಿ ಚಿಕ್ಕಗಾತ್ರದ ಒಂದು ಮಗುವನ್ನು ಕೆತ್ತಲಾಗಿದೆ. ಈ ಶಿಲ್ಪದಲ್ಲಿ ವೀರ ವಸ್ತ್ರ ವಿನ್ಯಾಸ ವೀಶೆಷವಾಗಿದ್ದು. ಉಬ್ಬು ಶಿಲ್ಪದ ಮಾದರಿಯಲ್ಲಿ ಕೆತ್ತಲಾಗಿದೆ. ಶಿಲ್ಪಕೃತಿಯು ಅಸ್ಪಷ್ಟತೆಯಿಂದ ಕೂಡಿದೆ. ಹಿಂಬಾಗದಲ್ಲಿ ರೇಖೆಗಳ ಮುಂಖಾಂತರ ಒಂದು ಹಳ್ಳಿಯ ದೃಶ್ಯ ಗೊಚರಿಸುತ್ತದೆ.

೮) ವೀರಗಲ್ಲು.

ಈ ಶಿಲ್ಪವು ಕಾಲ ಕ್ರಿ.ಶ ೧೭ನೇ ಶತಮಾನದಲ್ಲಿ ಕೋಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ. ಸ್ಥಳ ಗಂಗಾವತಿಯಿಂದ ರಾಯಚೂರಿನ ವಸ್ತುಸಂಗ್ರಹಾಲಾದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಅಸ್ಪಷ್ಟತೆಯಿಂದ ಕೆತ್ತಲಾಗಿದೆ. ಉಬ್ಬು ಶಿಲ್ಪದ ಮಾದರಿಯಲ್ಲಿ ಕೆತ್ತಲಾಗಿದ್ದು. ಇಲ್ಲಿ ವೀರನು ಆನೆಯ ಮೇಲೆ ಕುಳಿತು ಯುದ್ದದ ಸನ್ನಿವೇಶವನ್ನು ಇಲ್ಲಿ ವೀರನ ಉಡುಗೆ ತೊಡುಗೆಯು ಸುಂದರ ಕೂದಲು ಈ ಚಿತ್ರದ ಗುಣಲಕ್ಷಣಗಳಾಇಗವೆ. ಇಲ್ಲಿ ವೀರನು ಪರಸ್ಪರ ವಿರುದ್ದ ಹೋರಾಡುವ ಇಬ್ಬರು ನಾಯಕರು ಹಿಂಬಾಗದಲ್ಲಿ ಚಿತ್ರಸಲಾಗಿದೆ.

೯) ವೀರಗಲ್ಲು.

ಈ ಶಿಲ್ಪವು ಕ್ರಿ ಶ. ೧೬ ಮತ್ತು ೧೮ ನೇ ಶತಮಾನದಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸ್ಥಳ ಗಂಗಾವತಿಯಿಂದ ರಾಯಚೂರಿನ ವಸ್ತು ಸಂಗ್ರಹಲಾದಲ್ಲಿ ಸಂಗ್ರಹಿಸಡಲಾಗಿದೆ. ಈ ಶಿಲ್ಪವನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದ್ದು. ಆಯತಾಕಾರದ

ಚೌಕಟ್ಟಿನಲ್ಲಿ ಉಬ್ಬು ಶಿಲ್ಪದಲ್ಲಿ ಕೆತ್ತಲಾಗಿದೆ. ಈ ಶಿಲ್ಪದಲ್ಲಿ ಅಂಗಸಚನೆ ಪ್ರಮಾಣ ಬದ್ಧವು ಕುಂಠಿತಗೊಂಡಿದ್ದು ನೊಡಲು ಅಸ್ಪಷ್ಟತೆಯಿಂದ ಕುಡಿದೆ.

ಈ ಶಿಲ್ಪದಲ್ಲಿ ಇಬ್ಬರು ವೀರರು ಬಲಬದಿಯಲ್ಲಿ ಕಡೆಗಡ ತಿರುಗಿ ತಮ್ಮ ಕೈಯಲ್ಲಿ ಬಿಲ್ಲು ಮತ್ತು ಬಾಣವನ್ನು ಹಿಡಿದು ಯುದ್ದ ಸನಿವೇಶದಲ್ಲಿ ನಿರತರಾಗಿರುವ ದೃಶ್ಯವನ್ನು ನಾವು ಇಲ್ಲಿ ಕಾಣಬಹುದಾಗಿದೆ.

೧೦) ವೀರಗಲ್ಲು

ಈ ಶಿಲ್ಪವನ್ನು ಕ್ರಿ.ಶ. ೧೪ ಮತ್ತು ೧೬ನೇ ಶತಮಾನದಲ್ಲಿ, ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಆನೆಗುಂದಿ ಸ್ಥಳದಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪವನ್ನು ಕಪ್ಪು ಕಲ್ಲಿನಲ್ಲಿ ಅತ್ಯಂತ ವೈಶಿಷ್ಟ್ಯವಾಗಿ ಶಿಲ್ಪಕಲಾವಿದನು ಕೆತ್ತಿದ್ದಾನೆ. ಈ ಶಿಲ್ಪದಲ್ಲಿ ಇಬ್ಬರು ವೀರರು ಕುದುರೆಯ ಮೇಲೆ ಕುಳಿತಿರುವ ದೃಶ್ಯವನ್ನು ಕಾಣಬಹುದು. ಹಿಂದೆ ಸೇವಕರು ಚಾಮದಾರಿಯನ್ನು ಹಿಡಿದಿದ್ದಾನೆ. ಮುಂಭಾಗದಲ್ಲಿ ಧ್ವಜವನ್ನು ಹಿಡಿದಿರುವ ಸಹಾಯಕರು ಇಲ್ಲಿ ಗಮನಿಸಬಹುದು. ನಾಯಕನು ಎಡಗೈಯಲ್ಲಿ ನೇಗಾದನ್ನು ಹಿಡಿದು, ಬಲಗೈಯಲ್ಲಿ ಕತ್ತಿಯನ್ನು ಹಿಡಿದ್ದಾನೆ. ನಾಯಕನು ಮುಖವು ಅಸ್ಪಷ್ಟತೆಯಿಂದ ಕಾಣುತ್ತಿದ್ದು, ಪ್ರಭಾವಳಿಯು ಭಾಗಶಃ ಹಾನಿಯಾಗಿದೆ. ಕುದುರೆಯ ಮುಂಭಾಗದ ಕಾಲುಗಳು ಮುರಿದು ಹೋಗಿವೆ. ಕೀರ್ತಿಮುಖಾ ಪ್ರಭಾವಳಿಯ ಮೇಲ್ಭಾಗದಲ್ಲಿದೆ.

೧೧) ವೀರ

ಈ ಶಿಲ್ಪಕಲಾಕೃತಿಯು ಕ್ರಿ.ಶ. ೧೮ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವನ್ನು ರಾಯಚೂರು ಜಿಲ್ಲೆಯ, ದೇವದುರ್ಗ ತಾಲೂಕಿನ, ಸ್ಥಳ ಗಬ್ಬೂರುನಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪವು ವೀರನ ಮುಂಡ ಭಾಗವನ್ನು ಮಾತ್ರ ಇಲ್ಲಿ ನೋಡಬಹುದು. ವೀರನು ಕಿರೀಟವನ್ನು ಧರಿಸಿ, ಕೈಯಲ್ಲೆ ಖಡ್ಗವನ್ನು ಹಿಡಿದಿರುವ ದೃಶ್ಯ ಇದಾಗಿದೆ. ಇಲ್ಲಿ ವೀರನ ಮುಖವು ಅಸ್ಪಷ್ಟವಾಗ್ಗದ್ದು, ಕಿವಿಯಲ್ಲಿ ಉದ್ದನೆಯ ಕಿವಿಯೋಲೆಗಳನ್ನು ಧರಿಸಿದ್ದಾನೆ. ಎರಡು ಕೈಗಳು ಮುರಿದಿವೆ. ಅರ್ಧ ಪ್ರಭಾವಳಿಯು ಇರುವ ದೃಶ್ಯ ಇದಾಗಿದೆ.

೧೨) ವೀರಗಲ್ಲು

ಈ ಶಿಲ್ಪಕಲಾಕೃತಿಯು ಕ್ರಿ.ಶ. ೧೪ ಮತ್ತು ೧೬ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಸ್ಥಳ ಆನೆಗೊಂದಿಯಿಂದ ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪದಲ್ಲಿ ಅಂಡಾಕಾರದ ಪ್ರಭಾವಳಿಯಲ್ಲಿ ವೀರನ ಶಿಲ್ಪಕಲಾಕೃತಿಯನ್ನು ಕೆತ್ತಲಾಗಿದೆ. ವೀರನ ಅಂಗರಚನೆಯು ಪ್ರಮಾಣ ಬಧ್ಧವಾಗಿ ಕೆತ್ತಲಾಗಿಲ್ಲ. ವೀರನು ಕೈಯಲ್ಲಿ ಭರ್ಜಿಯನ್ನು ಹಿಡಿದಿರುವ ದೃಶ್ಯವನ್ನು ಕಾಣಬಹುದು. ತಲೆಯಲ್ಲಿ ವಸ್ತ್ರವನ್ನು ಸುತ್ತಿಕೊಂಡಿದ್ದು, ವಿಶಿಷ್ಠವಾಗಿದೆ. ಮುಖದಲ್ಲಿ ಕಣ್ಣು, ಮೂಗು, ಬಾಯಿ ಮೀಸೆಯು ಸ್ಪಷ್ಟವಾಗಿದೆ. ವಸ್ತುವಿನ್ಯಾಸವು ಸಾಮಾನ್ಯವಾಗಿ ಕೂಡಿದೆ. ಹಿಂಭಾಗದಲಲಿ ಸೂರ್ಯ ಮತ್ತು ಚಂದ್ರನನ್ನು ಸಂಕೇತವಾಗಿ ಮತ್ತು ವೀರನ ಬಲಭಾಗದಲ್ಲಿ ಸರ್ಪವನ್ನು ಕೆತ್ತಲಾಗಿದೆ.

೧೩) ವೀರಗಲ್ಲು

ಈ ಶಿಲ್ಪವು ೧೬ ಮತ್ತು ೧೭ನೇಯ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಸ್ಥಳ ಗಂಗಾವತಿಯಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪದಲ್ಲಿ ವೀರನು ಬಲಕ್ಕೆ ತಿರುಗಿ ನಿಂತಿರುವ ದೃಶ್ಯವನ್ನು ಕಾಣಬಹುದು. ವೀರನು ಕೈಯಲ್ಲಿ ಭರ್ಚಿ ಮತ್ತು ಬಾಕುವನ್ನು ಹಿಡಿದಿದ್ದಾನೆ. ಕೇಶ ವಿನ್ಯಾಸ ಮತ್ತು ವಸ್ತ್ರವಿನ್ಯಾಸವು ವಿಶಿಷ್ಠವಾಗಿದೆ. ಕೆಳಭಾಗದಲ್ಲಿ ಕಾಲಿನ ಪಾದವನ್ನು ಪೂರ್ಣವಾಗಿ ಕೆತ್ತಲಾಗಿದೆ. ಮುಖದ ಭಾಗವು ಅಸ್ಪಷ್ಟತೆಯಿಂದ ಕೂಡಿದೆ.

೧೪) ವೀರಗಲ್ಲು

ಈ ಶಿಲ್ಪವು ಕ್ರಿ ಶ ೧೬ ಮತ್ತು ೧೭ನೇ ಶತಮಾನದಲ್ಲಿ ಕೇತ್ತಲಾಗಿದೆ. ಈ ಶಿಲ್ಪವು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಸ್ಥಳ ಗಂಗಾವತಿಯಿಂದ ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವನ್ನು ಗಚ್ಚಿ ಕಲ್ಲಿನಲ್ಲಿ ಕೆತ್ತಲಾಗಿದೆ.

ಈ ಶಿಲ್ಪದಲ್ಲಿ ಮೂರು ವೀರಗಲ್ಲು ವ್ಯಕ್ತಿಗಳು ವಿವಿಧ ಸಶಸ್ತ್ರಗಳನ್ನು ಹಿಡಿದು ನಿಂತಿರುವ ಭಂಗಿಯಲ್ಲಿ ದೃಶ್ಯವನ್ನು ಇಲ್ಲಿ ನಾವು ನೋಡಬಹುದು ಮತ್ತು ವಸ್ತ್ರ ವಿನ್ಯಾಸ ಉಡುತೊಡುಗೆಯು ವಿಶಿಷ್ಠವಾಗಿದೆ. ಮೊದಲನೆಯ ವೀರಗಲ್ಲು ತನ್ನ ಕೈಯಲ್ಲಿ ಮಂಚಕತಾರಿ ಮತ್ತು ಕತ್ತಿಯನ್ನು ಹಿಡಿದಿರುತ್ತಾನೆ. ಮೂರನೇಯ ವೀರಗಲ್ಲು ತನ್ನ ಕೈಯಲ್ಲಿ ಗುರಾಣಿ ಮತ್ತು ಖಡ್ಗವನ್ನು ಹಿಡಿದಿರುತ್ತಾನೆ. ಈ ಮೂರು ವೀರಗಲ್ಲಗಳು ಯುದ್ದಕ್ಕೆ ತಯಾರಿರುವ ದೃಶ್ಯವನ್ನು ಕಾಣಬಹುದು.

೧೫) ವೀರಗಲ್ಲು

ಶಿಲ್ಪವು ಕ್ರಿ ಶ ೧೭ ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪದಲ್ಲಿ ವೀರನ ಎರಡು ಕೈಗಳಲ್ಲಿ ಸಶಸ್ತ್ರಗಳನ್ನು ಹಿಡಿದಿರುವ ದೃಶ್ಯವನ್ನು ಕಾಣಬಹುದು. ವೀರನು ಚಾಕು ಹಿಡಿದು ಹುರುಪಿನ ನಿಂತ ಭಂಗಿಯಲ್ಲಿರುವುದನ್ನು ಕಾಣಬಹುದು.

ವೀರನ ಕೇಶವಿನ್ಯಾಸ ಮತ್ತು ವಸ್ತ್ರವಿನ್ಯಾಸವು ಕಾಣಬಹುದು ಮೇಲ್ಭಾಗದಲ್ಲಿ ನಾಲ್ಕು ಕಿರುಗಾತ್ರದ ವ್ಯಕ್ತಿಗಳು ಲಿಂಗ ಪೂಜೆಯನ್ನು ಮಾಡುತ್ತಿರುವ ದೃಶ್ಯವನ್ನು ಕಾಣಬಹುದು. ವೀರನು ಮರಣವನ್ನು ಒಪ್ಪಿದ ಮೇಲೆ ಅಪ್ಸರೆಯರು ಬಂದು ಸ್ವರ್ಗಕ್ಕೆ ಒಯ್ಯುತ್ತಾರೆಂಬ ನಂಬಿಕೆಯನ್ನು ಮೇಲಿನ ಚಿತ್ರದ ಮುಂಖಾಂತರ ತೋರಿಸಲಾಗಿದೆ.

೧೬) ಗಣೇಶ

ಈ ಶಿಲ್ಪಕಲಾತಿಯು ಕ್ರಿ.ಶ. ೧೬ ಮತ್ತು ೧೭ನೇ ಶತಮಾನದಲ್ಲಿ ಕೆತ್ತಿದ್ದಾರೆ. ಈ ಶಿಲ್ಪಕಾಲಾತಿಯು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪದಲ್ಲಿ ಹೆಚ್ಚು ಅಲಂಕರಣವಿಲ್ಲದೆ ನಿಂತಿರುವ ಸ್ಥಾನದಲ್ಲಿದೆ. ಈ ಶಿಲ್ಪದಲ್ಲಿ ಗಣೇಶನು ನಾಲ್ಕು ಸಶಸ್ತ್ರವನ್ನು ಹಿಡಿದಿದ್ದಾನೆ. ಮೇಲಿನ ಎಡಗೈಯಲ್ಲಿ ಒಂದು ಅಕ್ಷವನ್ನು ಹಿಡಿದುಕೊಂಡು ಮೇಲಿನ ಬಲಗೈ ಮುರಿದು ಹೋಗಿದೆ. ಕೆಳಗಿನ ಎಡಗೈ ಮೂದಕ ಪಾತ್ರೆಯಲ್ಲಿ ಭಗ್ನಾ ದಂತವನ್ನು ಹಿಡಿದಿದ್ದಾನೆ.

ಎಡಭಾಗಕ್ಕೆ ತಿರುಗುತ್ತಿರುವ ಕಾಂಡವು ಎಡಕ್ಕೆ ಸೊಂಡಿಲಿನಿಂದ ಮೊದಕವನ್ನು ಹಿಡಿದಿದ್ದಾನೆ. ಶಿರದಲ್ಲಿ ಕಾರಂಡಮುಕುಟವನ್ನು ಧರಿಸಿದ್ದಾನೆ. ಹಾವುಗಳನ್ನು ಉದಾರಭಂದವಾಗಿ ಬಳಸಲಾಗಿದೆ. ಗಣಪತಿಯ ಶಿಲ್ಪವು ಕಿಟಕಿಯ ಜಾಲಾಂದರವು ಜೋಡಿಸಲ್ಪಟ್ಟಿರುತ್ತದೆ. ಚೌಕಟ್ಟಿನ ಬಲ ಬದಿಯು ಮುರಿದು ಹೋಗಿದೆ. ಉಡುಪನ್ನು ಧರಿಸಿರುವ ಶೈಲಿಯು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ.

೧೭) ಗಣೇಶ

ಈ ಶಿಲ್ಪಕಲಾಕೃತಿಯು ಕ್ರಿ.ಶ. ೧೫ ಮತ್ತು ೧೬ನೇ ಶತಮಾನದಲ್ಲಿ ಕೆತ್ತಲಾಗಿದ್ದು, ಈ ಶಿಲ್ಪಕಲಾಕೃತಿಯಲ್ಲಿ ಗಣಪತಿಯು ಸುಖಸ್ಥಾನದಲ್ಲಿ ಕುಳಿತ್ತಿರುವ ಭಂಗಿ ಕಾಣಬಹುದು. ಈ ಶಿಲ್ಪದಲ್ಲಿ ಗಣಪತಿಯು ಎಂಟು ಸಶಸ್ತ್ರವನ್ನು ಹಿಡಿದಿದ್ದಾನೆ. ಬಲಗೈ ಹಿಡಿತಗಳು ಚಕ್ರ, ತ್ರಿಶೂಲ, ಅಂಕುಶಾ, ಇನ್ನೊಂದು ಕೈ ಅಭಯ ಮುದ್ರೆಯಲ್ಲಿದೆ.

ಒಂದು ಎಡಗೈ ತನ್ನ ಪತ್ನಿ ಹಿಂಭಾಗದಲ್ಲಿ ಇರಿಸಲಾಗಿದೆ. ಇತರ ಕೈಗಳು ವಿಭಿನ್ನ ರೀತಿಯ ಹೂವುಗಳನ್ನು ಹಿಡಿದಿದ್ದಾನೆ. ಗಣಪತಿಯು ವಿಶಾಲವಾದ ಹಾರವನ್ನು ಭುಜಬಂಡ, ಬಳೆಗಳು ಮತ್ತು ಕಾಲುಗೆಜ್ಜೆಗಳನ್ನು ಧರಿಸಿದ್ದಾನೆ. ಇಲ್ಲಿನ ಆಸಕ್ತಿದಾಯ ವೈಶಿಷ್ಟ್ಯವೆಂದರೆ ಏಳು ಹೆಡೆಯ

ಹಾವು ಮೇಲಾವರಣವಾಗಿ ಕಾರ್ಯ ನಿರ್ವಹಿಸುತ್ತದೆ. ಪ್ರಭಾವಳಿಯು ಮಕರ ಸಂಪೂರ್ಣವಾಗಿ ಅಲಂಕರಿಸಲ್ಪಟ್ಟಿದೆ. ಸೊಂಡಿಲು ನೇರವಾಗಿದೆ. ತ್ರಿಕೋನ ಆಕಾರದಲ್ಲಿ ಕಿವಿ ಕೆತ್ತಲಾಗಿದೆ.

೧೮) ಗಣೇಶ

ಈ ಶಿಲ್ಪಕಲಾಕೃತಿಯು ಕ್ರಿ.ಶ. ೧೫ ಮತ್ತು ೧೬ನೇ ಶತಮಾನದಲ್ಲಿ ಕೆತ್ತಲ್ಪಟ್ಟಿದೆ. ಈ ಶಿಲ್ಪವು ಕಪ್ಪುಸೋಪ್ ಕಲ್ಲಿನಲ್ಲಿ ಕೆತ್ತಲ್ಪಟ್ಟಿದೆ. ಈ ಶಿಲ್ಪದಲ್ಲಿ ಅತ್ಯಂತ ಸೂಕ್ಷ್ಮವಾಗಿ ಆಭರಣಗಳನ್ನು ಕೆತ್ತಲ್ಪಟ್ಟಿದೆ. ಈ ಶಿಲ್ಪವು ಹೊಯ್ಸಳರ ಕಾಲದಲ್ಲಿ ಕಾಣುವಂತಹ ಒಂದು ಶಿಲ್ಪವಾಗಿದ್ದು, ಈ ಶಿಲ್ಪವು ಉತುಕುಕಾಸಾನ ಭಂಗಿಯಲ್ಲಿ ಕುಳಿತಿದೆ ಮತ್ತು ನಾಲ್ಕು ಕೈಯಲ್ಲಿ ಸಶಸ್ತ್ರವನ್ನು ಹಿಡಿದಿದ್ದಾನೆ.

೧೯) ಗಣೇಶ

ಈ ಶಿಲ್ಪಕಲಾಕೃತಿಯು ಕ್ರಿ.ಶ. ೧೫ ಮತ್ತು ೧೬ನೇ ಶತಮಾನದಲ್ಲಿ ಕೆತ್ತಲ್ಪಟ್ಟಿದೆ. ಸ್ಕಿಸ್ಟ್ ಕಲ್ಲಿನಲ್ಲಿ ಈ ಶಿಲ್ಪವು ಕೆತ್ತಲ್ಪಟ್ಟಿದೆ. ಈ ಶಿಲ್ಪದಲ್ಲಿ ಗಣಪತಿಯು ಕುಳಿತಿರುವ ಉತುಕಿಕಾಸನ ಭಂಗಿಯಲ್ಲಿ ಕೆತ್ತಲ್ಪಟ್ಟಿದೆ. ಗಣಪತಿಯ ನಾಲ್ಕು ತೋಳುಗಳು ಮುರಿದುಹೋಗಿವೆ. ಗಣಪತಿಯ ಶಿಲ್ಪವು ಅಲಂಕಾರಿಕ ಉಡುಪನ್ನು ಧರಿಸಿದೆ. ಗಣಪತಿಯ ಸೊಂಡಿಲು ಮುರಿದು ಹೋಗಿದೆ. ಕಿವಿಯು ಒಂದು ಆದಿ ಆಕಾರವಾಗಿದೆ.

೨೦) ಆನೆಗಳು

ಈ ಶಿಲ್ಪಕಲಾಕೃತಿಯು ಕ್ರಿ.ಶ. ೧೪ ಮತ್ತು ೧೬ನೇ ಶತಮಾನದಲ್ಲಿ ರಚನೆಯಾಗಿದ್ದು, ಈ ಶಿಲ್ಪಕಲಾಕೃತಿಯು ಪಟ್ಟಿಕೆಯಲ್ಲಿ ರಚನೆಯಾಗಿದ್ದು ನಾಲ್ಕು ಆನೆಗಳು ಒಂದರ ಹಿಂದೆ ಒಂದು ಸಾಲಾಗಿ ಓಡುವ ದೃಶ್ಯವನ್ನು ಗುರುತಿಸಬಹುದು.

ಈ ಶಿಲ್ಪಕಲಾಕೃತಿಯು ಪಾಚಿಹಸಿರು ಕಲ್ಲಿನಲ್ಲಿ ಶಿಲ್ಪ ರಚಿಸಲಾಗಿದೆ. ಈ ಶಿಲ್ಪವು ಆನೆಗುಂದಿಯಲ್ಲಿ ಸಿಕ್ಕಿದು, ವಿಜಯನಗರ ಕಾಲ ಘಟ್ಟವನ್ನು ಸೂಚಿಸುತ್ತದೆ.

ಈ ಕಲಾಕೃತಿಯು ಉಬ್ಬು ಶಿಲ್ಪದಲ್ಲಿ ರಚನೆಗೊಂಡಿದ್ದು ಅಲ್ಲಲ್ಲಿ ಶಿಲ್ಪಗಳು ಕೆಲವು ಭಾಗಗಳು ನಾಶವಾಗಿರುವದನ್ನು ಕಾಣಬಹುದಾಗಿದೆ.

ಪ್ರಸ್ತುತ ಈ ಶಿಲ್ಪಕಲಾಕೃತಿಯು ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಲಾಗಿದೆ.

೨೧) ಆನೆಗಳ ಪಟ್ಟಿಕೆ

ಈ ಶಿಲ್ಪಕಲಾಕೃತಿಯು ಕ್ರಿ.ಶ. ೧೭ ಶತಮಾನದಲ್ಲಿ ರಚನೆಗೊಂಡಿದ್ದು ನಿಲ್ಲಿಗಲ್ಲಿನಲ್ಲಿ ರಚನೆಗೊಂಡಿದ್ದು, ಪಟ್ಟಿಕೆಗಳಲ್ಲಿ ಆನೆಗಳನ್ನು ಎಡಮುಖವಾಗಿ ಚಲಿಸುತ್ತಿರುವಂತೆ ಕೆತ್ತಲಾಗಿದೆ.

ಈ ಶಿಲ್ಪಗಳು ಕುಬ್ಜವಾಗಿ ಕೆತ್ತಲಾಗಿದ್ದು, ಆನೆಗಳ ಕೊರಳಲ್ಲಿ ಅಲಂಕಾರಿಕವಾಗಿ ಗೆಜ್ಜೆಗಳ ಪಟ್ಟಿಯನ್ನು ಹಾಕಲಾಗಿದ್ದು ದೇಹಕ್ಕೆ ಸರಪಳಿಯನ್ನು ಹೋಲುವಂತೆ ಅಸ್ಪಷ್ಟವಾಗಿ ಈ ಶಿಲ್ಪದಲ್ಲಿ ಕಂಡುಬರುವ ಅಂಶಗಳು ಹೆಚ್ಚಾಗಿವೆ.

ಈ ಶಿಲ್ಪವು ರಾಯಚೂರಿನ ರಾಮಲಿಂಗೇಶ್ವರ ದೇವಸ್ಥಾನದ ಶಿಲ್ಪವಾಗಿದೆ. ಈ ಶಿಲ್ಪವು ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

೨೨) ಆನೆ

ಈ ಶಿಲ್ಪವು ಕ್ರಿ.ಶ. ೧೭ನೇ ಶತಮಾನದಲ್ಲಿ ರಚನೆಗೊಂಡಿದ್ದು, ಈ ಶಿಲ್ಪಕಲಾಕೃತಿಯು ನೀಲಿ ಕಲ್ಲಿನಲ್ಲಿ ಕೆತ್ತಲಾಗಿದ್ದು, ಆನೆಯ ಮೇಲ್ಭಾಗದಲ್ಲಿ ವಿನ್ಯಾಸಗಳುಳ್ಳ (ಬಟ್ಟೆಯನ್ನು ಹೊದಿಸಲಾಗಿದೆ. ಈ ಬಟ್ಟೆಯಲ್ಲಿ ಕಂಡು ಬರುವ ವಿನ್ಯಾಸಗಳು ಅಸ್ಪಷ್ಟವಾಗಿದ್ದು ರೇಖಾ ವಿನ್ಯಾಸದಿಂದ ಗುರುತಿಸಬಹುದು. ಈ ಶಿಲ್ಪಕಲಾಕೃತಿಯು ಒಂದು ಪಟ್ಟಿಕೆಯಲ್ಲಿ ರಚನೆಗೊಂಡಿದೆ.

ಈ ಶಿಲ್ಪಕಲಾಕೃತಿಯು ದ್ವಿಮುಖ ಆಯಾಮದಿಂದ ಕೂಡಿದ್ದು, ಈ ಶಿಲ್ಪಕಲಾಕೃತಿಯು ರಾಯಚೂರಿನ ನವರಂಗ ದರವಾಜಾದ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಲಾಗಿದೆ. ಈ ಶಿಲ್ಪವು ಒಟ್ಟಾರೆಯಾಗಿ ಹೇಳುವುದಾದರೆ ಅಸ್ಪಷ್ಟವಾಗಿ ಕೆತ್ತಲಾಗಿದೆ. ಈ ಶಿಲ್ಪವು ಬಲಭಾಗಕ್ಕೆ ತಿರುಗಿ ನಿಂತಿರುವ ದೃಶ್ಯವನ್ನು ಗುರುತಿಸಬಹುದಾಗಿದೆ.

೨೩) ಆನೆಗಳು

ಈ ಶಿಲ್ಪಕಲಾಕೃತಿಯು ಕ್ರಿ.ಶ. ೧೪ ಮತ್ತು ೧೭ನೇ ಶತಮಾನದಲ್ಲಿ ರಚನೆಗೊಂಡಿದೆ.

ಈ ಶಿಲ್ಪವು ಕಾಡ್‌ಕಲ್ಲಿನ ರಚನೆಗೊಂಡಿದ್ದು ಎರಡು ಎದರುರು–ಬದುರು ಸುತ್ತಿರುವ ದೃಶ್ಯವನ್ನು ಕೆತ್ತಲಾಗಿದೆ. ಈ ಶಿಲ್ಪವು ಒಂದೇ ಶಿಲೆಯಲ್ಲಿ ಉಬ್ಬು–ತಗ್ಗುಗಳಿಂದ ಕೂಡಿರುವ ಶಿಲ್ಪ ಇದಾಗಿದೆ. ಈ ಶಿಲ್ಪವು ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

೨೪) ಆನೆ

ಈ ಶಿಲ್ಪಕಲಾಕೃತಿಯು ಕ್ರಿ.ಶ. ೧೭ನೇ ಶತಮಾನದಲ್ಲಿ ರಚನೆಗೊಂಡಿದ್ದು ನೀಲಿ ಮತ್ತು ಕಪ್ಪು ಮಿಶ್ರಿತ ಚಪ್ಪಟೆ ಕಲ್ಲಿನಲ್ಲಿ ಆನೆಯ ಶಿಲ್ಪವು ಕೆತ್ತಲಾಗಿದೆ. ಈ ಶಿಲ್ಪದಲ್ಲಿ ಆನೆಯ ಶಿರಭಾಗ ಮತ್ತು ದೇಹದ ಗಾತ್ರವು ದೊಡ್ಡದಾಗಿದ್ದು ಮತ್ತು ಕಾಲುಗಳು ಕುಬ್ಜವಾಗಿದ್ದು ಅದರ ಬಾಲ ಉದ್ದವಾಗಿ ಕೆತ್ತಲಾಗಿದೆ. ಈ ಶಿಲ್ಪವು ಉಬ್ಬುಶಿಲ್ಪದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ರಾಯಚೂರಿನ ಮಾಧ್ಯಮ ವಸ್ತು ಸಂಗ್ರಹಾಲಯದಲ್ಲಿ ರಚನೆಗೊಂಡಿದೆ.

೨೫) ಆನೆ

ಈ ಶಿಲ್ಪಕಲಾಕೃತಿಯು ಕ್ರಿ.ಶ. ೧೭ನೇ ಶತಮಾನದಲ್ಲಿ ರಚನೆಗೊಂಡಿದ್ದು ಈ ಶಿಲ್ಪವು ಕಾಡುಗಲ್ಲಿನಲ್ಲಿ ಕೆತ್ತಲಾಗಿದೆ.

ಈ ಶಿಲ್ಪದ ವಿಶೇಷತೆ ಎಂದರೆ ಮುರುಬದಿಯ ಚೌಕಟ್ಟನ್ನು ಹೊಂದಿದ್ದು ಅದರೊಳಗಡೆ ಉಬ್ಬುಮಾದರಿಯಲ್ಲಿ ಆನೆಯನ್ನು ಕೆತ್ತಲಾಗಿದ್ದು ಈ ಶಿಲ್ಪವು ಅಚ್ಚುಕಟ್ಟಾಗಿ ಪ್ರಮಾಣ ಬದ್ಧವಾಗಿದ್ದು ಆನೆಯನ್ನು ಅಲಂಕರಿಸಲು ಬಟ್ಟೆಯನ್ನು ಹೊದಿಸಲಾಗಿದೆ.

ಆನೆಯ ನಾಲ್ಕು ಕಾಲುಗಳಿಗೆ ಗೆಜ್ಜೆಗಳಿಂದ ಅಲಂಕರಿಸಲಾಗಿದೆ. ಆದರೆ ಅಸ್ಪೃಷ್ಯತೆಯಾಗಿರುವ ಹೊರರೇಖಾ ವಿನ್ಯಾಸಗಳು ಕಂಡು ಬರುತ್ತದೆ. ಈ ಶಿಲ್ಪವು ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಡಿಡಲಾಗಿದೆ.

೨೬) ಆನೆಗಳ ಪಟ್ಟಿಕೆ

ಈ ಶಿಲ್ಪಕಲಾಕೃತಿಯು ಕ್ರಿ.ಶ ೧೭ನೇ ಶತಮಾನದಾಗಿದ್ದು ಈ ಶಿಲ್ಪವು ಸಹ ಕಾಡಗಲ್ಲಿನಲ್ಲಿ ರಚಿಸಲಾಗಿದ್ದು ಈ ಪಟ್ಟಿಕೆಯಲ್ಲಿ ನಾಲ್ಕು ಆಯತಾಕಾರದ ಚೌಕಟ್ಟಿನಲ್ಲಿ ನಾಲ್ಕು ಆನೆಗಳನ್ನು ಚಪ್ಪಟೆಯಾಕೃತಿಯಲ್ಲಿ (೨D) ರಚಿಸಲಾಗಿದೆ.

ಈ ಶಿಲ್ಪಗಳ ಅಸ್ಪಷ್ಯತೆಯಿಂದ ಕೂಡಿರುವದನ್ನು ಗಮನಿಸಬಹುದು. ಈ ಶಿಲ್ಪವು ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

೨೭) ಆನೆಗಳ ಪಟ್ಟಿಕೆ

ಈ ಶಿಲ್ಪಕಲಾಕೃತಿಯು ಕ್ರಿ.ಶ ೧೭ನೇ ಶತಮಾನದಲ್ಲಿ ರಚನೆಗೊಂಡಿದೆ.

ಈ ಶಿಲ್ಪವು ನೀಲಿಗಲ್ಲಿನಲ್ಲಿ ರಚಿಸಿದ್ದು, ಆಯತಾಕಾರದ ಚೌಕಟ್ಟಿನಲ್ಲಿ ಮೂರು ಆನೆಗಳನ್ನು ಕೆತ್ತಲಾಗಿದ್ದು ಅವುಗಳಲ್ಲಿ ಎರಡು ಆನೆಗಳು ಪೂರ್ಣಗೊಂಡಿದ್ದು ಇನ್ನೊಂದು ಆನೆಯ ಶಿಲ್ಪದ ಹಿಂಭಾಗವು ನಾಶಗೊಂಡಿರುವುದನ್ನು ಕಾಣಬಹುದು. ಈ ಶಿಲ್ಪವು ಚಪ್ಪಟೆ ಆಯಾಮದ ಮಾದರಿಯಲ್ಲಿ ಕೆತ್ತಲಾಗಿದೆ.

ಈ ಶಿಲ್ಪವು ರಾಯಚೂರಿನ ಕೋಟೆಯ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

೨೮) ಗರುಡ

ಈ ಶಿಲ್ಪದ ಕಾಲವು ಕ್ರಿ.ಶ. ೧೫ ಮತ್ತು ೧೭ನೇ ಶತಮಾನದಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗುಂದಿ ಸ್ಥಳದಿಂದ ರಾಯಚೂರಿನ ನವರಂಗದರವಾಜ್ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ.

ಗರುಡನ ಶಿಲ್ಪವು ಅವನ ಬಲ ಮೊಣಕಾಲಿನ ಮೇಲೆ ಕುಳಿತಿರುವ ಭಂಗಿಯಲ್ಲಿ ಚಿತ್ರಿಸಲಾಗಿದೆ. ಗರುಡನ ಅಂಗರಚನೆಯು ಕುಜ್ಜವಾಗಿ ಕೆತ್ತಲಾಗಿದ್ದು, ಕೆತ್ತನೆಯು ಒರಟಾಗಿದ್ದು, ಮುಖದ ಭಾಗವು ನಾಶವಾಗಿದ್ದು, ಕೊರಳಿನ ಹಾರ, ಬಳೆ ಮತ್ತು ಕಿವಿ ಉಂಗುರಗಳು ಧರಿಸಿದ್ದಾನೆ.

೨೯) ಕೇಶವ

ಈ ಶಿಲ್ಪವು ಕ್ರಿ.ಶ. ೧೬ ಮತ್ತು ೧೭ನೇ ಶತಮಾನದಲ್ಲಿ ರಾಯಚೂರು ಜಿಲ್ಲೆಯ, ಲಿಂಗಸಗೂರು ತಾಲೂಕಿನ, ಕರಡಿಕಲ್ಲು ಸ್ಥಳದಿಂದ ರಾಯಚೂರಿನ ನವರಂಗ ದರವಾಜ್ ಕೋಟೆಯ ವಸ್ತುಸಂಗ್ರಹಿಸಿಡಲಾಗಿದೆ. ಈ ಶಿಲ್ಪವನ್ನು ಕಪ್ಪು ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಸಮಭಂಗದಲ್ಲಿ ನಿಂತುಕೊಂಡಿದೆ. ನಾಲ್ಕು ಕೈಯಲ್ಲಿ ಸಶಸ್ತ್ರವನ್ನು ಹಿಡಿದುಕೊಂಡಿದೆ. ಮೇಲ್ಭಾಗದ ಎಡಗೈಯಲ್ಲಿ ಚಕ್ರ ಮತ್ತು ಬಲಗೈಯಲ್ಲಿ ಶಂಖವನ್ನು ಹಿಡಿದಿದ್ದಾನೆ. ಕೆಳಗಿನ ಬಲಗೈಯಲ್ಲಿ ಪಾದವನ್ನು ಕೆಳ ಎಡಗೈ ಗಧಾವನ್ನು ಹಿಡಿದಿದ್ದಾನೆ.

ಕೇಶವ ಶಿಲ್ಪವು ಕಾರಾಂಡ ಮುಕುಟವನ್ನು ಧರಿಸಿ, ಹಾರ, ವೃತ್ತಾಕಾರದ ಕಿವಿ–ಉಂಗುರಗಳು, ಉದ್ದವಾದ ಹಾರ, ಬಳೆ ಮತ್ತು ಕಿವಿಯೋಲೆಗಳನ್ನು ಧರಿಸಿದೆ. ಮುಖದ ಭಾಗವು ವಿರೂಪಗೊಂಡಿದೆ. ಉಡುಗೆ ಧರಿಸಿರುವ ಶೈಲಿ ಕುತೂಹಲಕಾರಿಯಾಗಿದೆ.

ಪ್ರಭಾವಳಿಯಲ್ಲಿ ಹೂವಿನ ವಿನ್ಯಾಸಗಳನ್ನು ಚಿತ್ರಿಸಲಾಗಿದೆ. ಕೀರ್ತಿ ಮುಖಾ ಆಗ್ರಸ್ಥಾನದಲ್ಲಿದೆ. ಶಿಲ್ಪವನ್ನು ಲಂಬವಾಗಿ ಎರಡು ತುಂಡುಗಳಾಗಿ ವಿಭಜಿಸಲಾಗಿದೆ. ಒಟ್ಟಾರೆಯಾಗಿ ಶಿಲ್ಪವು ಭಾಗಶಃ ಅಸ್ಪಷ್ಟತೆ ಮತ್ತು ನಾಶವಾಗಿದೆ ಎಂದು ಹೇಳಬಹುದು.

೩೦) ಪ್ರಭಾವಳಿಯ ಭಾಗದಿಂದ ಕೂಡಿದ ವಿಷ್ಣು

ಈ ಶಿಲ್ಪವು ಕ್ರಿ.ಶ. ೧೩ ಮತ್ತು ೧೪ನೇಯ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ರಾಯಚೂರು ಜಿಲ್ಲೆಯ, ದೇವದುರ್ಗ ತಾಲೂಕಿನ, ಸ್ಥಳ ಗಬ್ಬೂರುನಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪವು ವಿಷ್ಣುಶಿಲ್ಪದ ಅರ್ಧ ಪ್ರಭಾವಳಿಯ ಭಾಗದಿಂದ ಕೂಡಿದ ವಿಷ್ಣುವಿನ ಕೈಯಲ್ಲಿ ಶಂಖವನ್ನು ಹಿಡಿದ ರೀತಿ ಅತ್ಯಂತ ಅದ್ಭುತವಾಗಿದೆ.

ಪ್ರಭಾವಳಿಯಲ್ಲಿ ಬುಧ್ಧ, ಕುದುರೆಯ ಮೇಲೆ ಕುಳಿತ, ಸೈನಿಕ, ಹೂ ಬಳ್ಳಿಯ ಕುಸುರಿ ಕೆಲಸದಿಂದ ಕೆತ್ತಲಾಗಿದೆ.

೩೧) ವೇಣುಗೋಪಾಲ

ಈ ಶಿಲ್ಪವು ಕ್ರಿ.ಶ. ೧೪ ಮತ್ತು ೧೬ನೇಯ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವನ್ನು ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ ಸ್ಥಳ ಆನೆಗೊಂದಿಯಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪಕಲಾಕೃತಿಯು ವಿಷ್ಣು, ಕೃಷ್ಣ ಹೆಸರಿನಿಂದ ವೇಣುಗೋಪಾಲನನ್ನು ಹೋಲಿಸಲಾಗಿದೆ. ಇಲ್ಲಿ ವೇಣುಗೋಪಾಲನ ನಾಲ್ಕು ಕೈಗಳಿವೆ. ಮೇಲ್ಭಾಗದ ಎಡಗೈಯಲ್ಲಿ ಶಂಖವನ್ನು, ಬಲಗೈಯಲ್ಲಿ ಚಕ್ರವನ್ನು ಹಿಡಿದಿದ್ದಾನೆ. ಕೆಳಗಿನ ಬಲ ಮತ್ತು ಎಡಗೈಯಲ್ಲಿ

ಕೋಲನ್ನು ನುಡಿಸುತ್ತಿರುವ ದೃಶ್ಯವನ್ನು ಕಾಣಬಹುದು. ಆ ಹಾಡಿಗೆ ದೈವಿಕ ಸಂಗೀತವ ಕೇಳುವ ಹಸುಗಳನ್ನು ಇಲ್ಲಿ ನೋಡಬಹುದಾಗಿದೆ. ವೇಣುಗೋಪಾಲನು ಕರಾಂಡ ಮುಕುಟವನ್ನು ಧರಿಸಿದ್ದಾನೆ.

ವೃತ್ತಾಕಾರದ ಕಿವಿಯೋಲೆಗಳು, ಉಂಗುರಗಳು, ಬಳೆಗಳು ವಿನ್ಯಾಸವು ನೋಡಲು ಸೊಗಸಾಗಿ ಕೆತ್ತಲಾಗಿದೆ. ಏಳು ಮೊನಚಾದ ಹಾವು ವೇಣುಗೋಪಾಲನ ತಲೆಗೆ ಮೇಲಾವರಣವಾಗಿ ಕಾರ್ಯ ನಿರ್ವಹಿಸುತ್ತದೆ. ಕೀರ್ತಿ ಮುಖವನ್ನು ಹೊರತು ಪಡಿಸಿ ಪ್ರಭಾವಳಿಯನ್ನು ಅಲಂಕರಿಸಲಾಗಿಲ್ಲ. ದೇವತೆಯು ಘನತೆಯಿಂದ ಮುರಿದು ಹೋಗಿದೆ.

೩.೨) <u>ದಂಪತಿಗಳು</u>

ಈ ಶಿಲ್ಪವು ಕ್ರಿ.ಶ. ೧೪ ಮತ್ತು ೧೬ನೇ ಶತಮಾನದಲ್ಲಿ ಕೆತ್ತಲ್ಪಟ್ಟಿದೆ. ಕಪ್ಪು ಗ್ರಾನೈಟ್ ಕಲ್ಲಿನಲ್ಲಿ ಈ ಶಿಲ್ಪವನ್ನು ಕೆತ್ತಲಾಗಿದೆ. ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ ಆನೆಗುಂದಿ ಸ್ಥಳದಿಂದ ಈ ಶಿಲ್ಪವನ್ನು ರಾಯಚೂರಿನ ನವರಂಗ ದರವಾಜ್ ಕೋಟೆಯ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿ ಇಡಲಾಗಿದೆ.

ಈ ಶಿಲ್ಪದ ಅಂಗರಚನೆಯು ಕುಬ್ಜವಾಗಿ ಕೆತ್ತಲಾಗಿದೆ. ಪುರುಷ ಶಿಲ್ಪವು ಅಂಜಲಿ ಮುದ್ರದಲ್ಲಿದೆ. ಸ್ತ್ರೀ ಶಿಲ್ಪವು ಎರಡು ಕೈಗಳಲ್ಲಿ ಹಣ್ಣುಗಳನ್ನು ಹಿಡಿದುಕೊಳ್ಳಲಾಗಿದೆ. ಅಲಂಕರಿಕಾವಾಗಿ ಪುರುಷನು ಕಿವಿ-ಉಂಗುರಗಳು, ಬಳೆಗಳು, ಕಿವಿಯೋಲೆಗಳು ಮತ್ತು ಸೊಂಟದ ಪಟ್ಟಿಯನ್ನು ಧರಿಸಿದ್ದಾನೆ. ಸ್ತ್ರೀ ಶಿಲ್ಪವು ಕೂದಲಿನ ಉಡುಗೆಯು ಧರಿಸಿರುವ ವಿಧಾನವು ಒಂದು ಗಮನಾರ್ಹ ಲಕ್ಷಣವಾಗಿದೆ. ಸೂರ್ಯ ಮತ್ತು ಚಂದ್ರನನ್ನು ಪುರುಷನ ಪ್ರವೇಶದ ಮೇಲೆ ಸಾಂಕೇತಿಕವಾಗಿ ಕೆತ್ತಲಾಗಿದೆ.

೩೩) ದಂಪತಿಗಳು

ಈ ಶಿಲ್ಪವು ಕ್ರಿ.ಶ. ೧೪ ಮತ್ತು ೧೭ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವನ್ನು ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಗಂಗಾವತಿ ಸ್ಥಳದಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪದಲ್ಲಿ ದಂಪತಿಗಳು ಪದ್ಮಾಸನ ಭಂಗಿಯಲ್ಲಿ ಕುಳಿತ ದೃಶ್ಯವನ್ನು ಕೆತ್ತಲಾಗಿದೆ. ದಂಪತಿಗಳ ಕೈಗಳಲ್ಲಿ ಸಶಸ್ತ್ರಗಳನ್ನು ಹಿಡಿದಿದ್ದಾರೆ.

ಮಹಿಳಾ ದೇವಿಯು ನಾಲ್ಕು ಕೈಗಳನ್ನು ಹೊಂದಿದ್ದು, ಪುರುಷ ದೇವನ ಕೈಯಲ್ಲಿ. ಇರಿಸಿಕೊಂಡಿರುವದು ನೋಡಬಹುದಾಗಿದೆ.

೩೪) ನರ್ತಕಿಯರ ಪಟ್ಟಿಕೆ

ಈ ಶಿಲ್ಪವು ಕ್ರಿ.ಶ. ೧೫ ಮತ್ತು ೧೭ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ, ಸ್ಥಳ ಆನೆಗೊಂದಿಯಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಆಯತಾಕಾರದ ಕಲ್ಲಿನ ಪಟ್ಟಿಯ ಒಳಗಡೆ ಮೂವರು ನರ್ತಕಿಯರು ಮತ್ತು ಕೃಷ್ಣನು ನೃತ್ಯ ಮಾಡುತ್ತಿರುವ ಭಂಗಿಯನ್ನು ಇಲ್ಲಿ ಕೆತ್ತಲಾಗಿದೆ. ನರ್ತಕಿಯರ ವಸ್ತುವಿನ್ಯಾಸವು ಅತ್ಯಂತ ಅದ್ಭುತವಾಗಿ ಕೆತ್ತಲಾಗಿದೆ.

೩೫) ನರ್ತಕಿಯರು

ಈ ಶಿಲ್ಪದ ಕಾಲವು ಕ್ರಿ.ಶ. ೧೫ ಮತ್ತು ೧೭ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಸ್ಥಳ ಆನೆಗೊಂದಿಯಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪದಲ್ಲಿ ಇಬ್ಬರು ನರ್ತಕಿಯರು ವಿವಿಧ ನೃತ್ಯದ ಭಂಗಿಯಲ್ಲಿ ನರ್ತಿಸುತ್ತಿರುವ ದೃಶ್ಯವಾಗಿದೆ. ಈ ಶಿಲ್ಪದಲ್ಲಿ ವಸ್ತ್ರವಿನ್ಯಾಸವು ಅತ್ಯಂತ

ಸೊಗಸಾಗಿ ಕೆತ್ತಲಾಗಿದೆ. ಈ ಶಿಲ್ಪವನ್ನು ಆಯತಾಕಾರದ ಪಟ್ಟಿಕೆಯ ಒಳಗಡೆ ಕೆತ್ತಲಾಗಿದೆ. ನರ್ತಕಿಯರ ಮುಖದ ಭಾಗವು ಅಸ್ಪಷ್ಟವಾಗಿದೆ.

೩೬) ನರಸಿಂಹಮೂರ್ತಿಯನ್ನು ಹೋಲುವ ಶಿಲ್ಪಕಲಾಕೃತಿ

ಈ ಶಿಲ್ಪವು ವಸ್ತುಸಂಗ್ರಹಾಲಯದ ನವರಂಗ ದರವಾಜಾದ ಎರಡನೇಯ ಮೂಲ ಸ್ತಂಭವಾಗಿದ್ದು ಇದರ ಉದ್ದ ಏಳು ಅಡಿ ಹಾಗೂ ಅಗಲ ನಾಲ್ಕು ಅಡಿಯಾಗಿದ್ದು ಇದರ ಮಧ್ಯಭಾಗದಲ್ಲಿ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಮೂಲ ಶಿಲ್ಪದ ಆಕಾರವು ಮುಖ ಸಿಂಹದಾಗಿದ್ದು ದೇಹ ಹಾಗೂ ಕೈಕಾಲುಗಳು ಸಿಂಹದ ಹೋಲಿಕೆಯಲ್ಲಿದ್ದು

ಈ ಶಿಲ್ಪವು ವಿಶೇಷವಾಗಿ ಘೂಳಿಯ ದೇಹ ಹೊಂದಿದ್ದು ಮುಖವು ಮೊಸಳೆ ಆಕಾರದಲ್ಲಿದ್ದು ಒಬ್ಬ ಮನಷ್ಯನನ್ನು ತಿನ್ನುತ್ತಿರುವ ದೃಶ್ಯವನ್ನು ವಿಶೇಷವಾಗಿ ಕೆತ್ತಲಾಗಿದೆ.

ಸಿಂಹದ ಎಡ ಮತ್ತು ಬಲದಲ್ಲಿ ಇಬ್ಬರು ಸೈನಿಕರು ಇದ್ದು ಅವರ ಕೈಯಲ್ಲಿ ಕತಿ ಗುರಾಣೆಗಳಿದ್ದು, ಮಧ್ಯಭಾಗದಲ್ಲಿ ಶಂಖದಂತೆ ಹೋಲುವ ಶಿಲ್ಪವಿದ್ದು ಅದರ ಮೇಲ್ಭಾಗದಲ್ಲಿ ನಾಟ್ಯ ಭಂಗಿಯಲ್ಲಿ ನರ್ತಕಿ ಹಾಗೂ ವಾದ್ಯಗಾರರನ್ನು ಕೆತ್ತಲಾಗಿದೆ.

ಒಟ್ಟಾರೆಯಾಗಿ ಈ ಶಿಲ್ಪವು ವಿಶೇಷ ರೀತಿಯ ಯೋಜನೆಯನ್ನು ತೋರುತ್ತದೆ.

೩೭) <u>ಗೋಪಿಕಾ ಸ್ತ್ರೀಯರ ವಸ್ತ್ರಾಪಹರಣ:-</u>

ಈ ಶಿಲ್ಪವು ವಸ್ತುಸಂಗ್ರಹಾಲಯದ ನವರಂಗ ದರವಾಜಾದ ಮೂಲ ಸ್ತಂಭವಾಗಿದ್ದು ಈ ಸ್ತಂಭದಲ್ಲಿ ಗೋಪಿಕಾ ಸ್ತ್ರೀಯರ ವಸ್ತ್ರ ಅಪಹರಣದ ಸನ್ನಿವೇಶವನ್ನು ಉಬ್ಬುಶಿಲ್ಪ(೨D) ಮಾದರಿಯಲ್ಲಿ ಕೆತ್ತಲಾಗಿದೆ.

ಈ ಶಿಲ್ಪಕೆತ್ತನೆಯು ಸ್ತಂಭ ಏಳು ಅಡಿ ಎತ್ತರದ ನಾಲ್ಕು ಅಡಿ ಅಗಲದ ಕಂಬದಲ್ಲಿ ಕೆತ್ತಲಾಗಿದೆ. ಈ ಶಿಲ್ಪಕಲಾಕೃತಿಯಲ್ಲಿ ಎಡ ಮತ್ತು ಬಲ ಮಹಿಳೆಯರು ನಿಂತಿರುವ

ಸನ್ನಿವೇಶವಾಗಿದ್ದು ಮಧ್ಯದಲ್ಲಿ ಮರದ ಮೇಲೆ ಕೃಷ್ಣನು ನಾಟ್ಯಭಂಗಿಯಲ್ಲಿರುವ ಮರದ ತುದಿಯಲ್ಲಿ ನಿಂತಿದ್ದು ಅವನ ಎರಡು ಕೈಗಳಲ್ಲಿ ಉಡುಪುಗಳನ್ನು ಹಿಡಿದುಕೊಂಡಿರುವದು ಮರದ ಮಧ್ಯಭಾಗದಲ್ಲಿ ತನ್ನ ಉಡುಪುಗಳನ್ನು ತೆಗೆದುಕೊಳ್ಳಲು ಮರಹತ್ತುತ್ತಿದ್ದಾರೆ.

ಹಾಗೂ ಮರದ ಎಡ ಮತ್ತು ಬಲಭಾಗದಲ್ಲಿ ಎರಡು ತೆಂಗಿನ ಮರಗಳಿದ್ದು ಆ ಮರಗಳಲ್ಲಿ ಕಡಿಗಳು ಕಡಿಚೇಷ್ಟೆ ಮಾಡುತ್ತಿರುವ ದೃಶ್ಯವನ್ನು ಕಾಣಬಹುದಾಗಿದೆ. ಒಟ್ಟಾರೆಯಾಗಿ ಈ ಶಿಲ್ಪಕಲಾಕೃತಿಯು ಕೃಷ್ಣನ ಲೀಲೆ ಕುರಿತಾಗಿ ಈ ಶಿಲ್ಪವನ್ನು ರಚಿಸಲಾಗಿದೆ.

೩೮) ಸ್ತ್ರೀಯರು ಕೋಲಾಟ ಆಡುತ್ತಿರುವ ಪಟ್ಟಿಕೆ

ಈ ಶಿಲ್ಪವು ಕಾಲ ಕ್ರಿ.ಶ. ೧೫ ಮತ್ತು ೧೬ನೇ ಶತಮಾನದಲ್ಲಿ ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಆನೆಗುಂದಿ ಸ್ಥಳದಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪದಲ್ಲಿ ಸ್ತ್ರೀಯರು ಕೋಲಾಟವನ್ನು ಆಡುತ್ತಿರುವ ಪಟ್ಟಿಕೆಯಲ್ಲಿ ನಾವು ಕಾಣಬಹುದು.

ಈ ಶಿಲ್ಪದಲ್ಲಿ ಸ್ತ್ರೀಯರು ಸ್ತ್ರೀಯರು ಕೋಲುಗಳಿಂದ ಕೋಲಾಟವನ್ನು ಪ್ರದರ್ಶಿಸುತ್ತಾ ಅಲಂಕಾರಿಕ ಉಡುಪುಗಳನ್ನು, ಆಭರಣಗಳನ್ನು ಧರಿಸಿ ನೃತ್ಯವನ್ನು ಪ್ರದರ್ಶಿಸುತ್ತಿದ್ದಾರೆ.

೩೯) ರಾಜ ಮತ್ತು ಏಳು ಜನರು

ಈ ಶಿಲ್ಪವು ಕ್ರಿ.ಶ. ೧೫ ಮತ್ತು ೧೭ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಆನೆಗುಂದಿ ಸ್ಥಳದಿಂದ ತಂದು ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಗಿದೆ. ಈ ಶಿಲ್ಪವು ಉದ್ದನೆಯ ಆಯತಾಕಾರದ ಚೌಕಟ್ಟಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಕಪ್ಪು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ.

ಈ ಶಿಲ್ಪದಲ್ಲಿ ರಾಜ ಮತ್ತು ಏಳು ಜನರನ್ನು ವಿವಿಧ ನಿಂತ ಭಂಗಿಯಲ್ಲಿ ಕಾಣಬಹುದಾಗಿದೆ. ಈ ಶಿಲ್ಪದ ಕೆತ್ತನೆಯು ಭಾಗಶಃ ಹಾಳಾಗಿ, ಅಸ್ಪಷ್ಟತೆಯಿಂದ ಕೂಡಿದೆ. ರಾಜ ಆಸ್ಥಾನದಲ್ಲಿ ಏಳು ಜನರು ಯಾವುದೋ ಸನ್ನಿವೇಶದ ಬಗ್ಗೆ ಮಾತಾನಾಡುವ ಶೈಲಿಯನ್ನು ಈ ಶೈಲಿಯಲ್ಲಿ ಕಾಣಿಸುತ್ತದೆ. ರಾಜನು ಆಸ್ಥಾನದಲ್ಲಿ ಕುಳಿತು ಅವರು ಮಾತುಗಳನ್ನು ಕೇಳುವ ಅಥವಾ ನೋಡುವ ದೃಶ್ಯವಾಗಿದೆ ಎಂದು ಹೇಳಬಹುದು.

೪೦) ನಾಗ ದಂಪತಿಗಳು

ಈ ಶಿಲ್ಪವು ಕಪ್ಪು ಪಾಚಿ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ನಾಗದಂಪತಿಗಳು ಒಂದೊಂದು ಹಬ್ಬಿಕೊಂಡಿರುವ ಕುಳಿತ್ತಿರುವ ಭಂಗಿಯಲ್ಲಿದೆ. ಈ ಶಿಲ್ಪವು ಕೆಳಭಾಗವು ಭಾಗಶಃ ಮುರಿದು ಹೋಗಿದೆ. ಈ ಶಿಲ್ಪವು ನೋಡಲು ಸುಂದರವಾಗಿದೆ. ನಾಗ ಮತ್ತು ನಾಗಿಣಿಯ ತಲೆಯ ಮುಕುಟವಾಗಿ ಏಳು ಎದೆಯ ಮುಖಗಳು ದಂಪತಿಗಳಿಗೆ ಅಲಂಕಾರವಾಗಿ ಅಥವಾ ಆಶ್ರಯವಾಗಿ ನಿಂತಿವೆ.

ದಂಪತಿಗಳ ವಸ್ತ್ರಾಭರಣಗಳು ವಿನ್ಯಾಸವು ನೋಡಲು ಮನೋಹರವಾಗಿ ನಾಗದಂಪತಿಗಳು ಕೈಯಲ್ಲಿ ಸಶಸ್ತ್ರವನ್ನು ಹಿಡಿದ ದೃಶ್ಯವನ್ನು ಇಲ್ಲಿ ಈ ಶಿಲ್ಪದಲ್ಲಿ ಕಾಣಬಹುದು. ಈ ಶಿಲ್ಪವನ್ನು ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

೪೧) ನಾಗದಂಪತಿಗಳು

ಈ ಶಿಲ್ಪದ ರಚನೆಯ ಕಾಲವು ಕ್ರಿ.ಶ. ೧೭ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಒರಟಾದ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ರಾಯಚೂರು ಜಿಲ್ಲೆಯ, ದೇವದುರ್ಗ ತಾಲೂಕಿನ, ಸ್ಥಳ ಗಬ್ಬೂರಿನಿಂದ, ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ನಾಗ ದಂಪತಿಗಳು ಒಂದಕ್ಕೊಂದು ಹಬ್ಬಿಕೊಂಡು ನಿಂತಿರುವ ಭಂಗಿಗಳಾಗಿವೆ. ನಾಗನ ಬಲ ಕೈಯಲ್ಲಿ ಕತ್ತಿಯನ್ನು ಹಿಡಿದಿದ್ದಾನೆ.

ನಾಗಿಣಿಯ ಎಡಗೈಯಲ್ಲಿ ಹಾವಿನ ಬಾಲವನ್ನು ಹಿಡಿದಿದ್ದಾನೆ. ನಾಗದಂಪತಿಗಳ ಕಿರೀಟವಾಗಿ ಏಳು ಮುಖವುಳ್ಳ ಸರ್ಪದ ಹೆಡೆ, ಇದೆ. ಕೆಳಗಿನ ಭಾಗ ಹಾಳಾಗಿದೆ. ಅಲಂಕರಿಕವಾಗಿ ನಾಗದಂಪತಿಗಳು, ಕಿವಿಯೋಲೆಗಳು ಮತ್ತು ಸರಗಳು ಧರಿಸಲಾಗಿದೆ. ಒಟ್ಟಾರೆಯಾಗಿ ಈ ದಂಪತಿಗಳು ದೃಶ್ಯ ನೋಡಲು ಮನೋಹರಕವಾಗಿ ಕೆತ್ತಲಾಗಿದೆ.

೪೨) <u>ನಾಗದಂಪತಿಗಳು</u>

ಈ ಶಿಲ್ಪದ ರಚನೆಯ ಕಾಲವು ಕ್ರಿ.ಶ. ೧೭ ಮತ್ತು ೧೮ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಬಿಳಿ ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ರಾಯಚೂರು ಜಿಲ್ಲೆಯ, ದೇವದುರ್ಗ ತಾಲೂಕಿನ, ಸ್ಥಳ ಗಬ್ಬೂರಿನಿಂದ ರಾಯಚೂರಿನ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪದಲ್ಲಿ ಎರಡು ನಾಗಗಳು ಒಂದನೊಂದು ಪರಸ್ಪರ ಹಬ್ಬಿಕೊಂಡು ನಿಂತ ಭಂಗಿಯಲ್ಲಿ ದಾಂಪತ್ಯದ ಒಂದು ನಾಗದಂಪತಿಗಳ ತಲೆಯ ಮೇಲೆ ಕೀರೀಟವನ್ನು ಧರಿಸಲಾಗಿದೆ. ಈ ಶಿಲ್ಪದ ಎಡ ಮತ್ತು ಬಲಭಾಗದಲ್ಲಿ ಸಣ್ಣ ಸರ್ಪಗಳನ್ನು ಕೆತ್ತಲಾಗಿದೆ.

೪೩) <u>ನಾಗ</u>

ಈ ಶಿಲ್ಪವು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ನಾಗ ಶಿಲ್ಪವನ್ನು ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಒಂದು ನಾಗ ಶಿಲ್ಪವಾಗಿದೆ. ಇಲ್ಲಿ ನಾಗ, ಸರ್ಪವು ತನ್ನ ಹೆಡೆ ಎತ್ತಿ ನಿಂತಿರುವ ಭಂಗಿಯನ್ನು ಕೆತ್ತಲಾಗಿದೆ. ನಾಗ ತನ್ನ ಎಡೆಯ ಒಂದು ಸಣ್ಣ ಕಿರೀಟವನ್ನು ಧರಿಸಿ, ಬಾಯಿಯನ್ನು ಬುಸುಗುಡುವ ಒಂದುನಾಗ ಶಿಲ್ಪವಾಗಿದೆ.

೪೪) ನಾಗದಂಪತಿಗಳು

ಈ ಶಿಲ್ಪವು ಕ್ರಿ.ಶ. ೧೩ ಮತ್ತು ೧೭ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ರಾಯಚೂರು ಜಿಲ್ಲೆಯ, ದೇವದುರ್ಗ ತಾಲೂಕಿನ, ಸ್ಥಳ ಗಬ್ಬೂರಿನಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಕಪ್ಪು ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪಕಲಾಕೃತಿಯಲ್ಲಿ ಎರಡು ನಾಗ ದಂಪತಿಗಳು ಪರಸ್ಪರ ಅಪ್ಪಿಕೊಂಡ ಎಡೆ ಎತ್ತಿ ನಿಂತಿವೆ. ಮತ್ತು ಬಲಗಡೆಯಲ್ಲಿ ಮನುಷ್ಯಾಕೃತಿಯ ನಾಗ ದೇವತೆಯು, ಒಂದು ಕೈಯಲ್ಲಿ ಕತ್ತಿಯನ್ನು ನಾಗ, ದಂಪತಿಗಳ ಮೈಕಟ್ಟು ದಪ್ಪನಾಗಿದ್ದು, ಎಡೆಯ ಮೇಲೆ ಕಿರೀಟವನ್ನು, ಇಡಲಾಗಿದೆ.

೪೫) ನಾಗದಂಪತಿಗಳು

ಈ ಶಿಲ್ಪಕಲಾಕೃತಿಯು ೧೭ ಮತ್ತು ೧೮ನೇ ಶತಮಾನದಲ್ಲಿ ಕೆತ್ತಲ್ಪಟ್ಟಿದೆ. ಈ ಶಿಲ್ಪವು ಕಪ್ಪು ಗ್ರ್ಯಾನೈಟ್ ಕಲ್ಲಿನಲ್ಲಿ ಕೆತ್ತಲ್ಪಟ್ಟಿದೆ. ಈ ಶಿಲ್ಪವು ಸ್ಥಳ ಗಬ್ಬೂರು, ದೇವದುರ್ಗ ತಾಲೂಕು, ರಾಯಚೂರಿನ ನವರಂದರವಾಜ್‌ದ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಲ್ಪಟ್ಟಿದೆ. ಈ ಶಿಲ್ಪದ ಕೆತ್ತನೆಯು ಅಸ್ಪಷ್ಟತೆಯಿಂದ ಕೆತ್ತಲ್ಪಟ್ಟಿದೆ.

ಈ ಶಿಲ್ಪದಲ್ಲಿ ನಾಗ ದಂಪತಿಗಳು ಪರಸ್ಪರ ಹೆಣೆದುಕೊಂಡು ನಿಂತಿರುವ ಭಂಗಿಯಲ್ಲಿ ಕೆತ್ತಲಾಗಿದೆ. ನಾಗಾದ ಬಲಗೈಯಲ್ಲಿ ಕತ್ತಿ ಮತ್ತು ನಾಗಿಣಿಯ ಎಡಗೈಯಲ್ಲಿ ಸರ್ಪವಿದೆ. ಕೆಳಗಿನ ಭಾಗ ಭಾಗಶಃ ಹಾನಿಯಾಗಿದೆ. ಏಳು ಮೊನಚಾದ ಸರ್ಪಗಳು ನಾಗ ನಾಗಿಣಿಯ ತಲೆಯ ಮೇಲೆ ಮೇಲಾವರಣವಾಗಿ ಕಾರ್ಯನಿರ್ವಹಿಸುತ್ತಿವೆ. ನಾಗ ಕೃತಿ, ಹಾರ, ವೃತ್ತಾಕಾರದ ಕಿವಿ ಉಂಗುರಗಳನ್ನು ಧರಿಸುತ್ತಿದ್ದಾರೆ. ಉಡುಗೆ-ತೊಡುಗೆಯು ನೋಡಲು ಅತ್ಯಂತ ಆಸಕ್ತಿದಾಯಕವಾಗಿದೆ ಕೆಳಗಡೆ ಅಕ್ಕ-ಪಕ್ಕದಲ್ಲಿ ಚಿತ್ರಗಾತ್ರದ ಸರ್ಪವನ್ನು ಕೆತ್ತಲಾಗಿದೆ.

ಚಾಮುಂಡ

ಈ ಶಿಲ್ಪದ ಕಾಲವು ಕ್ರಿ.ಶ. ೧೩ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ರಾಯಚೂರು ಜಿಲ್ಲೆಯ ಸ್ಥಳ ರಾಮಲಿಂಗೇಶ್ವರ ದೇವಸ್ಥಾನದಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪವನ್ನು ಕಪ್ಪು ಪಾಚಿಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವನ್ನು ಚಾಮುಂಡ ದೇವಿಯ ರೂಪದಲ್ಲಿದ್ದು, ನೋಡಲು ಸಂದರವಾಗಿ ಕೆತ್ತಲಾಗಿದೆ. ಈ ಶಿಲ್ಪವು ಕುಳಿತಿರುವ ಭಂಗಿಯಲ್ಲಿದೆ. ದೇವಿಯ ನಾಲ್ಕು ಕೈಗಳು ಭಗ್ನವಾಗಿದ್ದು, ಹೊಟ್ಟೆಯ ಭಾಗವು ಅರ್ಧ ಹಾಳಾಗಿದೆ. ದೇವಿಯ ಮುಖವು ಅಸ್ಪಷ್ಟವಾಗಿದೆ.

ದೇವಿಯ ಹಿಂಭಾಗದ ಪ್ರಭಾವಳಿಯು ಕಂಬಗಳಿದಿಂದ ಮೇಲಾವರಣ ಬಳಿಯ ಕೆತ್ತನೆಯಿಂದ, ಸಿಂಹದ ರೂಪದಿಂದ ದೇವಿಯ ತಲೆಯ ಮೇಲ್ಭಾಗದಲ್ಲಿ ಕೆತ್ತಲಾಗಿದೆ. ವಸ್ತ್ರವಿನ್ಯಾಸವು ನೋಡಲು ಸುಂದರವಾಗಿ ಕೆತ್ತಲಾಗಿದೆ.

೪೬) ದೇವಿ

ಈ ಶಿಲ್ಪದ ಕಾಲವು ಕ್ರಿ.ಶ. ೧೪ ಮತ್ತು ೧೬ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ, ಸ್ಥಳ ಆನೆಗೊಂದಿಯಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪವನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪದಲ್ಲಿ ದೇವಿಯ ಶಿಲ್ಪಕಲಾಕೃತಿಯನ್ನು ಆಯತಾಕಾರದ ಚೌಕಟ್ಟಿನಲ್ಲಿ ಉಬ್ಬು ಶಿಲ್ಪದಲ್ಲಿ (೨D) ಕೆತ್ತಲಾಗಿದೆ. ಈ ಶಿಲ್ಪವು ದೇವಿಯು ಕುಳಿತಿರುವ ಭಂಗಿಯಲ್ಲಿದ್ದು, ಅಸ್ಪಷ್ಟ್ಯತೆಯಿಂದ ಕೆತ್ತಲಾಗಿದೆ. ಹೊರ ರೇಖೆಗಳನ್ನು ಮಾತ್ರ ಕಾಣಬಹುದಾಗಿದೆ.

೪೭) ಸರಸ್ವತಿ

ಈ ಶಿಲ್ಪದ ಕಾಲವು ಕ್ರಿ.ಶ. ೧೩ನೇ ಶತಮಾನದಲ್ಲಿ ರಾಯಚೂರು ಜಿಲ್ಲೆಯ, ಲಿಂಗಸೂರು ತಾಲೂಕಿನ, ಕರಡಿಕಲ್ಲು ಸ್ಥಳದಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಕಪ್ಪು ಸೋಪ್ ಕಲ್ಲಿನಲ್ಲಿ ಮಾಧ್ಯಮದಲ್ಲಿ ಕೆತ್ತಲಾಗಿದ್ದು, ಈ ಸರಸ್ವತಿಯ ಶಿಲ್ಪವು ನಾಟ್ಯದ ಭಂಗಿಯಲ್ಲಿ ನಿಂತಿದ್ದು, ಕೈಯಲ್ಲಿ ವೀಣೆಯನ್ನು ಹಿಡಿದು ನುಡಿಸುತ್ತಾ, ಸಂಗೀತದಲ್ಲಿ ಮಗ್ನಳಾಗಿರುವ ದೃಶ್ಯವನ್ನು ನಾವು ಕಾಣಬಹುದು. ನೋಡಲು ಬೇಲೂರಿನ ಶಿಲಬಾಲಕಿಯಂತೆ ಹೋಲುತ್ತಿದೆ.

ಪ್ರಭಾವಳಿಯು ಹೂವಿನ ವಿನ್ಯಾಸ ಕೃತಿಯಿಂದ ಅತ್ಯಂತ ಸಂದರವಾಗಿ ಕೆತ್ತಲಾಗಿದೆ. ಸರಸ್ವತಿಯ ವಸ್ತ್ರಾಭರಣವು ಅತ್ಯಂತ ಅಲಂಕಾರಿಕವಾಗಿ ಕೆತ್ತಲಾಗಿದೆ. ಬಲ ಮತ್ತು ಎಡಭಾಗದಲ್ಲಿ ಇಬ್ಬರು ಸಣ್ಣ ಗಾತ್ರದ ವ್ಯಕ್ತಿಗಳನ್ನು ಸರಸ್ವತಿಯ ಶಿಲ್ಪವನ್ನು ಗಮನಿಸುವಂತೆ ಕೆತ್ತಲಾಗಿದೆ.

೪೮) ರಾಮಾನುಜಾಚಾರ್ಯ

ಈ ಶಿಲ್ಪದ ಕಾಲವು ಕ್ರಿ.ಶ. ೧೪ ಮತ್ತು ೧೬ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಕಪ್ಪು ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಸ್ಥಳ ಆನೆಗೊಂದಿಯಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪವು ವಿದ್ವಾಂಸರಾದ ರಾಮಾನುಜಾರ್ಯರು ಕುಳಿತ ಭಂಗಿಯಲ್ಲಿ ನಾವು ಕಾಣಬಹುದು. ವೇದಾಂತದ ಪ್ರಸಿಧ್ಧ ಸಿಧ್ಧಾಂತಗಳಲ್ಲೊಂದಾದ ವಿಶಿಷ್ಟಾದ್ವೈತದ ಪ್ರತಿಪಾದಕರಲ್ಲಿ ಪ್ರಮುಖರು, ಶ್ರೀ ವೈಷ್ಣವ ಸಂಪ್ರದಾಯದ ಪ್ರಕಾರ ರಾಮಾನುಜನು ತನ್ನ ಗುರುಗಳ ವಿರುಧ್ಧ ನಿಂತು ಅವನು ಪರಿಪೂರ್ಣ ಅದ್ವೈತ ವೇದಾಂತವನ್ನು ಪಾಲಿಸಿದ ಎಂದು ಹೇಳಲಾಗಿದೆ.

೪೯) ಲಿಂಗಪೀಠ

ಈ ಶಿಲ್ಪದ ಕಾಲವು ಕ್ರಿ.ಶ. ೧೫ ಮತ್ತು ೧೬ನೇ ಶತಮಾನದಲ್ಲಿ ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಸ್ಥಳ ಗಂಗಾವತಿಯಿಂದ ಈ ಶಿಲ್ಪವನ್ನು ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಲಿಂಗಪೀಠ ಶಿಲ್ಪವು ಆಯತಾಕಾರದಲ್ಲಿ ಕೆತ್ತಲಾಗಿದ್ದು, ಈ ಶಿಲ್ಪವು ಕಪ್ಪು ಸೋಪ್ ಕಲ್ಲಿನಲ್ಲಿ ಕೆತ್ತಲಾಗಿದ್ದು. ನಿಂತಿರುವ ನಾಲ್ಕು ಸಿಂಹದ ಶಿಲ್ಪವನ್ನು ನಾಲ್ಕು ಕೋನಗಳಲ್ಲಿ ಕೆತ್ತಲಾಗಿದ್ದು, ಮದ್ಯಭಾಗದಲ್ಲಿ ನಂದಿಯ ಶಿಲ್ಪವನ್ನು ಮುಂಭಾಗವಾಗಿ ಕೆತ್ತಿದ್ದಾರೆ. ಲಿಂಗಪೀಠ ಹೂವಿನ ವಿನ್ಯಾಸವನ್ನು ಸುತ್ತಲೂ ಅಲಂಕಾರಿಕವಾಗಿ ಬಳಸಿ ಕೆತ್ತಲಾಗಿದೆ.

೫೦) ಷಣ್ಮುಖ ಮತ್ತು ಕನ್ನಡ ಶಾಸನ (ಹಿಂಬದಿ)

ಈ ಶಿಲ್ಪದ ಕಾಲವು ಕ್ರಿ.ಶ. ೧೨ ನೇ ಶತಮಾನದಲ್ಲಿ ರಾಯಚೂರು ಜಿಲ್ಲೆಯ, ಸ್ಥಳ ರಾಮಲಿಂಗೇಶ್ವರ ದೇವಸ್ಥಾನದಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವನ್ನು ಕಪ್ಪು ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಷಣ್ಮುಖನು ಈಶ್ವರನ ಮಗನಾಗಿ ಪುರಾಣ ಕಥೆಗಳಲ್ಲಿ ನೋಡಬಹುದು.

ಈ ಶಿಲ್ಪವು ಷಣ್ಮುಖನು ಐದು ಮುಖಗಳಿದ್ದು, ಬಲಗಡೆ ಐದು ಕೈಗಳಲ್ಲಿ ಸಶಸ್ತ್ರ, ಹೊಂದಿದ್ದು, ಎಡಗಡೆ ಐದು ಕೈಗಳಲ್ಲಿಯೂ, ಸಶಸ್ತ್ರ ಮುರಿದು ಹೋಗಿರುವ ದೃಶ್ಯವನ್ನು ಕಾಣಬಹುದು. ಷಣ್ಮುಖನು ತನ್ನ ವಾಹನವಾದ ನವಿಲಿನ ಮೇಲೆ ಕುಳಿತಿದ್ದಾನೆ. ನವಿಲು ತನ್ನ ಬಾಯಿಯಲ್ಲಿ ಹಾವನ್ನು ಹಿಡಿದಿದೆ. ಈ ಶಿಲ್ಪದಲ್ಲಿ ಮುಖ ಮತ್ತು ಕೈ ಕಾಲುಗಳ ಭಾಗವು ಭಾಗಶಃ ಹಾಳಾಗಿದೆ. ಒಟ್ಟಾರೆ ನೋಡಲು ಅಪರೂಪದ ಶಿಲ್ಪವು ಇದಾಗಿದೆ.

೫೧) ಬಾಗಿಲುವಾಡ

ಈ ಶಿಲ್ಪದ ಕಾಲವು ಕ್ರಿ.ಶ. ೧೪ ಮತ್ತು ೧೬ನೇ ಶತಮಾನದಲ್ಲಿ ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಸ್ಥಳ ಆನೆಗುಂದಿಯಿಂದ ರಾಯಚೂರು ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪವು ಅತ್ಯಂತ ಸುಂದರವಾಗಿ ಸೂಕ್ಷ್ಮವಾಗಿ ಕೆತ್ತಲಾಗಿದ್ದು, ಬಾಗಿಲು ಚೌಕಟ್ಟಿನ ಒಂದು ಭಾಗದ ಮಧ್ಯದಲ್ಲಿ ಮುಖ್ಯ ವ್ಯಕ್ತಿ ಪ್ರಾಯಶಃ ದ್ವಾರಪಾಲಕನದ್ದಾಗಿದೆ. ಅವರು ನಾಲ್ಕು ಶಸ್ತ್ರಸಜ್ಜಿತರಾಗಿದ್ದಾರೆ. ಎಲ್ಲಾ ನಾಲ್ಕು ಕೈಗಳು ಮುರಿದುಹೋಗಿವೆ. ಈ ಶಿಲ್ಪದಲ್ಲಿ ಕಿರಿಟಾ, ವೃತ್ತಾಕಾರದ ಕಿವಿಯೋಲೆಗಳು, ಬಳೆಗಳು, ಆಭರಣಗಳು, ಸುಂದರವಾಗಿ ಕೆತ್ತಲಾಗಿದೆ.

ದ್ವಾರಪಾಲಕನ ಹಿಂಬದಿಯಲ್ಲಿ ಸೂಕ್ಷ್ಮಗಾತ್ರದ ಎಡಭಾಗದಲ್ಲಿ, ನೃತ್ಯ ಭಂಗಿಗಳಲ್ಲಿ ಕೆತ್ತಲಾಗಿದೆ, ದ್ವಾರಪಾಲಕನ ಬಲಭಾಗದ ಕಡೆಗೆ, ಮತ್ತೊಂದು ಮಹಿಳಾ ಶಿಲ್ಪವು ನಿಂತಿರುವ ಭಂಗಿಯಲ್ಲಿ ಕೆತ್ತಲಾಗಿದೆ. ದ್ವಾರಪಾಲಕನ ಕಾಲುಗಳು ಮತ್ತು ಬಾಗಿಲು ಚೌಕಟ್ಟು ಭಾಗಶಃ ಮುರಿದು ಹೋಗಿರುವ ಅಂಶಗಳನ್ನು ಶಿಲ್ಪವನ್ನು ಕಾಣಬಹುದು.

೫೨) ಆನೆ

ಈ ಶಿಲ್ಪಕಲಾಕೃತಿಯು ಕ್ರಿ.ಶ. ೧೫, ಮತ್ತು ೧೭ನೇ ಶತಮಾನದಾಗಿದ್ದು, ಈ ಶಿಲ್ಪಕಲಾಕೃತಿಯು ನೀಲಿ ಕಲ್ಲಿನಲ್ಲಿ ಕೆತ್ತಲಾಗಿದೆ. ಆನೆಯ ಮೇಲ್ಭಾಗದಲ್ಲಿ ವಿನ್ಯಾಸಗಳುಳ್ಳ (ಬಟ್ಟೆಯನ್ನು ಹೊದಿಸಲಾಗಿದೆ. ಈ ಬಟ್ಟೆಯಲ್ಲಿ ಕಂಡು ಬರುವ ವಿನ್ಯಾಸಗಳು ಅಸ್ಪಷ್ಟವಾಗಿದ್ದು, ರೇಖಾ ವಿನ್ಯಾಸದಿಂದ ಗುರುತಿಸಬಹುದು. ಈ ಶಿಲ್ಪಕಲಾಕೃತಿಯು ಒಂದು ಪಟ್ಟಿಕೆಯಲ್ಲಿ ರಚನೆಗೊಂಡಿದೆ. ಈ ಶಿಲ್ಪವು ಒಟ್ಟಾರೆಯಾಗಿ ಹೇಳುವುದಾದರೆ ಅಸ್ಪಷ್ಟವಾಗಿ ರಚಿಸಲಾಗಿದೆ.

ಈ ಶಿಲ್ಪವು ಎಡಭಾಗಕ್ಕೆ ತಿರುಗಿ ನಿಂತಿರುವ ದೃಶ್ಯ ಗುರುತಿಸಬಹುದಾಗಿದೆ.

ಈ ಶಿಲ್ಪಕಲಾಕೃತಿಯು ದ್ವಿಮುಖ ಆಯಾಮದಿಂದ ಕೂಡಿದ್ದು (೨D) ಈ ಶಿಲ್ಪಕಲಾಕೃತಿಯು ರಾಯಚೂರಿನ ನವರಂಗ ದರವಾಜಾದ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಲಾಗಿದೆ.

೫೩) ಹನುಮಂತ

ಈ ಶಿಲ್ಪವು ಕ್ರಿ.ಶ. ೧೪ ಮತ್ತು ೧೬ನೇ ಶತಮಾನದಲ್ಲಿ ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕು ಆನೆಗುಂದಿ ಸ್ಥಳದಿಂದ ರಾಯಚೂರಿನ ನವರಂಗದರವಾಜ್ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಬಿಳಿ ಕಲ್ಲಿನಲ್ಲಿ ಕೆತ್ತಲಾಗಿದ್ದು, ಶಿಲ್ಪದ ಕೆತ್ತನೆಯು ಅಸ್ಪಷ್ಟತೆಯನ್ನು ಹೊಂದಿದೆ.

ಈ ಶಿಲ್ಪದಲ್ಲಿ ಹನುಮಂತನನ್ನು ನಿಂತಿರುವ ಭಂಗಿಯಲ್ಲಿ ಎಡಕ್ಕೆ ತಿರುಗಿದ್ದಾನೆ. ಬಲಗೈಯಲ್ಲಿ ಅಭಯಮುದ್ರದಲ್ಲಿ ಮೇಲಕ್ಕೆ ಎತ್ತಿದ್ದಾನೆ. ಎಡಗೈಯಲ್ಲಿ ಗಧಾವನ್ನು ಹಿಡಿದಿದ್ದಾನೆ. ತಲೆಯ ಮೇಲೆ ಕಿರೀಟವನ್ನು ಧರಿಸಿದೆ. ಇರುವುದು ಒಂದು ವೈಶಿಷ್ಟ್ಯತೆಯನ್ನು ಹೊಂದಿದೆ. ವಿಶಾಲವಾದ ನೆಕ್ಲೇಸ್‌ಗಳು, ಭುಜಬಂದ, ಬಳೆಗಳು ಮತ್ತು ಕಾಲುಗೆಜ್ಜೆಗಳಿಂದ ಅಲಂಕರಿಸಿ ನೋಡಲು ಸುಂದರವಾಗಿದೆ. ಆಕೃತಿ ಸ್ಥಳೀಯ ರೂಪಾಂತರ ಶೈಲಿಯಲ್ಲಿ ಕೆತ್ತಲಾಗಿದೆ. ಉದ್ದನೆಯ ಬಾಲವನ್ನು ಮುಖದ ಮುಂಭಾಗಕ್ಕೆ ಬರುವಂತೆ ಉದ್ದಾವಾಗಿ, ಕುತೂಹಲಕರವಾಗಿ ಕೆತ್ತಲಾಗಿದೆ.

೫೪) ಕಂಬ

ಈ ಶಿಲ್ಪವು ೧೪ ಮತ್ತು ೧೬ನೇ ಶತಮಾನದಲ್ಲಿ ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಆನೆಗುಂದಿ ಸ್ಥಳದಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಸೋಪ್ ಕಲ್ಲುಲಿನ ಮಾಧ್ಯಮದಲ್ಲಿ ಕೆತ್ತಲಾಗಿದೆ. ಈ ಕಂಬವು ಚೌಕಾಕಾರದ ಯೋಜನೆಯಲ್ಲಿ ಕೆತ್ತಲಾಗಿದ್ದು, ನೆಲಮಾಳಿಗೆಯ ನಾಲ್ಕು ಮುಖಗಳನ್ನು ಪುರುಷ ಮತ್ತು ಪ್ರಖ್ಯಾತ ವ್ಯಕ್ತಿಗಳಿಂದ ಚಿತ್ರಿಸಲಾಗಿದೆ. ನೆಲಮಾಳಿಗೆಯ ಮೇಲಿರುವ ಕಂಬವು

ಅಂಟಿಕೊಂಡಿರುತ್ತದೆ. ನೆಲಮಾಳಿಗೆಯಲ್ಲಿ ಚಿತ್ರಿಸಿದ ಅಂಕಿಅಂಶಗಳು ಮತ್ತು ಲೋಥ ಪಿಲ್ಲರ್ ವಿಶಿಷ್ಟ ಹೊಯ್ಸಳ ಶೈಲಿಯನ್ನು ಹೊಂದಿವೆ.

೫೫) ವೈಷ್ಣವ

ಈ ಶಿಲ್ಪದ ಕಾಲವು ೧೪ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವನ್ನು ಕ್ಲೋರಿಟಿಕ್ ಸ್ಕಿಸ್ಟ್ ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಗಬ್ಬೂರಿನ ಸ್ಥಳದಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ವೈಷ್ಣವ ಶಿಲ್ಪವು ಭಾಗಶಃ ಮುರಿದು ಬಿದ್ದ ದ್ವಾರಪಾಲಕನ ನಿಂತಿರುವ ಭಂಗಿನಲ್ಲಿ ಕೆತ್ತಲಾಗಿದೆ. ನಾಲ್ಕು ಕೈಯಲ್ಲಿ ಸಶಸ್ತ್ರವನ್ನು ಹಿಡಿದಿದ್ದಾನೆ.

ಮೇಲಿನ ಬಲಗೈಯಲ್ಲಿ ಚಕ್ರವನ್ನು, ಕೆಳ ಬಲಗೈಯಲ್ಲಿ ಗಧಾವನ್ನು, ಶಿಲ್ಪದ ಬಲ ಪಾದದ ಬಳಿ ಇರಿಸಲಾಗಿದೆ. ಕುತ್ತಿಗೆಯ ಭಾಗ, ಎಡಗೈ, ಬಲಕಾಲು ಮುರಿದುಹೋಗಿದೆ. ಬಳೆಗಳು, ಹಾರಗಳು, ಉದ್ದವಾದ ಹಾರ, ಅಲಂಕಾರಿಕ ಆಭರಣಗಳು, ಅಂಚುಗಳನ್ನು ಸ್ಪಷ್ಟವಾಗಿ ಕೆತ್ತಲಾಗಿದೆ.

೫೬) ಉಮಾ ಮಹೇಶ್ವರ

ಈ ಶಿಲ್ಪವು ಕ್ರಿ.ಶ. ೧೫ ಮತ್ತು ೧೬ನೇ ಶತಮಾನದಲ್ಲಿ ಕೆತ್ತಲಾಗಿದೆ. ಇದನ್ನು ರಾಯಚೂರು ಜಿಲ್ಲೆಯ ಗಂಗಾವತಿ ತಾಲೂಕಿನ, ಸ್ಥಳ ಆನೆಗೊಂದಿಯಿಂದ ವಸ್ತು ಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಉಮಾಮಹೇಶ್ವರ ಶಿಲ್ಪವು ಸುಖಾಸನದ ಭಂಗಿಯಲ್ಲಿ ಕುಳಿತಿದ್ದಾರೆ. ಈ ಶಿಲ್ಪಕಲಾಕೃತಿಯಲ್ಲಿ ಸೂಕ್ಷ್ಮ ಕೆತ್ತನೆಯ ವಿನ್ಯಾಸವನ್ನು ನೋಡಬಹುದಾಗಿದೆ. ಇಲ್ಲಿ ಮಹೇಶ್ವರನ ತೊಡೆಯ ಮೇಲೆ ಉಮಾ ಕುಳಿತಿರುವ ದೃಶ್ಯವನ್ನು ನೋಡಬಹುದು.

ಈ ಶಿಲ್ಪಕಲಾಕೃತಿಯಲ್ಲಿ ಮಹೇಶ್ವರನ ಮೂರು ಕೈಗಳು ಮುರಿದು ಹೋಗಿವೆ ಮತ್ತು ಎಡಗೈಯಲ್ಲಿ ದೇವಿ ಉಮಾಳನ್ನು ಹಿಡಿದಿದ್ದಾನೆ. ದೇವಿ ಉಮಾಮಹೇಶ್ವರನ ಎಡ ತೊಡೆಯ

ಮೇಲೆ ಕುಳಿತಿದ್ದಾಳೆ ದೇವಿಯ ಎಡ ಕೈ ಮುರಿದು ಹೋಗಿದೆ. ಬಲಗೈಯಲ್ಲಿ ಶಿವನನ್ನು ಅಪ್ಪಿಕೊಂಡು ಕುಳಿತಿದ್ದಾಳೆ.· ಮಹೇಶ್ವರನು ಕರಂಡಮುಕುಟವನ್ನು ಧರಿಸಿದ್ದಾನೆ. ವೃತ್ತಾಕಾರದ ಕಿವಿಯೋಲೆಗಳು, ವಿಶಾಲವಾದ ಕೊರಳು ಸರಗಳು, ಭುಜ ಬಂಧ, ಬಳೆಗಳು ಮತ್ತು ಕಾಲುಗೆಜ್ಜೆಗಳನ್ನು ಧರಿಸಿದ್ದಾಳೆ.

ದೇವಿ ಉಮಾ ಗುಂಗರ ಕೂದಲಿನ ಕೇಶವಿನ್ಯಾಸ, ವೃತ್ತಾಕಾರದ ಕಿವಿಯೋಲೆಗಳು, ವಿಶಾಲಹಾರ, ಬಳೆಯನ್ನು ಧರಿಸಿದ್ದಾಳೆ. ಈ ಶಿಲ್ಪಕಲಾಕೃತಿಯಲ್ಲಿ ಆಭರಣಗಳನ್ನು ಧರಿಸಿರುವ ಕೆತ್ತನೆಯು ಪರಿಕರವು ನೋಡಲು ಮನೋಹರವಾಗಿದೆ. ಮಹೇಶ್ವರನ ಬಲಕಾಲು ಭಾಗಶಃ ಮುರಿದು ಹೋಗಿದೆ. ಕೆಳಗಡೆ ಮಹೇಶ್ವರನ ಬಲಗಾಲಿನ ಕೆಳಗೆ ನಂದಿಯು ಕುಳಿತಿದೆ. ಇದರ ಮುಖವು ಹಾಳಾಗಿದೆ. ಪ್ರಭಾವಳಿಯ ಮತ್ತು ಸಿಂಗಾಸನ ಸೂಕ್ಷ್ಮ ಹೂ, ಬಳ್ಳಿಯ ಕೆತ್ತನೆಯು ನೋಡಲು ಗಮನಾರ್ಹವಾಗಿದೆ.

೫೭) ನಂದಿ

ನಂದಿ ಈ ಶಿಲ್ಪವು ೧೫ ಮತ್ತು ೧೬ನೇ ಶತಮಾನದಲ್ಲಿ ಕೆತ್ತಲ್ಪಟ್ಟಿದೆ. ಈ ಶಿಲ್ಪವನ್ನು ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ ಆನೆಗುಂದಿ ಸ್ಥಳದಿಂದ ರಾಯಚೂರಿನ ನವರಂಗದರವಾಜ್ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಸಿ ಇಡಲಾಗಿದೆ.

ಈ ಶಿಲ್ಪವನ್ನು ಕಪ್ಪು ಕಲ್ಲಿನಲ್ಲಿ ಕೆತ್ತಲಾಗಿದೆ. ನಂದಿ ಅಥವಾ ನಂದಿಕೇಶ್ವರನು ಶಿವನ ವಾಹನ ಸಂಕೇತವಾಗಿದ್ದಾನೆ. ಇಲ್ಲಿ ನಂದಿಯು ಕುಳಿತಿರುವ ಭಂಗಿಯಲ್ಲಿ ಕೆತ್ತಲಾಗಿದೆ. ಕಿವಿಗಳು ಭಾಗಶಃ ಮುರಿದಿವೆ. ಕಬ್ಬಿಣದ ಸರಳೀನಿಂದ ನಂದಿಯ ಬೆನ್ನಿನಲ್ಲಿ ಮತ್ತು ಕುತ್ತಿಗೆಯಲ್ಲಿ ಗಂಟೆಯನ್ನು ಕಟ್ಟಲಾಗಿದೆ. ಹಿಂಪ್ ಮತ್ತು ಹಿಂಭಾಗದ ಭಾಗವು ಸ್ವಲ್ಪ ಹಾನಿಯಾಗಿದೆ. ಅಲಂಕರಣವಾಗಿ ಸಣ್ಣ-ಸಣ್ಣ ಗಂಟೆಗಳಿಂದ ಸುಂದರವಾಗಿ ಕೆತ್ತಲಾಗಿದೆ.

೫೮) ಹನುಮಂತ

ಈ ಶಿಲ್ಪವು ಕ್ರಿ.ಶ. ೧೪ ಮತ್ತು ೧೬ನೇಯ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಸ್ಥಳ ಆನೆಗೊಂದಿಯಿಂದ ರಾಯಚೂರು ವಸ್ತುಸಂಗ್ರಹಾಲಯದಿಂದ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಕಪ್ಪು ಸೋಪ್‌ಕಲ್ಲಿನಲ್ಲಿ ಕೆತ್ತಲಾಗಿದೆ.

ಇಲ್ಲಿ ಹನುಮಂತ ಶಿಲ್ಪವು ವಿಶಿಷ್ಠ ಶೈಲಿಯಲ್ಲಿರುವುದನ್ನು ಕಾಣಬಹುದು. ಈ ಶಿಲ್ಪದಲ್ಲಿ ಹನುಮಂತನು ಸಮಭಂಗಿಯಲ್ಲಿ ನಿಂತಿದ್ದಾನೆ.

ಈ ಶಿಲ್ಪದಲ್ಲಿ ಹನುಮಂತನ ವೇಷಭೂಷಣ ಮತ್ತು ವಸ್ತ್ರಾಭರಣವು ನೋಡಲು ಸೊಗಸಾಗಿದೆ. ಹನುಮಂತನು ವಿನಯಭಾವನೆಯಿಂದ ನಮಸ್ಕರಿಸುವ ಒಂದು ಭಂಗಿ ಇದಾಗಿದೆ. ಈ ಶಿಲ್ಪದಲ್ಲಿ ಕಾಲಿನ ಅರ್ಧ ಭಾಗವು ಕೆತ್ತನೆ ಮಾಡಿಲ್ಲ. ಪ್ರಭಾವಳಿಯು ಸಾಮಾನ್ಯವಾಗಿ ಕೆತ್ತಲಾಗಿದೆ.

೫೯) ನರ್ತಕಿ

ಈ ಶಿಲ್ಪವು ಕ್ರಿ.ಶ. ೧೩ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವನ್ನು ರಾಯಚೂರು ಜಿಲ್ಲೆಯ, ಲಿಂಗಸುಗೂರು ತಾಲೂಕಿನ, ಸ್ಥಳ ಕರಡಿಕಲ್ಲುನಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಕಪ್ಪು ಸೋಪ್ ಕಲ್ಲಿನ ಮಾಧ್ಯಮದಲ್ಲಿ ಕೆತ್ತಲಾಗಿದ್ದು, ಈ ನರ್ತಕಿಯ ಶಿಲ್ಪವು ನಾಟ್ಯದ ಭಂಗಿಯಲ್ಲಿ ನಿಂತಿದ್ದು, ನೋಡಲು ಶಿಲಬಾಲಕಿಯಂತೆ ಹೋಲುತ್ತಿದೆ.

ನರ್ತಕಿಯ ವಸ್ತ್ರಾಭರಣವು ಅತ್ಯಂತ ಅಲಂಕಾರಿಕವಾಗಿ ಕೆತ್ತಲಾಗಿದೆ. ಬಲ ಮತ್ತು ಎಡ ಭಾಗದಲ್ಲಿ ಇಬ್ಬರು ಸಣ್ಣ ಗಾತ್ರದ ವ್ಯಕ್ತಿಗಳನ್ನು ಕಾಣಬಹುದು. ಪ್ರಭಾವಳಿಯು ಹೂವಿನ ವಿನ್ಯಾಸಕೃತಿಯಿಂದ ಅತ್ಯಂತ ಸುಂದರವಾಗಿ ಕೆತ್ತಲಾಗಿದೆ.

೬೦) ಅದಿನಾಥ

ಈ ಶಿಲ್ಪವು ಕ್ರಿ.ಶ. ೧೬ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪಕಲಾಕೃತಿಯನ್ನು ರಾಯಚೂರು ಜಿಲ್ಲೆಯ, ಲಿಂಗಸುಗೂರು ತಾಲೂಕಿನ, ಸ್ಥಳ ಕರಡಿಕಲ್ಲು,ನಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವನ್ನು ಸ್ಕಿಸ್ಟ್ ಕಲ್ಲಿನಲ್ಲಿ ಕೆತ್ತಲಾಗಿದೆ.

ಈ ಶಿಲ್ಪದಲ್ಲಿ ಆದಿನಾಥನು ಪದ್ಮಾಸಾನದಲ್ಲಿ ಕುಳಿತಿರುವ ದೃಶ್ಯವನ್ನು ಕಾಣಬಹುದು. ಅಂಗೈಗಳು ಜ್ಞಾನದಲ್ಲಿ ಕುಳಿತಂತೆ ಇದೆ. ಅಂಡಾಕಾರದ ಪ್ರಭಾವಳಿ ಮುರಿದುಹೋಗಿದೆ. ಅದಿನಾಥನ ಮುಖ ಸ್ವಲ್ಪ ಮಟ್ಟಿಗೆ ವಿರೂಪಗೊಂಡಿದೆ.

ಗಂಗೂರು ಕೂದಲಿನ ಕೇಶವಿನ್ಯಾಸವನ್ನು ಹೊಂದಿದ್ದು, ಬೃಹತ್ ಅನುಗುಣವಾದ ದೇಹ, ಉದ್ದನೆಯ ಕಿವಿಗಳು, ಧ್ಯಾನಸಮುದ್ರ, ಸಾಮಾನ್ಯ ಲಕ್ಷಣಗಳಾಗಿವೆ. ಭಾಗಶಃ ಮುರಿದುಹೋದ ಪ್ರಭಾವಳಿಯ ಎಡ ಮತ್ತು ಬಲ ಭಾಗದಲ್ಲಿ ಅಭ್ಯರ್ಥಿಗಳನ್ನು ತೋರಿಸಲಾಗಿದೆ. ಪ್ರಭಾವಳಿಯಲ್ಲಿ ನಿಂತಿರುವ ಸಿಂಹಗಳ ಬಲ ಮತ್ತು ಎಡಭಾಗದಲ್ಲಿ ಚಿತ್ರಿಸಲಾಗಿದೆ.

೬೧) ಪಾರ್ಶ್ವನಾಥ ಮತ್ತು ಕನ್ನಡ ಶಾಸನ

ಈ ಶಿಲ್ಪಕಲಾಕೃತಿಯು ೧೨ನೆಯ ಶತಮಾನದಲ್ಲಿ ಕೆತ್ತಲಾಗಿದ್ದು, ಈ ಶಿಲ್ಪವನ್ನು ರಾಯಚೂರು ಜಿಲ್ಲೆಯ, ಲಿಂಗಸೂರು ತಾಲೂಕಿನ, ಸ್ಥಳ ಕರಡಿಕಲ್ಲುನಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ.

ಈ ಶಿಲ್ಪವು ಆಸಕ್ತಿದಾಯಕ ಜೈನಧರ್ಮದ ಮಹಾನ ತೀರ್ಥಂಕರರು ಅಥವಾ ಪ್ರವಾದಿಗಳಲ್ಲಿ ಪಾರ್ಶ್ವನಾಥ ಕೂಡ ಒಬ್ಬರು.

ಪಾರ್ಶ್ವನಾಥನ ಶಿಲ್ಪವು ಖಡ್ಗಾಸನ ಮತ್ತು ಕಯೋಟ್ಸರ್ಮುಮುದ ಭಂಗಿಗಳಲ್ಲಿ ನಿಂತಿದೆ. ಪಾರ್ಶ್ವನಾಥನಿಗೆ ಏಳು ಮೊನಚಾದ ನಾಗಾ ಮೇಲಾವರಣವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೂದಲಿನ ಶೈಲಿಕೃತ ಸುರುಳಿಗಳು, ಬೃಹತ ಆದರೆ ಪ್ರಮಾಣಿತ ದೇಹ, ಉದ್ದನೆಯ ಕಿವಿಗಳು,

ತೆರೆದ ಕಣ್ಣುಗಳು, ಕುತ್ತಿಗೆಯ ಸುತ್ತ ಸುಕ್ಕುಗಳು ಆಕರ್ಷಕವಾಗಿವೆ. ಧಾರನೇಂದ್ರ ಯಾಕ್ಷ ಮತ್ತು ಪದ್ಮಾವತಿ ಯಕ್ಷಿಗಳನ್ನು ಪಾರ್ಶ್ವನಾಥದ ಎಡಭಾಗದಲ್ಲಿ ಕೆತ್ತಲಾಗಿದೆ. ಪ್ರಭಾವಳಿ ಭಾಗಶಃ ಮುರಿಯಲಾಗಿತ್ತು.

೬.೨) ಕಂಬ

ಈ ಶಿಲ್ಪವು ೧೪ ಮತ್ತು ೧೬ನೇ ಶತಮಾನದಲ್ಲಿ ಕೆತ್ತಲಾಗಿದೆ. ಕೊಪ್ಪಳ ಜಿಲ್ಲೆಯ, ಗಂಗಾವತಿ ತಾಲೂಕಿನ, ಆನೆಗೊಂದಿ ಸ್ಥಳದಿಂದ ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿಡಲಾಗಿದೆ. ಈ ಶಿಲ್ಪವು ಸೋಪ್‌ಕಲ್ಲಿನಲ್ಲಿ ಮಾಧ್ಯಮದಲ್ಲಿ ಕೆತ್ತಲಾಗಿದೆ. ಈ ಕಂಬವು ಚೌಕಾಕಾರದ ಯೋಜನೆಯಲ್ಲಿ ಕೆತ್ತಲಾಗಿದ್ದು, ಮೇಲ್ಮಳಿಗೆಯ ನಾಲ್ಕು ಭಾಗಗಳಲ್ಲಿ ಹೂವಿನ ವಿನ್ಯಾಸಕೃತಿಯನ್ನು ಕೆತ್ತಲಾಗಿದೆ.

೬.೩) ನರಸಿಂಹ ಮೂರ್ತಿಯನ್ನು ಹೋಲುವ ಶಿಲ್ಪಕಾಲಾಕೃತಿ

ಈ ಶಿಲ್ಪವು ವಸ್ತು ಸಂಗ್ರಹಾಲಯದ ನವರಂಗ ದರವಾಜಾದ ಎರಡನೇಯ ಮೂಲ ಸ್ತಂಭವಾಗಿದ್ದು, ಇದರ ಉದ್ದ ಏಳು ಅಡಿ ಹಾಗೂ ಅಗಲ ನಾಲ್ಕು ಅಡಿಯಾಗಿದ್ದು, ಇದರ ಮದ್ಯಭಾಗದಲ್ಲಿ ಉಬ್ಬು ಶಿಲ್ಪಗಳನ್ನು ಕೆತ್ತಲಗಿದೆ. ಮೂಲ ಶಿಲ್ಪದ ಆಕಾರವು ಮುಖ ಸಿಂಹದಾಗಿದ್ದು, ದೇಹ ಹಾಗೂ ಕೈಕಾಲುಗಳು ಸಿಂಹದ ಹೋಲಿಕೆಯಲ್ಲಿದ್ದು, ಆ ಶಿಲ್ಪವು ಗಜಾದ ಮೇಲೆ ಕುಳಿತಿರುವ ದೃಶ್ಯ ವಿಶಿಷ್ಠವಾಗಿದೆ.

ಸಿಂಹದ ಎಡ ಮತ್ತು ಬಲದಲ್ಲಿ ಇಬ್ಬರು ಸೈನಿಕರು ಯುಧ್ಧದ ಮಾಡುತ್ತಿರುವಂತೆ, ಅವರ ಕೈಯಲ್ಲಿ ಕತ್ತಿ ಮತ್ತು ಗುರಾಣಿ ಹಿಡಿದು ಸಿಂಹದ ಬಾಯಿಯಿಂದ ಹೊರ ಬರುತ್ತಿರುವ

ಒಂದು ದೃಶ್ಯವಾಗಿದೆ. ಮಧ್ಯಭಾಗದಲ್ಲಿ ಉದ್ದನೆಯ ಬಾಲವನ್ನು ನೋಡಬಹುದು. ಅದರ ಮೇಲ್ಭಾಗದಲ್ಲಿ ಎದುರು-ಬದುರಾಗಿ ನಿಂತಿರುವ ಎರಡು ನವಿಲುಗಳನ್ನು ಕೆತ್ತಲಾಗಿದೆ.



ಚಿತ್ರ ೧) ವೀರಗಲ್ಲು



ಚಿತ್ರ ೨)ವೀರಗಲ್ಲು ಕ್ರಿ.ಶ. ೧೭ ಸ್ಥಳ-ಗಂಗಾವತಿತಾಲ್ಲೂಕು-ಗಂಗಾವತಿ,ಜಿಲ್ಲೆ-ಕೊಪ್ಪಳ



ಚಿತ್ರ ೩) ವೀರಗಲ್ಲು ಕ್ರಿ.ಶ.-೧೩ನೇ ಶತಮಾನದ ಸ್ಥಳ-ರಾಮಲಿಂಗೇಶ್ವರ ದೇವಸ್ಥಾನ, ಜಿಲ್ಲೆ-ರಾಯಚೂರು



ಚಿತ್ರ ೪)ವೀರಗಲ್ಲು ಕ್ರಿ.ಶ.-೧೩ನೇ ಶತಮಾನ ಸ್ಥಳ-ರಾಮಲಿಂಗೇಶ್ವರ
ದೇವಸ್ಥಾನ ತಾಲ್ಲೂಕು ರಾಯಚೂರುಜಿಲ್ಲೆ-ರಾಯಚೂರು



ಚಿತ್ರ ೫)ವೀರಗಲ್ಲು ಕ್ರಿ.ಶ.-೧೬,೧೭ನೇ ಶತಮಾನ ಸ್ಥಳ-ಗಂಗಾವತಿ ತಾಲ್ಲೂಕು-ಗಂಗಾವತಿ ಜಿಲ್ಲೆ-ರಾಯಚೂರು



ಚಿತ್ರ ೬.)ವೀರಗಲ್ಲು ಕ್ರಿ.ಶ.- ೧೭, ೧೮ನೇ ಶತಮಾನ ಸ್ಥಳ-ಗಬ್ಬೂರು ತಾಲ್ಲೂಕು-ದೇವದುರ್ಗಜಿಲ್ಲೆ-ರಾಯಚೂರು



ಚಿತ್ರ ೭) ವೀರಗಲ್ಲು



ಚಿತ್ರ ೮) ವೀರಗಲ್ಲು ಕ್ರಿ.ಶ.-೧೭ನೇ ಶತಮಾನ ಸ್ಥಳ-ಗಂಗಾವತಿ ತಾಲ್ಲೂಕು-ಗಂಗಾವತಿ, ಜಿಲ್ಲೆ-ಕೊಪ್ಪಳ



ಚಿತ್ರ ೯) ವೀರಗಲ್ಲು ಕ್ರಿ.ಶ.-೧೬, ೧೮ ಶತಮಾನ ಸ್ಥಳ-ಗಂಗಾವತಿ ತಾಲ್ಲೂಕು-ಗಂಗಾವತಿ ಜಿಲ್ಲೆ-ಕೊಪ್ಪಳ



ಚಿತ್ರ ೧೦) ವೀರಗಲ್ಲು ಕ್ರಿ.ಶ.-೧೪, ೧೬ನೇ ಶತಮಾನ ಸ್ಥಳ-ಆನೆಗೊಂದಿ, ತಾಲ್ಲೂಕು-ಗಂಗಾವತಿಜಿಲ್ಲೆ-ಕೊಪ್ಪಳ



ಚಿತ್ರ ೧೧) ಗಣೇಶ ಕ್ರಿ.ಶ.-೧೬, ೧೭ನೇ ಶತಮಾನ ಸ್ಥಳ-ಗಬ್ಬೂರುತಾಲ್ಲೂಕು-ಲಿಂಗಸುಗೂರು ಜಿಲ್ಲೆ-ರಾಯಚೂರು




ಚಿತ್ರ ೧೨) ಗಣೇಶ ಕ್ರಿ.ಶ.-೧೫, ೧೬ನೇ ಸ್ಥಳ ಆನೆಗೊಂದಿ ತಾಲ್ಲೂಕು ಗಂಗಾವತಿ, ಜಿಲ್ಲೆ ಕೊಪ್ಪಳ



ಚಿತ್ರ೧೩) ಗಣೇಶ ಕ್ರಿ.ಶ.-೧೫, ೧೬ನೇ ಸ್ಥಳ ಆನೆಗೊಂದಿ ತಾಲ್ಲೂಕು ಗಂಗಾವತಿ, ಜಿಲ್ಲೆ ಕೊಪ್ಪಳ



ಚಿತ್ರ೧೪) ಗಣೇಶ ಕ್ರಿ.ಶ.-೧೫, ೧೬ನೇ ಸ್ಥಳ ಆನೆಗೊಂದಿ ತಾಲ್ಲೂಕು ಗಂಗಾವತಿ, ಜಿಲ್ಲೆ ಕೊಪ್ಪಳ



ಚಿತ್ರ ೧೫) ಆನೆಗಳು ಕ್ರಿ.ಶ.೧೪, ೧೬ನೇ ಶತಮಾನ ಸ್ಥಳ ಆನೆಗೊಂದಿ ತಾಲೂಕು ಗಂಗಾವತಿ, ಜಿಲ್ಲೆ ಕೊಪ್ಪಳ



ಚಿತ್ರ ೧೬) ಆನೆಗಳ ಪಟ್ಟಿಕೆ

ಕ್ರಿ.ಶ.೧೭ನೇ ಶತಮಾನ ಸ್ಥಳ ರಾಮಲಿಂಗೇಶ್ವರ ದೇವಸ್ಥಾನ ತಾಲೂಕು ರಾಯಚೂರು ಜಿಲ್ಲೆ ರಾಯಚೂರು



ಚಿತ್ರ ೧೭) ಆನೆ

ಕ್ರಿ.ಶ.೧೭ನೇ ಶತಮಾನ ಸ್ಥಳ ರಾಯಚೂರು ತಾಲೂಕು ರಾಯಚೂರು ಜಿಲ್ಲೆ ರಾಯಚೂರು




ಚಿತ್ರ ೧೮) ಆನೆಗಳು ಕಾಲ ಕ್ರಿ.ಶ- ೧೪, ೧೨ನೇ ಶತಮಾನ ಸ್ಥಳ-ರಾಯಚೂರು ತಾಲೂಕು ರಾಯಚೂರು ಜಿಲ್ಲೆ ರಾಯಚೂರು



ಚಿತ್ರ ೧೯) ಆನೆಗಳು ಕಾಲ ಕ್ರಿ.ಶ- ೧೪, ೧೨ನೇ ಶತಮಾನ ಸ್ಥಳ-ರಾಯಚೂರು ತಾಲೂಕು-ರಾಯಚೂರು ಜಿಲ್ಲೆ-ರಾಯಚೂರು



ಚಿತ್ರ ೯೦) ಆನೆ ಕ್ರಿ.ಶ. ೧೭ನೇ ಶತಮಾನ ಸ್ಥಳ-ರಾಯಚೂರು ತಾಲೂಕು ರಾಯಚೂರು ಜಿಲ್ಲೆ ರಾಯಚೂರು



ಚಿತ್ರ ೯೦) ಆನೆಗಳ ಪಟ್ಟಿಕೆ ಕ್ರಿ.ಶ. ೧೭ನೇ ಶತಮಾನ ಸ್ಥಳ ರಾಯಚೂರು ತಾಲೂಕು ರಾಯಚೂರು ಜಿಲ್ಲೆ ರಾಯಚೂರು



ಚಿತ್ರ ೯೯) ಆನೆಗಳ ಪಟ್ಟಿಕೆ ಕ್ರಿ.ಶ. ೧೭ನೇ ಶತಮಾನ ಸ್ಥಳ ರಾಯಚೂರು ತಾಲೂಕು ರಾಯಚೂರು ಜಿಲ್ಲೆ ರಾಯಚೂರು



ಚಿತ್ರ ೨೩) ಗರುಡ ಕ್ರಿ.ಶ. ೧೫-೧೭ನೇ ಶತಮಾನ ಸ್ಥಳ ಆನೆಗೊಂದಿ, ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೨೩) ಕೇಶವ ಕ್ರಿ.ಶ. ೧೬, ೧೭ನೇ ಶತಮಾನಸ್ಥಳ ಕರಡಿಕಲ್ಲು ತಾಲೂಕು ಲಿಂಗಸುಗೂರುಜಿಲ್ಲೆ ರಾಯಚೂರು



ಚಿತ್ರ ೨೫ ಪ್ರಭಾವಳಿಯ ಭಾಗದಿಂದ ಕೂಡಿದ ವಿಷ್ಣು ಕ್ರಿ.ಶ. ೧೩, ೧೪ನೇ ಶತಮಾನ ಸ್ಥಳ ಗಬ್ಬೂರು, ತಾಲ್ಲೂಕು ದೇವದುರ್ಗಜಿಲ್ಲೆ ರಾಯಚೂರು



ಚಿತ್ರ ೨೬) ವೇಣುಗೋಪಾಲ ಕ್ರಿ.ಶ. ೧೪, ೧೬ನೇ ಶತಮಾನ ಸ್ಥಳ ಆನೆಗೊಂದಿ ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೭೭) ದಂಪತಿಗಳು ಕ್ರಿ.ಶ. ೧೪, ೧೬ನೇ ಶತಮಾನ ಸ್ಥಳ ಆನೆಗೊಂದಿ ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೭೮) ದಂಪತಿಗಳು ಕ್ರಿ.ಶ. ೧೪, ೧೬ನೇ ಶತಮಾನ ಸ್ಥಳ ಗಂಗಾವತಿ ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೧೯) ನರ್ತಕಿಯರ ಪಟ್ಟಿಕೆ ಕ್ರಿ.ಶ ೧೫, ೧೬ನೇ ಶತಮಾನ ಸ್ಥಳ ಆನೆಗೊಂದಿ ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೨೦) ನರ್ತಕಿಯರು ಕ್ರಿ.ಶ ೧೫, ೧೬ನೇ ಶತಮಾನ ಸ್ಥಳ ಆನೆಗೊಂದಿ ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೨೧) ನರಸಿಂಹ ನವರಂಗ ದರವಾಜಾ ರಾಯಚೂರು



ಚಿತ್ರ ೩.೨) ಗೋಪಿಕೆಯರ ವಸ್ತ್ರಾಪಹರಣ



ಚಿತ್ರ ೩.೩) ಸ್ತ್ರೀಯರ ಕೋಲಾಟ ಆಡುತ್ತಿರುವ ಪಟ್ಟಿಕೆ ಕ್ರಿ.ಶ. ೧೫, ೧೬ನೇ ಶತಮಾನ ಸ್ಥಳ ಆನೆಗೊಂದಿ, ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ




೩.೪) ರಾಜ ಮತ್ತು ಏಳು ಜನರು

ಕಾಲ ಕ್ರಿ.ಶ. ೧೫, ೧೭ನೇ ಶತಮಾನ ಸ್ಥಳ ಆನೆಗೊಂದಿ, ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೩೫) ನಾಗದಂಪತಿಗಳು




ಚಿತ್ರ ೩೬)ನಾಗದಂಪತಿಗಳು ಕ್ರಿ.ಶ.-೧೨ನೇ ಶತಮಾನ ಸ್ಥಳ ಗಬ್ಬೂರು, ತಾಲೂಕು ದೇವದುರ್ಗ ಜಿಲ್ಲೆ ರಾಯಚೂರು



ಚಿತ್ರ ೩೭) ನಾಗದಂಪತಿಗಳು ಕ್ರಿ.ಶ.-೧೭, ೧೮ನೇ ಶತಮಾನ
ಸ್ಥಳ ಗಬ್ಬೂರು, ತಾಲೂಕು ದೇವದುರ್ಗ ಜಿಲ್ಲೆ ರಾಯಚೂರು



ಚಿತ್ರ ೩೮) ನಾಗ



ಚಿತ್ರ ೩೯) ನಾಗದಂಪತಿಗಳು ಕ್ರಿ.ಶ.-೧೩, ೧೭ನೇ ಶತಮಾನ
ಸ್ಥಳ ಗಬ್ಬೂರು, ತಾಲೂಕು ದೇವದುರ್ಗ ಜಿಲ್ಲೆ ರಾಯಚೂರು



ಚಿತ್ರ ೪೦) ನಾಗದಂಪತಿಗಳು ಕ್ರಿ.ಶ.-೧೭ ೧೮ನೇ ಶತಮಾನ
ಸ್ಥಳ ಗಬ್ಬೂರು, ತಾಲೂಕು ದೇವದುರ್ಗ ಜಿಲ್ಲೆ ರಾಯಚೂರು



ಚಿತ್ರ ೪೧) ಚಾಮುಂಡ ಕ್ರಿ.ಶ. ೧೩ನೇ ಶತಮಾನ ಸ್ಥಳ ರಾಮಲಿಂಗೇಶ್ವರ ದೇವಸ್ಥಾನ ತಾಲೂಕು ರಾಯಚೂರ ಜಿಲ್ಲೆ ರಾಯಚೂರು



ಚಿತ್ರ ೪೨) ದೇವಿ ಕ್ರಿ.ಶ. ೧೪, ೧೬ನೇ ಶತಮಾನ ಸ್ಥಳ ಆನೆಗೊಂದಿ ತಾಲ್ಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೪೩) ಸರಸ್ವತಿ ಕ್ರಿ.ಶ. ೧೩ನೇ ಶತಮಾನ ಸ್ಥಳ ಕರಡಿಕಲ್ಲು, ತಾಲೂಕು ಲಿಂಗಸುಗೂರು ಜಿಲ್ಲೆ ರಾಯಚೂರು



ಚಿತ್ರ ೪೪) ರಾಮಾನುಜಾಚಾರ್ಯ ಕ್ರಿ.ಶ. ೧೪, ೧೬ನೇ ಶತಮಾನ ಸ್ಥಳ ಆನೆಗೊಂದಿ, ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೪೫) ಲಿಂಗಪೀಠ

ಕ್ರಿ.ಶ. ೧೫, ೧೬ನೇ ಶತಮಾನ ಸ್ಥಳ ಆನೆಗೊಂದಿ, ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೪೬)ಷಣ್ಮುಖ ಮತ್ತು ಕನ್ನಡ ಶಾಸನ

ಕ್ರಿ.ಶ. ೧೩ನೇ ಶತಮಾನ ಸ್ಥಳ ರಾಮಲಿಂಗೇಶ್ವರ ದೇವಸ್ಥಾನ ತಾಲೂಕು ರಾಯಚೂರು ಜಿಲ್ಲೆ ರಾಯಚೂರು



ಚಿತ್ರ ೪೭)ಬಾಗಿಲುವಾಡ

ಕ್ರಿ.ಶ. ೧೪, ೧೬ನೇ ಶತಮಾನ ಸ್ಥಳ ಆನೆಗೊಂದಿ ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೪೮) ಆನೆ ಕ್ರಿ.ಶ. ೧೫, ೧೬ನೇ ಶತಮಾನ ಸ್ಥಳ-ರಾಯಚೂರು ತಾಲೂಕು ರಾಯಚೂರು ಜಿಲ್ಲೆ ರಾಯಚೂರು



ಚಿತ್ರ ೪೯) ಹನುಮಂತ ಕ್ರಿ.ಶ. ೧೪, ೧೫ನೇ ಶತಮಾನ ಸ್ಥಳ ಆನೆಗೊಂದಿ ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೫೦) ಕಂಬ



ಚಿತ್ರ ೫೧) ವಿಷ್ಣು



ಚಿತ್ರ ೫೭) ಉಮಾಮಹೇಶ್ವರ ಕ್ರಿ.ಶ. ೧೫, ೧೬ನೇ ಶತಮಾನ ಸ್ಥಳ ನೆಗೊಂದಿ ತಾಲೂಕು ಗಂಗಾವತಿ ಜಿಲ್ಲೆ ರಾಯಚೂರು



ಚಿತ್ರ ೫೩)ನಂದಿ

೧೫ ಮತ್ತು ೧೬ನೇ ಶತಮಾನ ಸ್ಥಳ ಆನೆಗೊಂದಿ ತಾಲೂಕು ಗಂಗಾವತಿ ಜಿಲ್ಲೆ ಕೊಪ್ಪಳ



ಚಿತ್ರ ೨೮೪)ತೀರ್ಥಂಕರ



ಚಿತ್ರ ೨೮೫) ಪಾರ್ಶ್ವನಾಥ



ಅಧ್ಯಾಯ–೫

ಗಬ್ಬೂರಿನ ಇತಿಹಾಸ ಮತ್ತು ಗಬ್ಬೂರಿನ ಶಿಲ್ಪಕಲಾಕೃತಿಗಳು

ಅಧ್ಯಾಯ–೫

ಗಬ್ಬೂರಿನ ಶಿಲ್ಪಕಲಾಕೃತಿಗಳು

ಗಬ್ಬೂರಿನ ಇತಿಹಾಸ ಮತ್ತು ಗಬ್ಬೂರಿನ ಶಿಲ್ಪಕಲಾಕೃತಿಗಳು

ಗಬ್ಬೂರು ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನಲ್ಲಿದೆ. ಇದು ಹಲವಾರು ಹಳೆಯದೇವಾಲಯಗಳು ಮತ್ತು ಶಾಸನಗಳನ್ನು ಹೊಂದಿದೆ. ಗಬ್ಬೂರು ಒಮ್ಮೆ ಶಿಕ್ಷಣದ ಕೇಂದ್ರವಾಗಿತ್ತು. ಇದನ್ನು ಗೋಪುರಗ್ರಾಮ ಎಂದು ಕರೆಯಲಾಗುತ್ತಿತ್ತು. ಮುರಷ ಶಂಕರ, ವೆಂಕಟೇಶ್ವರ, ಈಶ್ವರ, ಭೋಗರ್ ಬಸಪ್ಪ ಮತ್ತು ಹನುಮಾನ್ ದೇವಸ್ಥಾನಗಳು ಪ್ರಮುಖ ದೇವಾಲಯಗಳಾಗಿವೆ.

ಪುರುಷ ಶಂಕರ ದೇವಾಲಯವು ಒರಟಾದ ಬೂದು ಕಲ್ಲಿನಿಂದ ನಿರ್ಮಿಸಲ್ಪಟ್ಟಿದೆ ಮತ್ತು ಹೆಚ್ಚಿನ ಕಂಬವನ್ನು ಹೊಂದಿದೆ. ಉತ್ತರ ಮತ್ತು ಪ್ರವೇಶದ್ವಾರದಲ್ಲಿ ಎರಡು ಶಾಸನಗಳು ಇವೆ ಮತ್ತು ದೇವಾಲಯದ ಮುಂದೆ ದೊಡ್ಡ ಕೆರೆ ಇದೆ. ವೆಂಕಟೇಶ್ವರ ದೇವಾಲಯವು ಮೂರು ದೇವಾಲಯಗಳನ್ನು ಒಳಗೊಂಡಿದೆ. ಅವುಗಳಲ್ಲಿ ಎರಡು ದೇವಾಲಯಗಳು ವಿಷ್ಣು ಮತ್ತು ಶಿವಲಿಂಗವನ್ನು ಒಳಗೊಂಡಿದೆ.

ಹೊರಗಿನ ಗೋಡೆ ವಿವಿಧ ದೇವತೆಗಳನ್ನು ಮತ್ತು ಪ್ರಾಣಿಗಳನ್ನು ಪ್ರತಿನಿಧಿಸುತ್ತದೆ. ಭೋಗರ್ ಬಸಪ್ಪ ದೇವಸ್ಥಾನವು ಗಣೇಶ ಚಿತ್ರ, ಎರಡು ಮತ್ತು ಒಂದು ಶಿಲಾಶಸನ ಫಲಕದೊಂದಿಗೆ ಒಂದು ದೇವಾಲಯವನ್ನು ಹೊಂದಿದೆ.



ಗಬ್ಬೂರಿನ ವೆಂಕಟೇಶ್ವರ ದೇವಾಲಯ

ಗಬ್ಬೂರಿನಲ್ಲಿ ವಿಭಿನ್ನ ಮತ್ತು ಕೊಳೆಯುವ ವಿಭಿನ್ನ ರಾಜ್ಯಗಳಲ್ಲಿ ಒಂದು ಆವರಣ ಗೋಡೆ ಇದೆ. ಚಾಲುಕ್ಯ ವಿಕ್ರಮಾದಿತ್ಯ ಆರನೇಯ ೧೧೧೯ ಎಡಿಡಿಯ ಶಾಸನವು ಈಗ ಹೈದರಾಬಾದ್ ಪುರಾತತ್ವ ವಸ್ತುಸಂಗ್ರಹಾಲಯದಲ್ಲಿ ಇಡಲಾಗಿದೆ. ಮೂಲತಃ ಗಬ್ಬೂರಿನಲ್ಲಿ ಜೈನ ದೇವಾಲಯಗಳು (ದೇಸಾಯಿ ಪಿ.ಬಿ.ಬಿ ೧೯೫೮, ಇನ್ಸಿ ಸಂಖ್ಯೆ ೬) ಸೇರಿದೆ. ಈ ಸ್ಥಳವು

೧೨ನೇ ಶತಮಾನದ A.D ಯಲ್ಲಿ ಒಂದು ಅಗ್ರಹಾರವಾಗಿತ್ತು. ಬ್ರಹ್ಮ ಜಿನಾಳ ಅಥವಾ ನಗರ್ ಜೈನಳಾ ಎಂಬ ಜೈನ ದೇವಸ್ಥಾನವಿದೆ.

ಚಿಂಚೊಳ್ಳಿ ಬಸವಣ್ಣ ದೇವಸ್ಥಾನ, ಎಲ್ಬವಿ ಬಸವಣ್ಣ, ಹರಿಹರ ದೇವಸ್ಥಾನ, ೧೨ನೇ ಶತಮಾನದ A.D ವಸ್ತುಸಂಗ್ರಹಾಲಯವಿದೆ.



ಶಿಲ್ಪ ವಿನ್ಯಾಸ

ಗಬ್ಬೂರಿನ ದೇವಾಲಯಗಳ ವಿವರಣೆ

೧. ಮೇಲ್‌ಶಂಕರ ದೇವಾಲಯ

ಊರು	: ಗಬ್ಬೂರು	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಮೇಲ್‌ಶಂಕರ	ಅಭಿಮುಖ	: ಉತ್ತರ
ಸ್ಥಳ	: ಊರಿನಲ್ಲಿ	ಸ್ಥಿತಿ	: ಮಧ್ಯಮ
ಕಾಲ	: ಕ್ರಿ.ಶ. ೧೦-೧೨ನೇ ಶತಮಾನ	ಸಂರಕ್ಷಣೆ	: ರಾ.ಪು.ಇ.

ಕಣಶಿಲೆಯಲ್ಲಿ ನಿರ್ಮಿಸಿರುವ ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳಿವೆ. ಸಾಮಾನ್ಯವಾಗಿ ಕ್ರಿ.ಶ. ೧೧ ರಿಂದ ೧೩ನೇ ಶತಮಾನದವರೆಗೆ ಕಂಡುಬರುವ ದೇವಾಲಯಗಳಿಗಿಂತ ಈ ದೇವಾಲಯವು ಬೃಹತ್ತಾಗಿದೆ.

ಚೌಕಾಕಾರವಾಗಿರುವ ಗರ್ಭಗೃಹದಲ್ಲಿ ದೊಡ್ಡ ಲಿಂಗವಿದೆ. ಇತ್ತೀಚೆಗೆ ನಿರ್ಮಿಸಿದ ಕಟ್ಟೆಯು ಲಿಂಗದ ಪೀಠ ಭಾಗವನ್ನು ಮುಚ್ಚಿದೆ. ಗರ್ಭಗೃಹದ ಸೂರಿನ ಭಾಗದಲ್ಲಿ ಹೂವಿನ ಅಲಂಕರಣೆಗಳನ್ನು ಒಳಗೊಂಡ ಭುವನೇಶ್ವರಿಯಿದೆ. ಗರ್ಭಗೃಹದ ಬಾಗಿಲವಾಡವು ದೊಡ್ಡದಾಗಿದ್ದು, ಅದರಲ್ಲಿ ಪಂಚಶಾಖೆಗಳಿವೆ. ಲತಾಸುರುಳಿ, ಸ್ತಂಭ ಶಾಖೆ, ಅಲಂಕೃತ ಹೂವಿನದಳ ಮತ್ತು ಸಿಂಗ ಶಾಖೆಗಳು ಪ್ರಧಾನವಾಗಿವೆ.

ಶಾಖೆಯ ಕೆಳಭಾಗದಲ್ಲಿ ಶೈವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮೇಲ್ಭಾಗದ ತೊಲೆಯಲ್ಲಿ ರೇಖಾನಾಗರ ಶೈಲಿಯ ಐದು ಶಿಖರಗಳಿವೆ. ಗರ್ಭಗೃಹದ ಮುಂದಿರುವ ಅಂತರಾಳ ಭಾಗದಲ್ಲಿನ ಎರಡು ತೆಳು ಕಂಬಗಳಲ್ಲಿ ಅಲಂಕಾರಿಕ ಕೆತ್ತನೆಗಳಿವೆ. ಅಂತರಾಳದ ಸೂರಿನ ಭಾಗದಲ್ಲಿರುವ ಅಲಂಕರಣೆಗಳು ನವರಂಗದ ಸೂರಿನಲ್ಲಿನ ಅಲಂಕರಣೆಗಳನ್ನು ಹೋಲುತ್ತವೆ.

ಅಂತರಾಳದ ಮುಂದಿರುವ ನವರಂಗದ ಮಧ್ಯೆ ನಾಲ್ಕು ಕಂಬಗಳಿವೆ. ಇವು ಸೂರನ್ನು ಆಧರಿಸಿವೆ. ಕೆಳಭಾಗದಲ್ಲಿ ವೇದಿಕೆಯಿದೆ. ಎಂಟು ಕಂಬಗಳನ್ನು ಮಧ್ಯದ ನಾಲ್ಕು ಕಂಬಗಳಿಗೆ ಅನುಗುಣವಾಗಿ ಕಕ್ಷಾಸನದಲ್ಲಿರಿಸಲಾಗಿದೆ. ಮಧ್ಯೆಯಿರುವ ಕಂಬಗಳು ಘನಾಕೃತಿಯ ರಚನೆಗಳು. ಈ ಕಂಬಗಳಲ್ಲಿ ಗಣಪತಿ ಮತ್ತು ಇತರ ದೇವತೆಗಳ ಅಲಂಕಾರಿಕ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಕಕ್ಷಾಸನವು ನವರಂಗದ ಮೂರೂ ಭಾಗಗಳಲ್ಲಿವೆ.

ಇದು ಸಾಕಷ್ಟು ದೊಡ್ಡದಾಗಿದ್ದು ವಿಸ್ತೃತವಾಗಿದೆ. ಕಕ್ಷಾಸನದ ಹಿಂಬದಿಯಲ್ಲಿ ಬೆನ್ನ ಆಸರೆ ಕಲ್ಲುಗಳು ಇಲ್ಲ. ನವರಂಗದ ಅಂಕಣಗಳ ಸೂರಿನಲ್ಲಿ ಅಷ್ಟಕೋನಕಾರದಲ್ಲಿ ತೊಲೆಗಳನ್ನು ಇಟ್ಟು ರಚಿಸಿ ನಡುವೆ ಕಮಲದ ಮೊಗ್ಗಿನ ಅಲಂಕರಣೆಯನ್ನು ಮಾಡಲಾಗಿದೆ. ನವರಂಗಕ್ಕೆ ಮೂರು ಕಡೆ ಪ್ರವೇಶಗಳಿವೆ. ಪಶ್ಚಿಮದ ಭಾಗದಲ್ಲಿ ಕಕ್ಷಾಸನದ ಮೇಲೆ ಇಳಿಜಾರು ಮುಂಚಾಚು ಇದೆ. ನವರಂಗದ ಪ್ರಸ್ತರ ಭಾಗದಲ್ಲಿ ದೊಡ್ಡ ಕಲ್ಲುಗಳ ಇಳಿಜಾರು ಮುಂಚಾಚು ರಚನೆಯಿದೆ.

ಗರ್ಭಗೃಹದ ಅಧಿಷ್ಠಾನದಲ್ಲಿ ಜಗತಿ, ಪೇದ್ಯ, ಕುಮುದ ಮತ್ತು ಕಪೋತಗಳನ್ನು ಕಾಣಬಹುದು. ಅಧಿಷ್ಠಾನದ ಮೇಲ್ಭಾಗದಲ್ಲಿ ಹೊಸ ಕೈಪಿಡಿ ಗೋಡೆಯನ್ನು ನಿರ್ಮಿಸಲಾಗಿದೆ. ದೇವಾಲಯಕ್ಕೆ ಆಧುನಿಕವಾಗಿ ನಿರ್ಮಿಸಿರುವ ಶಿಖರವಿದೆ. ದೇವಾಲಯವನ್ನು ಕೆಲವು ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದು. ದೇವಾಲಯದ ಗಾತ್ರಕ್ಕೆ ಅನುಗುಣವಾಗಿ ಆಲಯವನ್ನು ಎತ್ತರದ ದಿಬ್ಬದ ಮೇಲೆ ನಿರ್ಮಿಸಲಾಗಿದೆ. ದೇವಾಲಯದ ಮುಂಭಾಗದಲ್ಲಿ ಅನೇಕ ವೀರಗಲ್ಲುಗಳನ್ನು ಸಾಲಾಗಿ ಜೋಡಿಸಲಾಗಿದೆ.

ದೇವಾಲಯದ ಮುಂಭಾಗದಲ್ಲಿ ನಿಲ್ಲಿಸಿರುವ ಶಾಸನದಲ್ಲಿನ ಕಾಲದ ಉಲ್ಲೇಖವು ವಿಕ್ರಮ ವರ್ಷ ೮, ಸುಭಾನು ಸಂವತ್ಸರ, ಪಾಲ್ಗುಣ, ಬ.೫, ಶುಕ್ರವಾರವೆಂದಿದ್ದು, ಇದು ಕ್ರಿ.ಶ. ೧೭-೨-೧೦೮೫ರ ಸೋಮವಾರಕ್ಕೆ ಸಮವಾಗುತ್ತದೆ. ಆದರೆ ಈ ವರ್ಷ ಸುಭಾನು ಸಂವತ್ಸರ ಬಂದಿರುವುದಿಲ್ಲ. ಸುಭಾನು ಸಂವತ್ಸರವು ಕ್ರಿ.ಶ. ೧೧೦೩ರಲ್ಲಿ ಬಂದಿರುತ್ತದೆ. ಆದರೆ ಈ ಕಾಲಕ್ಕೂ ಶಾಸನದ ಕಾಲಕ್ಕೂ ಹೊಂದಾಣಿಕೆಯಾಗುತ್ತಿಲ್ಲ.

ಶಾಸನದ ಆರಂಭದಲ್ಲಿ ಹಿರಿಯ ಅಗ್ರಹಾರವಾದ ಗಬ್ಬೂರಿನ ಮಹಾಜನಗಳ ವರ್ಣನೆಯಿದೆ. ಅವರನ್ನು ಗೊಬ್ಬೂರ ವಿಪ್ರಚೂಡಾಮಣಿಗಳೆಂದಿದೆ. ನಂತರ ಗೊಬ್ಬೂರ (ನೋಡಿ ಚಿತ್ರಗಾರ, ಹೆಚ್.ಎನ್. ರಾಯಚೂರು ಜಿಲ್ಲೆಯ ಪ್ರಾಚೀನ ದೇವಾಲಯಗಳು, ಪು. ೩೧-೩೪) ವರ್ಣನೆಯಿದೆ. ಅದು ಈ ರೀತಯಾಗಿದೆ. ಇದು ವಿದ್ಯಾಕ್ಷೇತ್ರ, ವಿಬುಧ ಜನರ ಕ್ಷೇತ್ರ, ವಿದ್ವಜ್ಜನಗಳು ನೆಲಸಿ ಗ್ರಾಮರಾಜನಂತಿದೆ. ಈ ಗ್ರಾಮವು ಅಯ್ಯಣವಾಡಿ ನಾಡಿನಲ್ಲಿ ಪ್ರಸಿದ್ಧವಾದ ಗೋಪುರ ಗ್ರಾಮವೆಂದು ಪ್ರಸಿದ್ಧಿ ಪಡೆದಿತ್ತು. ಈ ಊರಿನಲ್ಲಿ ಮೇಳೇಶ್ವರ ದೇವರು ನೆಲಸಿ ಗ್ರಾಮದ ಜನಗಳನ್ನು ತನ್ನ ಅನುಗ್ರಹಕ್ಕೆ ಪಾತ್ರರನ್ನಾಗಿಸಿ ಕೊಂಡಿದ್ದ.

ಈ ದೇವರ ಒಕ್ಕಲುಗಳನ್ನು 'ಮೇಳ್ಪಾಸಿರ್ಬ್ಬರು' ಎಂದು ಕರೆಯುತ್ತಿದ್ದರು. ಇವರನ್ನು ಶಾಸನದಲ್ಲಿ ಸಕಳ ಜೀವರಕ್ಷಕ ಪರೋಪಕಾರಾರ್ಥ ಶರೀರರು, ಮೇಳೇಶ್ವರ ದೇವರ ಪಾದಪಂಕಜ ಭ್ರಮರರು, ಚಕ್ರವರ್ತಿಯ ರಾಜ್ಯವನ್ನು ಉದ್ಧರಿಸುವವರು, ಶ್ರೀಮಂತರು, ವಿನಯರು, ಸತ್ಯವಂತರು, ನುಡಿದಂತೆ ನಡೆದವರು, ದಾನಿಗಳು, ಧರ್ಮಕಾರ್ಯ ಧುರಂಧರರು ಮುಂತಾಗಿ ವರ್ಣಿಸಿದೆ.

ಇವರು ಹಿರಿಯ ಗೊಬ್ಬೂರಲ್ಲಿ ಮೇಳೇಶ್ವರ ದೇವಾಲಯವನ್ನು ಪರಿಪಾಲನೆ ಮುಂತಾದ ಕೆಲಸಗಳಿಗಾಗಿ ಗೊಬ್ಬೂರು ಮತ್ತು ಅದಕ್ಕೆ ಸೇರಿದ ಇತರ ಹಳ್ಳಿಗಳ ಜನರು (ಸೇರಿ) ನೊಗಕಟ್ಟಿ ಉತ್ತು ಬಿತ್ತಿ ಬೆಳೆದ ಬೆಳೆಯಲ್ಲಿ ಸೂಡು ಜೋಳವನ್ನು ಹಾಗೂ ವರಿಷಪ್ರತಿ ಬಳಸುವ ಒಂದೊಂದು ಕುಂಟೆಗೆ ಒಂದು ಹಣದ ಲೆಕ್ಕದಲ್ಲಿ ನೀಡಬೇಕೆಂದು ತೀರ್ಮಾನಿಸುತ್ತಾರೆ. ಮೇಳೇಶ್ವರದೇವರ ಸ್ಥಾನಪತಿ ಸದ್ಯೋಜಾತ ಪಂಡಿತರಾಗಿದ್ದರೆಂದು ತಿಳಿಯುತ್ತದೆ (ಕವಿಶಾ, ಸಂ.೭, ಸಂ.ದೇ ೨).

ಮೇಲಿರುವ ಶಾಸನದ ಪಕ್ಕದಲ್ಲಿ ಇನ್ನೊಂದು ತ್ರುಟಿತ ಶಾಸನವಿದೆ. ಇದರ ಕಾಲವು ವಿಕ್ರಮ ವರ್ಷ, ೧೨ ಸದ್ವಜಿತು ಸಂವತ್ಸರ, ಆಶ್ವೀಜ ಮಾಸ, ಶು. ೨ ವಡ್ಡವಾರದೆಂದಿದ್ದು ಇದು ಕ್ರಿ.ಶ. ೧೯-೯-೧೦೮೮ರ ಮಂಗಳವಾರಕ್ಕೆ ಸಮವಾಗುತ್ತದೆ. ಆದರೆ ಈ ವರ್ಷದ ಸಂವತ್ಸರವು

ವಿಭವವಾಗಿರುತ್ತದೆ. ಸರ್ವಜಿತ್ ಸಂವತ್ಸರವು ಇವನ (?) ಆಳ್ವಿಕೆಯ ೩೧ನೆಯ ವರ್ಷ ಅಂದರೆ ಕ್ರಿ.ಶ. ೧೧೦೭ರಲ್ಲಿ ಬಂದಿರುತ್ತದೆ. ಹೀಗಾಗಿ ಈ ಶಾಸನದ ಕಾಲವು ತಾಳಿಯಾಗುತ್ತಿಲ್ಲ.

ಹಿರಿಯ ಗಬ್ಬೂರಿನ ಮುಂಮುರಿದಂಡ, ಸಾಸಿರ್ವ್ವರು, ಅಯ್ಯಾವೊಳೆ ಆಯಿನೂರ್ವ್ವರು ಮುಂತಾದ ವ್ಯಾಪಾರಿಗಳು ಮಹಾಲಿಂಗ ಮೇಳೇಶ್ವರದೇವರಿಗೆ ಭತ್ತವನ್ನು ದಾನ ಮಾಡಿರುವ ವಿಷಯದ ವಿಸ್ತಾರವಾದ ವರ್ಣನೆಯಿದೆ.

ಅದೇ ಶಾಸನದ ಎಡಗಡೆಯಲ್ಲಿ ಅಪೂರ್ಣ ಶಾಸನವಿದ್ದು, ಇದರಲ್ಲಿ ೭ನೆಯ ವಿಜ(ಯ) ಸಂವತ್ಸರ ಎಂದಿದೆ. ಈ ಶಾಸನವು ಕಳಚುರ್ಯ ಭುಜಬಳ ಚಕ್ರವರ್ತಿ ರಾಯಮುರಾರಿ ಸೋವಿದೇವನ ಕಾಲಕ್ಕೆ ಸೇರಿದೆ(ಕವಿಶಾ, ಸಂ.೭, ಸಂ.ದೇ ೩).

ದೇವಾಲಯದ ಎಡಬದಿಗೆ ಒರಗಿಸಿರುವ ತ್ರುಟಿತ ಶಾಸನದಲ್ಲಿ ಎರಡು ಕಾಲಗಳ ಉಲ್ಲೇಖವಿದ್ದು, ಒಂದನೆಯದರಲ್ಲಿ ತ್ರೈಲೋಕ್ಯದೇವನ ಆಳ್ವಿಕೆಯ ಶ್ರೀಮುಖ, ವೈಶಾಖ, ಸು. ೭, ಸುಕ್ರವಾರದ ಉಲ್ಲೇಖವಿದ್ದು, ಅದು ಕ್ರಿ.ಶ. ೩-೪-೧೧೫೩ರ ಶುಕ್ರವಾರಕ್ಕೆ ಸರಿಯಾಗುತ್ತದೆ.

ಎರಡನೆಯದರಲ್ಲಿ ತೈಲೋಕ್ಯಮಲ್ಲ ವರ್ಷ, ೫ನೆಯ ಭಾವ ಸಂವತ್ಸರ, ಫಾಲ್ಗುಣ, ಬ.೧. ವಡ್ಡವಾರ ಎಂದಿದ್ದು, ಇದು ಕ್ರಿ.ಶ. ೧೧೫೪ಕ್ಕೆ ಸರಿ ಹೊಂದುತ್ತದೆ.

ಶಾಸನದ ಆರಂಭದಲ್ಲಿ ಚಾಳುಕ್ಯರ ಪಾರಂಪರಿಕ ವಂಶಾವಳಿಯನ್ನು ನೀಡಲಾಗಿದೆ. ವಿಷ್ಣುವರ್ಧನ ವಿಜಯಾದಿತ್ಯ ಮುಂತಾದವರು ಆಳಿದ ಮೇಲೆ ಮುಂದೆ ತೈಲಪನಾಳಿದ. ಇವನ ಮಗ ಸತ್ಯಾಶ್ರಯ. ಇವನ ನಂತರ ವಿಕ್ರಮ ಇವನ ತಮ್ಮ ವಾಸವ, ಅಯ್ಯಣ ಮುಂದೆ ತ್ರೈಲೋಕ್ಯಮಲ್ಲನವರೆಗೆ ವಂಶಾವಳಿಯನ್ನು ನೀಡಲಾಗಿದೆ.

ಅಯ್ಯಣವಾಡಿಯಲ್ಲಿನ ಪಿರಿಯ ಗೊಬ್ಬೂರು, ಅದರಲ್ಲಿನ ೨೦೦ ಮಹಾಜನರ ಬಗ್ಗೆ ವಿವರಗಳಿವೆ. ಗಬ್ಬೂರಿನಲ್ಲಿ ತ್ರಿಪುರಾಂತಕ ದೇವರ ಪ್ರತಿಷ್ಠೆ ಮಾಡಿ ಅದರ ಪೂಜೆ ಪುನಸ್ಕಾರಕ್ಕೆಂದು ಕೆಲವು ಸೆಟ್ಟರು ದಾನ ನೀಡಿರುತ್ತಾರೆ. ಫ್ರಪುರಾಂತಕ ದೇವರ ಮುಂದೆ ಇದ್ದ

ಕೇಶವ ದೇವರಿಗೆ ಅದರ ಜೊತೆಯಲ್ಲಿಯೇ ದಾನ ನೀಡಿದ್ದು, ಮಾಲೆಗಾರರು ಎರಡೂ ದೇವರ ಹೂದೋಟಕ್ಕೆ ದಾನ ನೀಡಿರುತ್ತಾರೆ.

ಭಾವ ಸಂವತ್ಸರದಲ್ಲಿ ಅಗ್ರಹಾರ ಕಲ್ಲೂರಿನ ಉತ್ತರಕ್ಕಿದ್ದ ಗವರೇಶ್ವರ ದೇವರ ಬಳಿ ಸಭೆ ಸೇರಿದ ವ್ಯಾಪಾರಿ ಸಂಘಗಳು ಗೊಬ್ಬರಿನ ತ್ರಿಪುರಾಂತಕ ದೇವರ ಉತ್ತರಕ್ಕಿದ್ದ ಪ್ರಸನ್ನ ಕೇಶವದೇವರ ಪೂಜೆ ಇತ್ಯಾದಿಗಳಿಗೆ ಭಾಗ ಕೊಡಬೇಕೆಂದು ನಿರ್ಣಯಿಸಿದ ವಿಷಯವನ್ನು ಶಾಸನ ತಿಳಿಸುತ್ತದೆ (ಕವಿಶಾ, ಸಂ.೭, ಸಂ. ದೇ ೪).

೨. ಭೋಗೇಶ್ವರ ದೇವಾಲಯ

ಊರು	: ಗಬ್ಬೂರು	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಭೋಗೇಶ್ವರ	ಅಭಿಮುಖ	: ಉತ್ತರ
ಸ್ಥಳ	: ಊರಲ್ಲಿ	ಸ್ಥಿತಿ	: ಕನಿಷ್ಠ
ಕಾಲ	: ಕ್ರಿ.ಶ. ೧೧–೧೨ನೇ ಶತಮಾನ	ಸಂರಕ್ಷಣೆ	: –

ಕಣಶಿಲೆಯಲ್ಲಿ ನಿರ್ಮಿಸಿರುವ ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಚೌಕಾಕಾರ ಗರ್ಭಗೃಹದಲ್ಲಿ ಲಿಂಗವಿದೆ. ಗರ್ಭಗೃಹದ ಬಾಗಿಲವಾಡವು ಸರಳ ಅಲಂಕರಣೆಗಳಿಂದ ಕೂಡಿದೆ. ಬಾಗಿಲ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅದರ ಮೇಲ್ಭಾಗದಲ್ಲಿ ಕಿರು ಶಿಖರಾಕೃತಿಯ ಐದು ರಚನೆಗಳಿವೆ. ಬಾಗಿಲ ಶಾಖೆಯ ಕೆಳಭಾಗದಲ್ಲಿ ಪೂರ್ಣಕುಂಭಗಳ ಉಬ್ಬುಶಿಲ್ಪವಿದೆ. ಗರ್ಭಗೃಹದ ಮುಂದಿರುವ ಅಂತರಾಳವು ತೆರೆದಿದ್ದು, ಅದರಲ್ಲಿ ಎರಡು ತೆಳು ಕಂಬಗಳಿವೆ. ಈ ಕಂಬಗಳಿಂದಾಗಿ ನವರಂಗ ಮತ್ತು ಅಂತರಾಳ ಬೇರ್ಪಟ್ಟಂತೆ ಕಾಣುತ್ತದೆ.

ನವರಂಗದ ಮಧ್ಯೆ ನಾಲ್ಕು ಚೌಕಾಕಾರವಾಗಿರುವ ಘನ ಆಕಾರದ ಕಂಬಗಳು ಸೂರನ್ನು ಆಧರಿಸಿವೆ. ನವರಂಗದ ವಿತಾನದಲ್ಲಿ ಸರಳ ಭುವನೇಶ್ವರಿಯನ್ನು ಕಾಣಬಹುದು. ನವರಂಗದ

ಮುಂಭಾಗದಲ್ಲಿ ಮುಖಮಂಟಪವಿದೆ. ಪ್ರಸ್ತರ ಭಾಗದಲ್ಲಿ ಕಲ್ಲಿನ ಮುಂಚಾಚು ಇದೆ. ಮುಖಮಂಟಪದ ಉತ್ತರ ಭಾಗದಲ್ಲಿ ಕಕ್ಷಾಸನವಿದೆ. ಇಡೇ ದೇವಾಲಯವನ್ನು ಎತ್ತರದ ಕಟ್ಟೆಯ ಮೇಲೆ ನಿರ್ಮಿಸಿರುವುದರಿಂದ, ದೇವಾಲಯ ತಲುಪಲು ಮೆಟ್ಟಿಲುಗಳನ್ನು ಒದಗಿಸಲಾಗಿದೆ. ಪ್ರಸ್ತುತ ನೆಲಮಟ್ಟದಿಂದ ಕೆಲವು ಮೆಟ್ಟಿಲುಗಳನ್ನು ಹತ್ತಿ ದೇವಾಲಯವನ್ನು ತಲುಪಬಹುದು.

ದೇವಾಲಯಕ್ಕೆ ಸ್ವತಂತ್ರ ಪ್ರವೇಶದ್ವಾರವಿದ್ದು, ಅದು ದೇವಾಲಯದ ಯಾವುದೇ ವಾಸ್ತು ಭಾಗಗಳೊಂದಿಗೆ ಸೇರಿಸಿರುವುದಿಲ್ಲ. ದೇವಾಲಯದ ಅಕ್ಕಪಕ್ಕಗಳಲ್ಲಿ ಮನೆಗಳು ನಿರ್ಮಿಸಿರುವುದರಿಂದ ದೇವಾಲಯದ ಕೆಲವು ಭಾಗಗಳಿಗೆ ಧಕ್ಕೆಯುಂಟಾಗಿದೆ. ದೇವಾಲಯದಲ್ಲಿ ೫೧ ಸಾಲುಗಳಿರುವ ಶಾಸನವಿದೆ. ಅದು ಕೇಶವ ದೇವಾಲಯದ ಬಗೆಗೆ ತಿಳಿಸುತ್ತದೆ. ದೇವಾಲಯದ ಅಧಿಷ್ಠಾನ ಕಂಡುಬರುವುದಿಲ್ಲ. ಪ್ರಸ್ತುತ ಗುಡಿಗೆ ಶಿಖರವಿಲ್ಲ (ನೋಡಿ ಚಿತ್ರಗಾರ, ಹೆಚ್.ಎನ್, ರಾಯಚೂರು ಜಿಲ್ಲೆಯ ಪ್ರಾಚೀನ ದೇವಾಲಯಗಳು, ಪು. ೧೩-೧೫).

೩. ಕೇಶವ ದೇವಾಲಯ

ಊರು	: ಗಬ್ಬೂರು	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಕೇಶವ	ಅಭಿಮುಖ	: ಪಶ್ಚಿಮ
ಸ್ಥಳ	: ಅಗಸಿ ಬಳಿ	ಸ್ಥಿತಿ	: ಕನಿಷ್ಠ
ಕಾಲ	: ಕ್ರಿ.ಶ. ೧೨ನೇ ಶತಮಾನ	ಸಂರಕ್ಷಣೆ	: –

ಕಣಶಿಲೆಯಲ್ಲಿ ನಿರ್ಮಿಸಿರುವ ಈ ದೇವಾಲಯದವು ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ಅಧಿಷ್ಠಾನವು ಎತ್ತರವಾಗಿದ್ದು, ಅದರ ಮೇಲೆ ಈ ದೇವಾಲಯವನ್ನು ನಿರ್ಮಿಸಲಾಗಿದೆ. ನವರಂಗದ ಭಾಗದಿಂದಲೇ ದೇವಾಲಯಕ್ಕೆ ಪ್ರವೇಶವನ್ನು ಪಡೆಯಬೇಕು. ಅಧಿಷ್ಠಾನವನ್ನು ಎತ್ತರವಾಗಿ ನಿರ್ಮಿಸಿರುವುದರಿಂದ ನವರಂಗದ ಮುಂಬದಿಯಲ್ಲಿ ಮೆಟ್ಟಿಲುಗಳನ್ನು ಇಡಲಾಗಿದೆ. ತೆರೆದ ನವರಂಗದ ಪಶ್ಚಿಮ ಮತ್ತು ಉತ್ತರ

ಭಾಗಗಳಲ್ಲಿಯೂ ಪ್ರವೇಶದ್ವಾರಗಳನ್ನು ಇರಿಸಲಾಗಿದೆ. ನವರಂಗದಲ್ಲಿ ಕಕ್ಷಾಸನವಿದೆ. ಈ ದೇವಾಲಯದ ಎಡ ಬದಿಯಲ್ಲಿ ಆನೆಯ ನೀಲಕಂಠೇಶ್ವರ ದೇವಾಲಯವಿದೆ. ನವರಂಗದ ಮುಂಭಾಗವು ತೆರೆದಿದ್ದು, ಅದನ್ನು ನಂತರ ಕಾಲದಲ್ಲಿ ಸೈಜುಗಲ್ಲುಗಳಿಂದ ಮುಚ್ಚುವ ಪ್ರಯತ್ನ ಮಾಡಲಾಗಿದೆ. ಕಂಬಗಳ ನಡುವಿನ ಭಾಗಕ್ಕೆ, ಅಂದರೆ ಭಿತ್ತಿಯ ಭಾಗಕ್ಕೆ ಸೈಜುಗಲ್ಲುಗಳನ್ನು ಬಳಸಿ ಭಿತ್ತಿ ರಚಿಸಲಾಗಿದೆ.

ನವರಂಗದ ಪ್ರಸ್ತರ ಭಾಗದ ಮೇಲೆಯೂ ಸಹ ಸೈಜುಗಲ್ಲುಗಳಿಂದ ಭಿತ್ತಿಯಂತೆ ಗೋಡೆಯನ್ನು ನಿರ್ಮಿಸಲಾಗಿದೆ. ಈ ದೇವಾಲಯವು ಅಗಸಿಯ ಪಕ್ಕದಲ್ಲಿರುವುದರಿಂದ ಈ ರೀತಿಯ ನಿರ್ಮಾಣವು ಆಗಿದೆ ಎಂದು ಊಹಿಸಬಹುದು. ಆದರೆ ಈ ನಿರ್ಮಿತಿಯು ದೇವಾಲಯ ನಿರ್ಮಾಣದ ಕೆಲ ಶತಮಾನಗಳ ನಂತರ ರಚಿತವಾಗಿದೆಯೆಂದು ಸಧ್ಯಕ್ಕೆ ಅಭಿಪ್ರಾಯಪಡಬಹುದು.

ಚೌಕಾಕಾರ ಗರ್ಭಗೃಹದಲ್ಲಿ ಸುಮಾರು ಎರಡು ಅಡಿ ಎತ್ತರದ ಪೀಠದ ಮೇಲೆ ಕೇಶವನ ಉಬ್ಬುಶಿಲ್ಪವಿದೆ. ಸಮಭಂಗಿಯಲ್ಲಿರುವ ಕೇಶವನು ತನ್ನ ಮೇಲಿನ ಕೈಗಳಲ್ಲಿ ಶಂಖ, ಚಕ್ರ, ಹಿಡಿದಿದ್ದಾನೆ. ಮೂರನೆಯ ಕೈಯಲ್ಲಿ ಗದೆಯನ್ನು ಹಿಡಿದಿದ್ದರೆ, ನಾಲ್ಕನೆಯ ಕೈ ಕಟಿಯಲ್ಲಿದೆ. ಗರ್ಭಗೃಹದ ಬಾಗಿಲವಾಡವು ಸರಳವಾಗಿದ್ದು ಅದರ ಕೆಳಭಾಗದಲ್ಲಿ ಕುಂಭಗಳ ಕೆತ್ತನೆಯಿದೆ.

ನವರಂಗದಲ್ಲಿರುವ ಕಂಬಗಳು ಚೌಕಾಕಾರವಾಗಿದ್ದು ಮಧ್ಯದಲ್ಲಿರುವ ನಾಲ್ಕು ಕಂಬಗಳು ಸೂರನ್ನು ಆಧರಿಸಿವೆ. ನವರಂಗದ ಸೂರಿನ ಭಾಗದಲ್ಲಿ ಭುವನೇಶ್ವರಿಯನ್ನು ಕಾಣಬಹುದು. ದೇವಾಲಯಕ್ಕೆ ಶಿಖರ ಭಾಗವಿಲ್ಲ. ದೇವಾಲಯದ ಬಲಬದಿಯ ಭಾಗವು ಶಿಥಿಲವಾಗಿದೆ. ಅದರ ಭಿತ್ತಿಯ ಭಾಗದ ಹೊರ ಕಲ್ಲುಗಳು ಈಗ ಕಂಡುಬರುವುದಿಲ್ಲ.

ಆದ್ದರಿಂದ ಈ ಭಾಗವು ತೆರೆದುಕೊಂಡಿದ್ದು ಗಿಡ ಗಂಟಿಗಳು ಬೆಳೆದಿವೆ. ಗುಡಿಯ ಮುಂಭಾಗದ ಭಿತ್ತಿಯು ಇಲ್ಲದ ಕಾರಣ ಈ ಭಾಗವು ಪ್ರಕೃತಿಗೆ ತೆರೆದುಕೊಂಡಿದ್ದು,

ಕಸಕಡ್ಡಿಗಳಿಂದ ತುಂಬಿಕೊಂಡಿವೆ. ಮಳೆಯ ನೀರು ದೇವಾಲಯದ ಒಳಗೆ ಬಂದಿರುವ ಕುರುಹುಗಳಿವೆ (ನೋಡಿ ಚಿತ್ರಗಾರ, ಹೆಚ್.ಎನ್, ಪೂರ್ವೋಕ್ತ, ಪು. ೯-೧೨).

ಬಂಗಾರು ಬಸವಣ್ಣ ದೇವಾಲಯದ ಸಮೀಪದ ಕಲ್ಲಿನಲ್ಲಿರುವ ತ್ರುಟಿತ ಶಾಸನದಲ್ಲಿನ ಕಾಲವು ಕ್ರೋಧನ, ಶ್ರಾವಣ, ಸು. ೫ ಶುಕ್ರವಾರದ ಉಲ್ಲೇಖವಿದೆ. ವರ್ಷದ ಉಲ್ಲೇಖವಿಲ್ಲ. ಈ ಕಾಲವು ಕ್ರಿ.ಶ. ೧೭-೭-೧೧೨೪ರ ಗುರುವಾರಕ್ಕೆ ಸರಿ ಹೊಂದುತ್ತದೆ.

ಗೊಬ್ಬೂರಪಟ್ಟಣ ಕೇಶವದೇವರಿಗೆ ಬೇತಾಳಿಯ ಸೋಮೇಶ್ವರಭಟ್ಟನ ಮಗ ಮಲ್ಲಿದೇವ ಭಟ್ಟನು ದಾನ ನೀಡಿದ ಉಲ್ಲೇಖವಿದೆ (ಕವಿಶಾ, ಸಂ.೭, ಸಂ.ದೇ ೧೨).

ಭೋಗೇಶ್ವರ ದೇವಾಲಯದ ಬಲಭಾಗಕ್ಕೆ ಗೋಡೆಗೆ ಸೇರಿಸಿರುವ ಶಾಸನದಲ್ಲಿನ ಕಾಲವು ಚಾಳುಕ್ಯ ವಿಕ್ರಮ ವರ್ಷ ೫೧, ಪರಾಭವ, ಜೇಷ್ಠ, ಅಮವಾಸ್ಯೆ, ಆದಿವಾರ, ಸೂರ್ಯ ಗ್ರಹಣದ ಉಲ್ಲೇಖವಿದ್ದು, ಇದು ಕ್ರಿ.ಶ. ೨೨-೬-೧೧೨೬ರ ನಿಜ ಜೇಷ್ಠ ಮಂಗಳವಾರಕ್ಕೆ ಸರಿಹೊಂದುತ್ತದೆ. ಆದಿವಾರವಲ್ಲ. ಅಂದು ಸೂರ್ಯಗ್ರಹಣವಿತ್ತು. ಶಾಸನವು ಕನ್ನಡ ಲಿಪಿ, ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿದೆ. ಆರಂಭದಲ್ಲಿನ ಶ್ಲೋಕಗಳಲ್ಲಿ ಕೇಶವ, ಶಾರ್ಙ್ಗ ಗೋಪುರ ಗ್ರಾಮದಲ್ಲಿನ ಹರಿಹರ, ವಿನಾಯಕ, ವಿಷ್ಣು ದೇವತೆಗಳನ್ನು ಪ್ರಾರ್ಥಿಸಲಾಗಿದೆ.

ಹರದೇವನ ಮಗನಾದ ಮಾಧವ ಸೋಮಯಾಜಿಯನ್ನು ಶಾಸನದಲ್ಲಿ ಗುಣಗಾನ ಮಾಡಲಾಗಿದೆ. ಇವನು ಗೋಪುರ ನಗರದಲ್ಲಿ ಕೇಶವ ದೇವಾಲಯವನ್ನು ನಿರ್ಮಿಸಿದ. ಚಾಳುಕ್ಯ ತ್ರಿಭುವನಮಲ್ಲದೇವನು ಜಯಂತಿಪುರದ ನೆಲೆವೀಡಿನಲ್ಲಿದ್ದಾಗ ಸೂರ್ಯಗ್ರಹಣ ನಿಮಿತ್ತವಾಗಿ, ವಾಜಪೇಯಯಾಜಿಯಾದ ಆದಿತ್ಯಭಟ್ಟ ಸೋಮಯಾಜಿಯು ತಾನು ಮಾಡಿಸಿದ ಕೇಶವ, ಹರಿಹರ, ಗಣಪತಿ, ಸರಸ್ವತಿ, ಸೂರ್ಯ, ಉಮಾಮಹೇಶ್ವರ ದೇವರ ಪೂಜೆಗಾಗಿ ಭೂದಾನ ನೀಡಿರುತ್ತಾನೆ.

ಮಂಚಣದ್ವೇದಿಗೆ ಮಾಣಿಕೇಶ್ವರದ ೧೦ ಮತ್ತರು ಹೊಲವನ್ನು, ಅವನ ಮಗ ಮಂಚಿ ಭಟ್ಟೋಪಾಧ್ಯಾಯ ಸೋಮಯಾಜಿಯ ತಮ್ಮನಾದ ಶಂಕರಭಟ್ಟೋಪಾಧ್ಯಾಯ ಸೋಮಯಾಜಿ

ಮತ್ತು ಶ್ರೀಪತಿಭಟ್ಟೋಪಾಧ್ಯಾಯ ಸೋಮಯಾಜಿಯರು ಮುಂತಾದವರಿಗೆ ಭೂಮಿಯನ್ನು ದಾನವಾಗಿ ನೀಡುತ್ತಾರೆ ಪನ್ನಾಯದವರು (ಎಲೆ ವ್ಯಾಪಾರಿಗಳು). ತಿಂಗಳಿಗೆ ೫ ಪಣವನ್ನು, ಮಹಾಜನರು ಕೇಶವದೇವರ ಪ್ರತಿಷ್ಠೆಯಂದು ೨ ಮತ್ತರು ಮತ್ತು ೨೨೫ ಕಂಮ್ಮ ಭೂಮಿಯನ್ನು ಬಿಡುತ್ತಾರೆ. ಇವರಲ್ಲದೆ ಶ್ರೀಧರಭಟ್ಟೋಪಾಧ್ಯಾಯ ಮತ್ತು ಅವನ ಮಗ ಸರಸ್ವತಿ ಆದಿತ್ಯಭಟ್ಟೋಪಾಧ್ಯಾಯರು ಭೂದಾನ ನೀಡಿರುತ್ತಾರೆ (ಕವಿಶಾ, ಸಂ.೭, ಸಂ.ದೇ ೧೮).

ವೆಂಕಟೇಶ್ವರ ದೇವಾಲಯದ ಆವರಣದಲ್ಲಿರುವ ಶಾಸನದಲ್ಲಿ ಜಗದೇಕಮಲ್ಲನ ೧೧ ವರ್ಷ, ವಿಭವ ಸಂವತ್ಸರ, ಜೇಷ್ಠ, ಅಮಾವಾಸ್ಯೆ, ಬೃಹಸ್ಪತಿವಾರದ ಉಲ್ಲೇಖವಿದ್ದು, ಇದು ಕ್ರಿ.ಶ. ೧೭-೬-೧೧೪೯ರ ಗುರುವಾರಕ್ಕೆ ಸರಿಹೊಂದುತ್ತದೆ.

ಶಾಸನದ ಆರಂಭ ಭಾಗವು ಸಂಸ್ಕೃತ ಭಾಷೆಯಲ್ಲಿದ್ದು, ವಾಸಿಷ್ಟ, ಗೋತ್ರದ ಚೌಂಡರಾಯನ ವರ್ಣನೆಯು ಬಂದಿದೆ. ಗಬ್ಬೂರ ಆಶೇಷ ಮಾಹಾಜನಗಳಲ್ಲಿ ಒಬ್ಬನಾದ ವೈಷ್ಣವ ಚಾಕಣಭಟ್ಟಯ್ಯ ಎಂಬುವವನು ಗೋಪುರದಲ್ಲಿ (ಗಬ್ಬೂರು) ತಾನು ಮಾಡಿಸಿದ ಕೇಶವದೇವರ ಪೂಜೆ ಪುನಸ್ಕಾರ, ಚೈತ್ರ ಪವಿತ್ರ ನೈವೇದ್ಯ ನಂದಾದೀಪ, ದೇವಾಲಯ ನಿರ್ವಹಣೆ ಮುಂತಾದವುಗಳಿಗಾಗಿ ಯಾಜ್ಞಿಕ ತಿಪ್ಪಣಭಟ್ಟ ಮತ್ತು ಅವನ ಹೆಂಡತಿ ಮಲ್ಲಿಯಕ್ಕನ ಮಗನಾದ ಮಲ್ಲಿದೇವನ ಕೈಯಲ್ಲಿ ಪ್ರಥಮ, ದ್ವಿತೀಯ, ನಿವೇಶನಗಳ ಸಮೇತ ತೋಟವೊಂದನ್ನು ನೀಡುತ್ತಾರೆ.

ಇದಲ್ಲದೆ ಎರಡು ಮತ್ತರು ಕರಿಯ ಹೊಲ, ಮಾಣಿಕೇಶ್ವರದ ಮೂರು ಮತ್ತರು ಕರಿಯ ಹೊಲ, ಅಸಗೆಗೆರೆಯಲ್ಲಿ ಮೂರು ಮತ್ತರು ಭೂಮಿಯನ್ನು ಕ್ರಯಗೊಂಡು ದೇವರಿಗೆ ನೀಡುತ್ತಾರೆ (ಕವಿಶಾ, ಸಂ.೭, ಸಂದೇ ೬).

೪. ಚಿಂಚೋಳಿ ಬಸವಣ್ಣ ದೇವಾಲಯ

ಊರು	: ಗಬ್ಬೂರು	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಚಿಂಚೋಳಿ ಬಸವಣ್ಣ	ಅಭಿಮುಖ	: ಪೂರ್ವ
ಸ್ಥಳ	: ಊರ ಪಶ್ಚಿಮಕ್ಕೆ	ಸ್ಥಿತಿ	: ಮಧ್ಯಮ
ಕಾಲ	: ಕ್ರಿ.ಶ. ೧೧-೧೨ನೇ ಶತಮಾನ	ಸಂರಕ್ಷಣೆ	: –

ಕಣಶಿಲೆಯಲ್ಲಿ ನಿರ್ಮಿಸಿರುವ ಈ ದ್ವಿಕೂಟ ದೇವಾಲಯದಲ್ಲಿ ಎರಡು ಗರ್ಭಗೃಹ, ಎರಡು ಅಂತರಾಳ ಮತ್ತು ನವರಂಗಗಳಿವೆ. ನವರಂಗದಲ್ಲಿರುವ ಪಶ್ಚಿಮ ಭಾಗದ ಭಿತ್ತಿಯನ್ನು ಇತ್ತೀಚಿಗೆ ನಿರ್ಮಿಸಲಾಗಿದೆ.

ಚೌಕಾಕಾರವಾಗಿರುವ ಉತ್ತರಾಭಿಮುಖ ಗರ್ಭಗೃಹದಲ್ಲಿ ಯಾವುದೇ ಮೂರ್ತಿ ಶಿಲ್ಪಗಳಿಲ್ಲ. ಗರ್ಭಗೃಹದ ಪೂರ್ವ ಭಿತ್ತಿಯಲ್ಲಿ ಕಲ್ಲಿನ ಒಂದು ತೊಲೆಯ ಮುಂಚಾಚಿದೆ. ಗರ್ಭಗೃಹದ ಸೂರಿನಲ್ಲಿ ಭುವನೇಶ್ವರಿಯನ್ನು ಕಾಣಬಹುದು.

ಅದರಲ್ಲಿ ಕಮಲದ ಮೊಗ್ಗಿನ ಅಲಂಕರಣೆಯಿದೆ. ಗರ್ಭಗೃಹದ ಬಾಗಿಲವಾಡದ ದ್ವಾರಶಾಖೆಗಳಲ್ಲಿ, ಸ್ತಂಭ ಶಾಖೆ ಮತ್ತು ಹೂವಿನ ದಳಗಳಿರುವ ಶಾಖೆಗಳ ಅಲಂಕರಣವಿದೆ. ಶಾಖೆಯ ಕೆಳಭಾಗದಲ್ಲಿ ಪೂರ್ಣಕುಂಭಗಳ ಕೆತ್ತನೆಯಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅದರ ಮೇಲ್ಭಾಗದಲ್ಲಿ ರೇಖಾ ನಾಗರ ಶೈಲಿಯ ಐದು ಶಿಖರಗಳ ರಚನೆಯಿದೆ. ದಕ್ಷಿಣಾಭಿಮುಖ ಗರ್ಭಗೃಹವು ಉತ್ತಾರಭಿಮುಖ ಗರ್ಭಗೃಹದಂತೆ ಇದೆ.

ಆದರೆ ದ್ವಾರಶಾಖೆಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಕಾಣಬಹುದು. ಗರ್ಭಗೃಹದ ಮುಂಭಾಗದಲ್ಲಿ ಚಂದ್ರಶಿಲೆಯಿದೆ. ಉತ್ತರಾಭಿಮುಖ ಗರ್ಭಗೃಹದ ಮುಂದೆ ತೆರೆದ ಕಿರು ಅಂತರಾಳವು ಆಯತಾಕಾರದ ರಚನೆಯನ್ನು ಹೊಂದಿದೆ. ಇದರ ಸೂರಿನಲ್ಲಿ ಕಮಲದ ಮೊಗ್ಗಿನ ಅಲಂಕರಣವಿದೆ. ದಕ್ಷಿಣಾಭಿಮುಕ ಗರ್ಭಗೃಹದ ಮುಂದಿರುವ ಅಂತರಾಳದಲ್ಲಿ ಎರಡು

ಕಂಬಗಳಿವೆ. ಇಲ್ಲಿರುವ ಕಂಬಗಳು ಕಕ್ಷಾಸನದಲ್ಲಿನ ಕಂಬಗಳನ್ನು ಹೋಲುತ್ತವೆ. ಇದರ ಸೂರಿನಲ್ಲಿಯೂ ಕಮಲದ ಮೊಗ್ಗಿನ ಅಲಂಕರಣವಿದೆ.

ಅಂತರಾಳಗಳ ಮುಂದಿರುವ ನವರಂಗವು ಪೂರ್ವಕ್ಕೆ ತೆರೆದಿದೆ. ಮಧ್ಯದಲ್ಲಿ ನಾಲ್ಕು ಕಂಬಗಳು ಮತ್ತು ಕಕ್ಷಾಸನದಲ್ಲಿ ಎರಡು ಕಂಬಗಳಿವೆ. ಮಧ್ಯ ಭಾಗದಲ್ಲಿರುವ ಕಂಬಗಳು ಘನಾಕೃತಿಯ ಚೌಕ ಕಂಬಗಳಾಗಿವೆ. ಕಕ್ಷಾಸನದಲ್ಲಿರುವ ಕಂಬಗಳಿಗೆ ಕೆಳಭಾಗದ ಚೌಕಾಕಾರವಿಲ್ಲ.

ನವರಂಗದ ಪಶ್ಚಿಮ ಭಿತ್ತಿಯ ಕೆಲವು ಭಾಗಗಳು ಉಳಿದುಬಂದಿವೆ. ಉಳಿದ ಭಾಗಗಳು ಮತ್ತು ಕಕ್ಷಾಸನದ ಕೆಳ ಭಾಗಗಳು ಭೂಮಟ್ಟಕ್ಕಿಂತ ಕೆಳಗಿವೆ. ದಕ್ಷಿಣ ಮತ್ತು ಪಶ್ಚಿಮದ ಭಿತ್ತಿಗಳನ್ನು ನವೀಕರಿಸಲಾಗಿದೆ. ನವರಂಗದ ಸೂರಿನಲ್ಲಿ ಕಮಲದ ಮೊಗ್ಗಿನ ಅಲಂಕರಣೆಯಿದೆ. ದೇವಾಲಯದ ಅಧಿಷ್ಠಾನ ಭಾಗಗಳು ನೆಲದಲ್ಲಿ ಹುದುಗಿದೆ. ನವರಂಗದ ಮೇಲಿರುವ ಪ್ರಸ್ತರ ಭಾಗವು ಇಳಿಜಾರು ಮುಂಚಾಚನ್ನು ಹೊಂದಿದೆ. ಕಕ್ಷಾಶನದ ಹೊರಭಿತ್ತಿಯಲ್ಲಿ ಅಲಂಕಾರಿಕ ಕೆತ್ತನೆಗಳನ್ನು ಕಾಣಬಹುದು. ದೇವಾಲಯಕ್ಕೆ ಶಿಖರವಿಲ್ಲ (ನೋಡಿ ಚಿತ್ರಗಾರ, ಹೆಚ್.ಎನ್, ಪೂರ್ವೋಕ್ತ, ಪು. ೪೮-೫೦).

ವೀರಭದ್ರ ದೇವಾಲಯದ ಸಮೀಪದಲ್ಲಿರುವ ಶಾಸನದಲ್ಲಿನ ಕಾಲವು ಜಗದೇಕಮಲ್ಲನ ೪ನೆಯ ವರ್ಷದ ದುರ್ಮು[ಖಿ], ಆಷಾಢ, ಶು.೭, ಬೃಹಸ್ಪತಿವಾರದ ಉಲ್ಲೇಖವಿದ್ದು, ಇದು ಕ್ರಿ.ಶ. ೧೨-೬-೧೧೪೧ರ ಗುರುವಾರಕ್ಕೆ ಸರಿಹೊಂದುತ್ತದೆ.

ಶಾಸನದ ಆರಂಭ ಭಾಗವು ಸಂಸ್ಕೃತ ಭಾಷೆಯಲ್ಲಿದ್ದು ಕೇಶವನನ್ನು ಸ್ತುತಿಸಲಾಗಿದೆ. ನಂತರ ಆದಿವರಾಹ ಮೂರ್ತಿಯನ್ನು ಸ್ತುತಿಸಿ, ಮಂಚಗ್ರಾಯ್ಯನಿಗೆ ಒಳ್ಳೆಯದಾಗಲೆಂದು ಹರಸಿದೆ.

ಚಾಳುಕ್ಯ ತ್ರಿಭುವನಮಲ್ಲದೇವನ ಆಳ್ವಿಕೆಯ ಉಲ್ಲೇಖವಿದ್ದರೂ ಈ ಕಾಲಕ್ಕೆ ಅವನು ತೀರಿಹೋಗಿದ್ದ. ಗೊಬ್ಬೂರಿನ ಪರಮ ಭಾಗವತನಾದ ವೈಷ್ಣವ ಮಂಚೈಪ್ಪಣ್ಣನು ಎರಡನೆಯ

ಜಗದೇಕಮಲ್ಲನ ಆಳ್ವಿಕೆಯ ಕಾಲದಲ್ಲಿ ನಿಟ್ಟಾರಿಯ ವೈಷ್ಣವ ಕಂದರ್ಪಭಟ್ಟನಿಂದ ಪ್ರಥಮ ಮತ್ತು ದ್ವಿತೀಯ ನಿವೇಶನಗಳನ್ನು, ಹೊಲದ ಬೆಳೆಯನ್ನು ಕ್ರಯಕ್ಕೆ ಪಡೆದು ತಾನು ಪ್ರತಿಷ್ಠೆ ಮಾಡಿದ ಪ್ರಸನ್ನ ಕೇಶವದೇವರ ಪೂಜೆಗಾಗಿ ನೀಡುತ್ತಾನೆ (ಕವಿಶಾ, ಸಂ. ೭, ಸಂ.ದೇ ೧೦).

೫. ಹರಿಹರ ದೇವಾಲಯ

ಊರು	: ಗಬ್ಬೂರು	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಹರಿಹರ	ಅಭಿಮುಖ	: ಪೂರ್ವ
ಸ್ಥಳ	: ವೆಂಕಟೇಶ್ವರ ಗುಡಿ ಪಶ್ಚಿಮಕ್ಕೆ	ಸ್ಥಿತಿ	: ಮಧ್ಯಮ
ಕಾಲ	: ಕ್ರಿ.ಶ. ೧೨-೧೩ನೇ ಶತಮಾನ	ಸಂರಕ್ಷಣೆ	: -

ಕಣಶಿಲೆಯಲ್ಲಿ ನಿರ್ಮಿಸಿರುವ ಈ ತ್ರಿಕೂಟ ದೇವಾಲಯದಲ್ಲಿ ದಕ್ಷಿಣ, ಪಶ್ಚಿಮ ಮತ್ತು ಉತ್ತರದಲ್ಲಿ ಮೂರು ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ಉತ್ತರ ಗರ್ಭಗೃಹ ಮತ್ತು ನವರಂಗದ ಉತ್ತರ ಭಾಗದ ನಡುವೆ ಇನ್ನೊಂದು ಗರ್ಭಗೃಹವನ್ನು ನಿರ್ಮಿಸಲಾಗಿದೆ.

ಚೌಕಾಕಾರವಾಗಿರುವ ಮೂರು ಗರ್ಭಗೃಹಗಳ ಬಾಗಿಲವಾಡಗಳಲ್ಲಿ ತ್ರಿಶಾಖೆಗಳಿವೆ. ಅದರ ಕೆಳಭಾಗದಲ್ಲಿ ಪೂರ್ಣಕುಂಭಗಳ ಕೆತ್ತನೆಯಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪಗಳಿವೆ. ಇದರ ಮೇಲ್ಭಾಗದಲ್ಲಿ ಐದು ಶಿಖರ ಮಾದರಿಯ ರಚನೆಗಳಿವೆ. ಮೂರು ಗರ್ಭಗೃಹಗಳಲ್ಲಿ ಯಾವುದೇ ಮೂರ್ತಿಶಿಲ್ಪಗಳಿಲ್ಲ. ಪಶ್ಚಿಮದ ಭಿತ್ತಿಯನ್ನು ಒತ್ತರಿಸಿ ಇಲ್ಲಿ ಇನ್ನೊಂದು ಗರ್ಭಹವನ್ನು ನಿರ್ಮಿಸಲಾಗಿದೆ. ಅದರ ವಿಶಾಲ ಬಾಗಿಲವಾಡದಲ್ಲಿ ಸರಳ ಶಾಖೆಗಳಿವೆ. ಶಾಖೆಯ ಕೆಳಗೆ ಪೂರ್ಣಕುಂಭಗಳ ಕೆತ್ತನೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ.

ಗರ್ಭಗೃಹದ ಮುಂದಿರುವ ಮೂರು ಅಂತರಾಳಗಳು ತೆರೆದಿವೆ ಹಾಗೂ ಅಲ್ಲಿ ಎರಡು ಕಂಬಗಳಿವೆ. ಕಂಬಗಳ ಮತ್ತು ಭಿತ್ತಿಯ ನಡುವಿನ ಭಾಗದಲ್ಲಿ ಜಾಲಂದ್ರಗಳನ್ನು

ಅಳವಡಿಸಲಾಗಿದೆ. ಸೂರಿನ ಭಾಗದಲ್ಲಿ ಕಮಲದ ಅಲಂಕರಣೆಯ ಭುವನೇಶ್ವರಿಯಿದೆ. ನವರಂಗವು ಪೂರ್ವ ಭಾಗದಲ್ಲಿ ತೆರೆದಿದೆ. ಮಧ್ಯದಲ್ಲಿ ನಾಲ್ಕು ಕಂಬಗಳಿವೆ. ಇನ್ನು ನಾಲ್ಕು ಕಂಬಗಳು ಇದರ ಮುಂದಿವೆ. ಮಧ್ಯದಲ್ಲಿನ ಕಂಬಗಳು ಘನಾಕಾರದ್ದಾಗಿವೆ. ನವರಂಗದ ಸೂರಿನ ಭಾಗವು ಸಮತಟ್ಟಾಗಿದ್ದು ಅದರಲ್ಲಿ ಕಮಲದ ಹೂವಿನ ಅಲಂಕರಣೆಯಿದೆ. ಪಶ್ಚಿಮ ಗರ್ಭಗೃಹದ ಉತ್ತರಕ್ಕೆ ಪಶ್ಚಿಮ ಭಿತ್ತಿಯಲ್ಲಿ ದೇವಕೊಷ್ಠವಿದೆ.

ದೇವಾಲಯದ ಹೊರಭಾಗವು ಮಣ್ಣಲ್ಲಿ ಹುದುಗಿವೆ. ದೇವಾಲಯದ ಮುಂದಿನ ಭಾಗದಲ್ಲಿನ ಪ್ರಸ್ತರವು ಇಳಿಜಾರು ಮುಂಚಾಚನ್ನು ಹೊಂದಿದೆ. ದೇವಾಲಯದ ಭಿತ್ತಿಯ ಭಾಗವು ಸರಳವಾಗಿದ್ದು ಅಲ್ಲಿ ಯಾವುದೇ ಅಲಂಕರಣೆಗಳಿಲ್ಲ ಮತ್ತು ಆಲಯಕ್ಕೆ ಶಿಖರವಿಲ್ಲ. (ನೋಡಿ ಚಿತ್ರಗಾರ, ಹೆಚ್.ಎನ್. ಪೂರ್ವೋಕ್ತ, ಪು. ೨೩-೨೫).

ಈ ದೇವಾಲಯದಲ್ಲಿರುವ ಶಾಸನದಲ್ಲಿ ಕಳಚುರಿ ರಾಯಮುರಾರಿ ಭುಜಬಳ ಮಲ್ಲ ದೇವನ ೪ನೆಯ ವರ್ಷದ ವಿಕೃತ, ಶ್ರಾವಣ, ಬ. ೪, ಆದಿತ್ಯವಾರವೆಂದಿದ್ದು ಇದು ಕ್ರಿ.ಶ. ೨-೮-೧೧೭೦ರ ಭಾನುವಾರಕ್ಕೆ ಸರಿ ಹೊಂದುತ್ತದೆ.

ರಾಯಿಕೊಡ ಹರಿಹರದಾಸರಾದ ಸೋಮೇಸ್ವರಭಟ್ಟದ ಮಗಳು ಲಕ್ಷುಮಕ್ಕ ಸರ್ವನಮಸ್ಯದ ಅಗ್ರಹಾರವಾದ ಹಿರಿಯ ಗೊಬ್ಬೂರಿನ ಮೊಸಂಗಿಯ ಭಾಗದಲ್ಲಿ ರಾಯಿಕೊಡವರ ಭಾಗದಲ್ಲಿ, ತನ್ನ ತಂದೆಯ ಕಡೆಯಿಂದ ತನ್ನ ಭಾಗವಾಗಿ ಬಂದ ಬೆಳೆಯ ಭಾಗವನ್ನು ಕೋಟಿ ಹೋಮಕ್ಕೆ ಮತ್ತು ತನ್ನ ತಂದೆ ಗೊಬ್ಬೂರಲ್ಲಿ ಪ್ರತಿಷ್ಠೆ ಮಾಡಿಸಿದ ಹರಿಹರ ದೇವರಿಗೆ ಮತ್ತು ಸಿಧ್ಧಸೋಮನಾಥ ದೇವರಿಗೆ ಪೂಜೆ ಪುನಸ್ಕಾರ, ಧೂಪ, ದೀಪ, ನೈವೇದ್ಯ, ವಸ್ತ್ರಾಲಂಕಾರ, ಚೈತ್ರ ಪವಿತ್ರ, ಧರ್ಮದ ಏತಕ್ಕೆ ಸಲ್ಲುವಂತೆ ತನ್ನ ತಂದೆಗೆ, ತನಗೆ ಮತ್ತು ತನ್ನ ಗಂಡನ ಶ್ರೇಯೋಭಿವೃಧ್ಧಿಗೆಂದು ಬಿಡುತ್ತಾಳೆ (ಕವಿಶಾ, ಸಂ.೭, ಸಂ.ದೇ ೫).

೬. ಏಳು ಬಾವಿ ಬಸವ ದೇವಾಲಯ

ಊರು	: ಗಬ್ಬೂರು	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಏಳು ಬಾವಿ ಬಸವ	ಅಭಿಮುಖ	: ಪೂರ್ವ ಮತ್ತು ಉತ್ತರ
ಸ್ಥಳ	: ವೆಂಕಟೇಶ್ವರ ಗುಡಿ ಪೂರ್ವಕ್ಕೆ	ಸ್ಥಿತಿ	: ಮಧ್ಯಮ
ಕಾಲ	: ಕ್ರಿ.ಶ. ೧೨-೧೩ನೇ ಶತಮಾನ	ಸಂರಕ್ಷಣೆ	: –

ಕಣಶಿಲೆಯ ಈ ದೇವಾಲಯದಲ್ಲಿ ಎರಡು ಗರ್ಭಗೃಹಗಳು, ದಕ್ಷಿಣ ಮತ್ತು ಪಶ್ಚಿಮಗಳಲ್ಲಿ ಎರಡು ಅಂತರಾಳಗಳು, ಪೂರ್ವ ಮತ್ತು ಉತ್ತರಗಳಲ್ಲಿ ಪ್ರವೇಶಗಳಿರುವ ನವರಂಗ, ಪೂರ್ವದಲ್ಲಿ ನಂದಿಮಂಟಪ ಮತ್ತು ನಂದಿಯ ಹಿಂಭಾಗ ಪೂರ್ವದಲ್ಲಿ ಬಾಗಿಲು ಇರುವ ಒಂದು ಅಂಕಣವಿದೆ.

ಪಶ್ಚಿಮಾಭಿಮುಖವಾಗಿರುವ ಚೌಕಾಕಾರ ಗರ್ಭಗೃಹದಲ್ಲಿ ಚೌಕಾಕಾರ ಪೀಠದ ಮೇಲೆ ಲಿಂಗವಿದೆ. ಗರ್ಭಗೃಹದ ಸೂರಿನಲ್ಲಿ ಕಮಲದ ಅಲಂಕರಣೆಯಿರುವ ಭುವನೇಶ್ವರಿಯಿದೆ. ಗರ್ಭಗೃಹದ ಬಾಗಿಲವಾಡದಲಲಿ ದ್ವಾರಶಾಖೆಗಳಿವೆ. ಅದರ ಕೆಳಭಾಗದಲ್ಲಿ ಶೈವ ದ್ವಾರ ಪಾಲಕರ ಉಬ್ಬುಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ.

ಇದರ ಮುಂಭಾಗವಿರುವ ಅಂತರಾಳದ ಬಾಗಿಲವಾಡವು ಅತ್ಯಂತ ಕಲಾತ್ಮಕವಾದ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದೆ. ಅದರ ಮೇಲ್ಭಾಗದಲ್ಲಿ ಎರಡು ಕೀರ್ತಿಮುಖಗಳಿವೆ. ದ್ವಾರಶಾಖೆಗಳಲ್ಲಿ ಸರಳ, ಸ್ತಂಭ ಮತ್ತು ಲತಾಸುರುಳಿಗಳು ಇವೆ. ಲತಾಸುರುಳಿಯ ಶಾಖೆಯಲ್ಲಿ ಪ್ರಾಣಿಗಳು, ಗಂಧರ್ವ ಮತ್ತು ಇತರೆ ಅಲಂಕರಣೆಗಳ ಕೆತ್ತನೆಗಳಿವೆ. ಪ್ರತಿ ಶಿಲ್ಪದ ಪಕ್ಕದಲ್ಲಿ ಛಾಮರಧಾರಿಗಳಿದ್ದಾರೆ. ಬಾಗಿಲವಾಡದ ಲಲಾಟವು ವಿಸ್ತಾರವಾಗಿದ್ದು ಅವುಗಳಲ್ಲಿ ಗುಡಿಯ ಕಿರು ಪ್ರತಿಕೃತಿಗಳಿವೆ. ಈ ಗುಡಿಗಳ ರಚನೆಯಲ್ಲಿ ತ್ರಿಮೂರ್ತಿಗಳು ತಮ್ಮ ಪತ್ನಿ ಮತ್ತು ವಾಹನದೊಂದಿಗೆ ಇದ್ದಾರೆ. ಮಕರತೋರಣದ ಮೇಲ್ಭಾಗದಲ್ಲಿ ಅಷ್ಟದಿಕ್ಪಾಲಕರ ಕೆತ್ತನೆಗಳಿವೆ.

ತೊಲೆಯ ಬಲಭಾಗದ ಮೂಲೆಯಲ್ಲಿ ಓರ್ವ ಸ್ತ್ರೀಯು ತನ್ನ ದೇಹವನ್ನು ತಿರುಗಿಸಿ ಬರೆಯುತ್ತಿರುವ ಶಿಲ್ಪವಿದೆ. ಇದು ಬೀದರ್‌ನಲ್ಲಿರುವ ಜಲಸಂಗಿಯ ಸ್ತ್ರೀಯ ಶಿಲ್ಪವನ್ನು ನೆನಪಿಸುತ್ತದೆ. ಅಂತರಾಳದ ಸೂರಿನಲ್ಲಿ ಕಮಲದ ಮೊಗ್ಗಿನ ಅಲಂಕರಣೆಯನ್ನು ಹೊಂದಿದೆ.

ದಕ್ಷಿಣಾಭಿಮುಖ ಗರ್ಭಗೃಹವು ಈ ದೇವಾಲಯದ ತಲವಿನ್ಯಾಸಕ್ಕೆ ಹೊಂದುತ್ತಿಲ್ಲ. ನವರಂಗ ಮತ್ತು ಅಂತರಾಳ ಕೂಡುವ ಸ್ಥಳದಲ್ಲಿ ಎರಡು ಅರೆಗಂಬಗಳಿವೆ. ಗರ್ಭಗೃಹವು ನವರಂಗಕ್ಕೆ ನೇರವಾಗಿಲ್ಲ. ಆದ್ದರಿಂದ ಈ ಭಾಗವು ನಂತರದ ಸೇರ್ಪಡೆಯೆಂದು ತೋರುತ್ತದೆ. ಇದು ಪಶ್ಚಿಮ ಭಾಗದಲ್ಲಿ ಅಧಿಕವಾಗಿದೆ. ಇದರ ಮುಂದಿರುವ ಅಂತರಾಳವು ತೆರೆದಿದೆ. ಇದರ ಸೂರಿನ ಭಾಗವು ಕಮಲದ ಮೊಗ್ಗಿನ ಅಲಂಕರಣೆಯನ್ನು ಹೊಂದಿದೆ. ಗರ್ಭಗೃಹದ ಬಾಗಿಲವಾಡದಲ್ಲಿ ತ್ರಿಶಾಖೆಗಳಿವೆ.

ಶಾಖೆಯ ಕೆಳಭಾಗದಲ್ಲಿ ಪೂರ್ಣಕುಂಭಗಳ ಕೆತ್ತನೆಯಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಗರ್ಭಗೃಹದಲ್ಲಿ ದೊಡ್ಡ ಪೀಠದ ಮೇಲೆ ಸಮಭಂಗದಲ್ಲಿರುವ ಹರಿಹರನ ಸುಂದರ ಶಿಲ್ಪವನ್ನು ಇರಿಸಲಾಗಿದೆ. ಅವನ ಕೆಳಭಾಗದ ಪೀಠದಲ್ಲಿ ಮಂಡಿಯೂರಿ ಕುಳಿತ ಗರುಡ ಮತ್ತು ನಂದಿಯ ಉಬ್ಬುಶಿಲ್ಪಗಳಿವೆ. ಭಿತ್ತಿಯ ಭಾಗಗಳು ಇತ್ತೀಚಿನ ರಚನೆಯಾಗಿವೆ. ಸೂರಿನ ಭಾಗವು ಸಪಾಟಾಗಿದ್ದು ಅದರಲ್ಲಿ ಕಮಲದ ಹೂವಿನ ಅಲಂಕರಣೆಯಿದೆ.

ಪ್ರತ್ಯೇಕ ನಂದಿಮಂಟಪವನ್ನು ಈ ಆಲಯದಲ್ಲಿ ನಿರ್ಮಿಸಲಾಗಿದೆ. ಇದರ ಪೂರ್ವ ಮತ್ತು ಪಶ್ಚಿಮ ಭಾಗದ ತುದಿಗಳಲ್ಲಿ ಇಳಿಜಾರು ಮುಂಚಾಚು ಇದೆ. ಇದರಿಂದ ಒಂದು ಅಂಕಣವು ಉಂಟಾಗಿದ್ದು, ಇದು ನಿರುಪಯುಕ್ತ ಭಾಗವಾಗಿದೆ. ಇಲ್ಲಿರುವ ನಾಲ್ಕು ಕಂಬಗಳು ಘನಾಕೃತಿಯದ್ದಾಗಿವೆ. ಅಂಕಣದ ಭಿತ್ತಿಯ ಭಾಗಗಳನ್ನು ನವೀಕರಿಸಲಾಗಿದೆ. ಇಲ್ಲಿನ ಸೂರಿನ ಭಾಗವು ಸಭಾಮಂಟಪದ ಸೂರನ್ನು ಹೋಲುತ್ತದೆ. ಈ ಅಂಕಣದಲ್ಲಿ ಸು. ೨ ಮೀಟರ್ ಎತ್ತರದ ನಂದಿಯ ಶಿಲ್ಪವಿದೆ. ಅಂಕಣದ ಸೂರು, ಭಿತ್ತಿ ಮತ್ತು ಇತರೆ ಭಾಗಗಳನ್ನು ಸಾಕಷ್ಟು ನವೀಕರಿಸಲಾಗಿದೆ. ನೆಲದಲ್ಲಿ ಚಂದ್ರಶಿಲೆಯಿದೆ. ಇದರ ದ್ವಾರದಲ್ಲಿ ದ್ವಾರಶಾಖೆಗಳಿವೆ ಮತ್ತು

ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅದರ ಮೇಲೆ ರೇಖಾನಗರ ಶೈಲಿಯ ಶಿಖರ ಅಲಂಕರಣಗಳಿವೆ.

ನವರಂಗದ ಭಾಗವನ್ನು ಕೈಪಿಡಿ ಗೋಡೆಗಳಿರುವ ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದು. ನವರಂಗದ ಉತ್ತರ ಭಾಗದಲ್ಲಿರುವ ಬಾಗಿಲವಾಡವು ಸರಳವಾಗಿದ್ದು ಅದರಲ್ಲಿ ಸರಳ ಶಾಖೆಗಳಿವೆ. ಅದರ ಕೆಳಭಾಗದಲ್ಲಿ ಪೂರ್ಣಕುಂಭಗಳ ಅಲಂಕರಣೆಯಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ.

ನವರಂಗದ ಮಧ್ಯೆ ಘನಾಕಾರದ ನಾಲ್ಕು ಕಂಬಗಳಿವೆ. ಇದಕ್ಕೆ ಅನುಗುಣವಾಗಿ ಕಕ್ಷಾಸನದಲ್ಲಿ ಕಂಬಗಳನ್ನು ಅಳವಡಿಸಲಾಗಿದೆ. ಇದು ಭಿತ್ತಿಯಿಂದ ದೂರ ಇರುವುದರಿಂದ, ಭಿತ್ತಿಯನ್ನು ನಂತರ ಕಾಲದಲ್ಲಿ ರಚಿಸಿರಬಹುದು ಎಂದು ತೋರುತ್ತದೆ. ಈ ಭಾಗವು ಮುಂಚೆ ತೆರದ ಭಾಗವಾಗಿದ್ದಿರಬಹುದು. ಉತ್ತರ ಅಂಕಣ ಭಾಗದಲ್ಲಿ ಮೂರು ಕಡೆ ಕಕ್ಷಾಸನವಿದೆ. ಮಹಿಷಾಸುರಮರ್ಧಿನಿ ಮತ್ತು ಗಣಪತಿಯ ಶಿಲ್ಪಗಳನ್ನು ಇಲ್ಲಿ ಇಡಲಾಗಿದೆ.

ದೇವಾಲಯದ ಅಧಿಷ್ಠಾನವು ನೆಲದಲ್ಲಿ ಹುದುಗಿದೆ. ಸಭಾಮಂಟಪ ಮತ್ತು ನಂದಿ ಮಂಟಪಗಳ ಭಿತ್ತಿಯನ್ನು ನವೀಕರಿಸಲಾಗಿದೆ. ನವೀಕರಣದ ಸಂದರ್ಭದಲ್ಲಿ ವಾಸ್ತು ಭಾಗಗಳನ್ನು ತಮಗೆ ತೋಚಿದಂತೆ ಇರಿಸಿರುವುದು ಕಂಡುಬರುತ್ತದೆ. ದೇವಾಲಯಕ್ಕೆ ಶಿಖರವಿಲ್ಲ. (ನೋಡಿ ಚಿತ್ರಗಾರ ಹೆಚ್.ಎನ್. ಪೂರ್ವೋಕ್ತ, ಪು.೩-೮).

ದೇವಾಲಯದ ಬಲಭಾಗದಲ್ಲಿ ತ್ರುಟಿತ ಶಾಸನವಿದೆ. ರಾಯಮುರಾರಿ ಸೋವಿದೇವನ ೫ನೆಯ ವರ್ಷದ ... ಸಂವತ್ಸರ, (ಹೆಸರಿನ ಭಾಗ ಹಾಳಾಗಿದೆ), ಭಾದ್ರಪದ, ಶು. ೧೦, ಬೃಹಸ್ಪತಿವಾರವೆಂದಿದ್ದು, ಇದು ಕ್ರಿ.ಶ. ೧೭-೮-೧೧೭೧ರ ಗುರುವಾರಕ್ಕೆ ಸರಿಹೊಂದುತ್ತದೆ.

ಗೊಬ್ಬೂರಿನ ನೀರಕೋಟೆಯಲ್ಲಿ ಚಾಕಣಭಟ್ಟನು ಪ್ರತಿಷ್ಠೆ ಮಾಡಿಸಿದ ಪ್ರಸನ್ನ ಕೇಶವದೇವರ ಅಂಗಭೋಗ ರಂಗಭೋಗ ಮುಂತಾದವಕ್ಕೆ ಹೇರಿಗೆ ೫೦ ಎಲೆಯನ್ನು,

ಶಂಕರದೇವ ಲಬ್ದವರಪ್ರಸಾದರಾದ ಬಳ್ಳಿಯ ಸಾಸಿರ್ವ್ವರು ಬಿಡುತ್ತಾರೆ. ಈ ಸಾಸಿರ್ವ್ವರನ್ನು ಅನೇಕ ವಿಶೇಷಣಗಳಿಂದ ಹೊಗಳಲಾಗಿದೆ.

ಹಂನ್ನವಣದ ಸೆಟ್ಟಿಯರು ತಾವು ಮಾರಿದ ಎಲೆಯ ಹೇರಿಗೆ ೫೦ ಎಲೆಯನ್ನು ಪ್ರಸನ್ನ ಕೇಶವದೇವರ ಪೂಜಾರ್ಥವಾಗಿ ದಾನ ಬಿಡುತ್ತಾರೆ. ಜತ್ಯಪ್ಪನೆಂಬುವವನು ಎರಡೂ ದೇವರಿಗೆ ನೀರಕೋಟೆಯ ಪಶ್ಚಿಮಕ್ಕೆ ಒಂದು ದೊಡ್ಡ ನಿವೇಶನವನ್ನು ನೀಡುತ್ತಾನೆ. ಊರಿನ ಮಹಾಜನರು ಗೌಡಗೆರೆಯಲ್ಲಿ ಮಾಣಿಕೇಶ್ವರದ ಕೋಲಲ್ಲಿ ನಾಲ್ಕು ಮತ್ತರು ಭೂಮಿಯನ್ನು ನೀಡುತ್ತಾರೆ (ಕವಿಶಾ, ಸಂ.೭, ಸಂ.ದೇ ೭).

ದೇವಾಲಯದ ಆವರಣದಲ್ಲಿ ನೆಲಕ್ಕೆ ಹಾಸಿರುವ ಕಲ್ಲು ಸವೆದಿದ್ದು, ಅದರಲ್ಲಿ ತ್ರುಟಿತ ಶಾಸನವಿದೆ. ಅದರ ವಿವರಗಳು ಸ್ಪಷ್ಟವಿಲ್ಲ. ಕ್ರಿ.ಶ. ೧೨-೧೩ನೆಯ ಶತಮಾನ (ಕವಿಶಾ, ಸಂ.೭, ಸಂ.ದೇ ೮).

ವೆಂಕಟೇಶ್ವರ ದೇವಾಲಯದ ಆವರಣದಲ್ಲಿನ ಕರಿಯ ಕಲ್ಲಿನ ಕಂಬದಲ್ಲಿ ಶಾಸನವಿದೆ. ನಾಗರಿ ಲಿಪಿ ಹಾಗೂ ಸಂಸ್ಕೃತ ಭಾಷೆಯಲ್ಲಿದೆ. ಈ ಶಾಸದಲ್ಲಿನ ಕಾಲವು ತ್ರಿಂಶದಧಿಕ ಶತೋತ್ತರ ಸಹಸ್ರ ಸಂಖ್ಯಾಪೂರ್ವಕ ಶ್ರೀಮುಖ ಸಂವತ್ಸರೇ ವೈಶಾಖ-ಮಮಾಸ್ಯಾಯಾಂ ಸೂರ್ಯಗ್ರಹಣೇ ಎಂದಿದ್ದು, ಇದು ಕ್ರಿ.ಶ. ೨೧-೫-೧೨೧೩ರ ಮಂಗಳವಾರಕ್ಕೆ ಸಮನಾಗುತ್ತದೆ ಆ ದಿನ ಗ್ರಹಣವಿರುವುದಿಲ್ಲ. ಗ್ರಹಣವು ಇದೇ ಸಂವತ್ಸರದ ಚೈತ್ರ, ಅಮಾವಾಸ್ಯೆಯಂದು ಬಂದಿದೆ (ಕ್ರಿ.ಶ. ೨೨-೧-೧೨೧೩).

ಯಾದವ ಸಿಂಘಣನು ಗೋಪುರದಲ್ಲಿ ಪ್ರಸನ್ನ ರಾಜೇಶ್ವರ ಮತ್ತು ಕೇಶವ ದೇವರನ್ನು ಪ್ರತಿಷ್ಠಾಪಿಸಿದ. ಇದರೊಂದಿಗೆ ಕೇಶವಾದಿ ಚತುರ್ವಿಂಶತಿ ಮೂರ್ತಿಗಳನ್ನು ಸಕಲ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿದ. ಗೋಪುರವನ್ನು ಇವನ ದಂಡನಾಯಕ ಲಕ್ಷ್ಮಿದೇವನು ಆಳುತ್ತಿದ್ದು, ಅವನು ಅನೇಕರಿಗೆ ಮನೆಯ ವೃತ್ತಿಗಳನ್ನು ಹಂಚಿದ. ನೇರುಡಿಗೆ ಗ್ರಾಮವನ್ನು ನೀಡಿದ (ಕವಿಶಾ, ಸಂ. ೭, ಸಂ. ದೇ ೯).

೭. ಈಶ್ವರ ದೇವಾಲಯ

ಊರು : ಗಬ್ಬೂರು	ಶೈಲಿ : ಕಲ್ಯಾಣ ಚಾಲುಕ್ಯ
ಸ್ಮಾರಕ : ಈಶ್ವರ	ಅಭಿಮುಖ : ಪೂರ್ವ
ಸ್ಥಳ : ವೆಂಕಟೇಶ್ವರ ಗುಡಿ ಪೂರ್ವಕ್ಕೆ	ಸ್ಥಿತಿ : ಮಧ್ಯಮ
ಕಾಲ : ಕ್ರಿ.ಶ. ೧೨–೧೩ನೇ ಶತಮಾನ	ಸಂರಕ್ಷಣೆ : ರಾ.ಪು.ಇ.

ಕಣಶಿಲೆಯ ಈ ದೇವಾಲಯದಲಲಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ಚೌಕಾಕಾರ ಗರ್ಭಗೃಹದಲ್ಲಿ ವರ್ತುಳಾಕಾರದ ಪೀಠದ ಮೇಲೆ ಲಿಂಗವಿದೆ. ಈ ಲಿಂಗಪೀಠಕ್ಕೆ ಆನಿಸಿದಂತೆ ಐದು ಮುಖಗಳುಳ್ಳ (ಒಂದು ಮುಖ ಭಗ್ನವಾಗಿದೆ) ಕಾರ್ತಿಕೇಯನ ಶಿಲ್ಪವನ್ನು ಇಡಲಾಗಿದೆ. ಕಾರ್ತಿಕೇಯನು ನವಿಲಿನ ಮೇಲೆ ಕುಳಿತಿರುವನು. ಗರ್ಭಗೃಹದ ಸೂರಿನ ಭಾಗವು ನವರಂಗದ ಸೂರನ್ನು ಹೋಲುತ್ತದೆ.

ಗರ್ಭಗೃಹದ ಬಾಗಿಲವಾಡವು ಐದು ಶಾಖೆಗಳಿಂದ ಕೂಡಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಇದರ ಮುಂದಿರುವ ಅಂತರಾಳ ಭಾಗದಲ್ಲಿ ಎರಡು ಕಂಬಗಳಿವೆ. ಇವುಗಳು ನವರಂಗದ ಹೊರಸಾಲಿನ ಕಂಬಗಳಂತೆ ಇವೆ. ಸೂರಿನಲ್ಲಿ ಕಮಲದ ಮೊಗ್ಗಿನ ಅಲಂಕರಣೆ ಇದೆ.

ಅಂತರಾಳದ ಮುಂಭಾಗದಲ್ಲಿ ನವರಂಗವಿದೆ. ಇದನ್ನು ಲತಾಸುರುಳಿ ಕೈಪಿಡಿ ಗೋಡೆಯಿರುವ ಮೆಟ್ಟಿಲುಗಳ ಮೂಲಕ ಪೂರ್ವದಿಂದ ಪ್ರವೇಶಿಸಬಹುದು. ನವರಂಗದ ಮಧ್ಯದ ಅಂಕಣವು ಪೂರ್ವಕ್ಕೆ ತೆರೆದಿದೆ. ನವರಂಗದ ಮಧ್ಯದಲ್ಲಿ ನಾಲ್ಕು ವರ್ತುಳಾಕಾರದ ಚಿಕ್ಕ ಕಂಬಗಳಿವೆ. ಇವುಗಳಿಗೆ ಅನುಗುಣವಾಗಿ ಭಿತ್ತಿಯಲ್ಲಿರಬೇಕಾದ ಅರೆಗಂಬಗಳನ್ನು ಭಿತ್ತಿಯ ಮುಂಭಾಗದಲ್ಲಿ ಇರುವಂತೆ ರಚಿಸಲಾಗಿದೆ. ದೇವಾಲಯಕ್ಕೆ ಶಿಖರವಿಲ್ಲ ಹಾಗೂ ಅಧಿಷ್ಠಾನ

ಭಾಗಗಳು ನೆಲದಲ್ಲಿ ಹುದುಗಿದೆ. ಪ್ರಸ್ತರ ಭಾಗದಲ್ಲಿ ದೊಡ್ಡ ಕಲ್ಲುಗಳ ಇಳಿಜಾರು ಮೂಚಾಚು ಇದೆ (ನೋಡಿ ಚಿತ್ರಗಾರ, ಹೆಚ್.ಎನ್. ಪೂರ್ವೋಕ್ತ, ಪು. ೨೬-೨೮).

ರಾಯಚೂರು ಅಗಸಿಯ ಹನುಮಂತ ದೇವಾಲಯದ ಆವರಣದಲ್ಲಿ ಶಾಸನವಿದೆ. ಆ ಶಾಸನದಲ್ಲಿನ ಕಾಲವು ಶ್ರೀ ಚಾಳುಕ್ಯ ವಿಕ್ರಮ ವರ್ಷ ೪೩ನೆಯ ವಿಳಂಬಿ, ಪುಷ್ಯ, ಶು. ೫, ಬೃಹಸ್ಪತಿವಾರವೆಂದಿದ್ದು, ಇದು ಕ್ರಿ.ಶ. ೨೪-೧೨-೧೧೧೮ರ ಬೃಹಸ್ಪತಿವಾರಕ್ಕೆ ಸರಿಹೊಂದುತ್ತದೆ.

ತ್ರಿಭುವನಮಲ್ಲನ ಆಳ್ವಿಕೆಯಲ್ಲಿ ಗಬ್ಬೂರಿನ ಜನ್ನಯ್ಯಭಟ್ಟ ಸೋಮಯಾಜಿ ತನ್ನ ವೃತ್ತಿಯ ಬೆಪ್ಪಿಬಾಗಿನವೆಂಬ ಸ್ಥಳದಲ್ಲಿ ಮಾಣಿಕೇಶ್ವರದ ಕೋಲಲ್ಲಿ ೫ ಮತ್ತರು ಭೂಮಿಯನ್ನು ಕರಿಯ ಮುಸ್ಯಣಭಟ್ಟೋಪಾಧ್ಯಾಯ ಕಲಯ್ಯನು ಡೋಣಭಟ್ಟರಿಗೆ ದಾನ ಮಾಡಿದುದನ್ನು ಶಾಸನದಲ್ಲಿ ಹೇಳಲಾಗಿದೆ. ಶಾಸನ ಮುಂದುವರಿದು ಮುಸ್ಯಣಭಟ್ಟ ಮತ್ತು ಅವನ ಪತ್ನಿ ನಾಲಿಕಬ್ಬೆಯರು ಮಹಾದೇವರ ಧೂಪ, ದೀಪ ಮತ್ತು ಪೂಜಾ ಕಾರ್ಯಗಳಿಗಾಗಿ ಭೂದಾನ ನೀಡಿರುವಂತೆ ಉಲ್ಲೇಖವಿದೆ (ಕವಿಶಾ, ಸಂ.೭, ಸಂ.ದೇ ೧).

ಬಂಗಾರು ಬಸವಣ್ಣ ದೇವಾಲಯದ ಸಮೀಪದ ಕಲ್ಲಿನಲ್ಲಿರುವ ಶಾಸನದಲ್ಲಿ ಚಾಳುಕ್ಯ ವಿಕ್ರಮ ವರ್ಷ ೨೦, ಯುವ, ಪುಷ್ಯ, ಬ. ಏಕಾದಶಿ, ಸೋಮವಾರ, ಉತ್ತರಾಯಣ ಸಂಕ್ರಾಂತಿಯ ಉಲ್ಲೇಖವಿದ್ದು, ಇದು ಕ್ರಿ.ಶ. ೨೫-೧೨-೧೦೯೫ರ ಮಂಗಳವಾರಕ್ಕೆ ಸರಿ ಹೊಂದುತ್ತದೆ. ಆದರೆ ಸಂಕ್ರಮಣವು ೨೪ನೆಯ ದಿನಾಂಕ ಬಂದಿದ್ದು ಅಂದು ಸೋಮಾವಾರವಾಗಿರುತ್ತದೆ.

ಹಿಂದೆ ಆಹವಮಲ್ಲನು ಕೋಟಿಹೋಮ ದಕ್ಷಿಣೆ ನಿಮಿತ್ತವಾಗಿ ಇನ್ನೂರು (ಮಹಾಜನ) ಜನರಿಗೆ ಮಾಣಿಕೇಶ್ವರ ಕೋಲಲ್ಲಿ ೧೧೩ ಮತ್ತರು ಭೂಮಿ ನೀಡಿದ. ಆದರೆ ಅದು ಇವರಿಗೆ ದಕ್ಕಿರಲಿಲ್ಲ. ಮುಂದೆ ತ್ರಿಭುವನಮಲ್ಲನು ಹಾವಿನಹಾಳು ಮತ್ತು ಕಲ್ಮಲೆಯನ್ನು ತ್ರಿಭೋಗಾಭ್ಯಂತರವಾಗಿ ನೀಡಿದ. ಅದರಲ್ಲಿ ಸರ್ವಕ್ರತು ವೆಣೆಯಣ ಭಟ್ಟೋಪಾಧ್ಯಾಯ

ಸೋಮಯಾಜಿಯೆಂಬುವವನು ತನ್ನ ಭಾಗವನ್ನು ರಾಮೇಶ್ವರ ದೇವರಿಗೆ ನೀಡಿದ. ಇನ್ನೊಂದು ದೇವರಿಗೆ (ಹೆಸರು ಅಳಿಸಿದೆ) ಹತ್ತು ಮತ್ತರು ನೀಡಿದ (ಕವಿಶಾ, ಸಂ.೭, ಸಂ.ದೇ ೧೧).

ನೀಲಕಂಠೇಶ್ವರ ದೇವಾಲಯದ ಸಮೀಪದ ಗೋಡೆಗೆ ಸೇರಿಸಿರುವ ಕಲ್ಲಿನಲ್ಲಿರುವ ಶಾಸನದಲ್ಲಿನ ಕಾಲವು ಜಗದೇಕಮಲ್ಲ ವರ್ಷ ೭, ರಕ್ತಾಕ್ಷಿ ಸಂವತ್ಸರ, ಶ್ರಾವಣ, ಶು. ೫ ಶುಕ್ರವಾರದ ಉಲ್ಲೇಖವಿದ್ದು, ಇದು ಕ್ರಿ.ಶ. ೭-೭-೧೧೪೪ರ ಶುಕ್ರವಾರಕ್ಕೆ ಸರಿಹೊಂದುತ್ತದೆ.

ಗೊಬ್ಬೂರಿನ ಉತ್ತರಕ್ಕಿರುವ ಕನಕಗಿರಿಯ ನಾಗಭೂಷಣದೇವರ ಪೂಜೆ ಪುನಸ್ಕಾರಕ್ಕೆ ಗೊಬ್ಬೂರಿನ ಮಾಲೆಗಾರ ಅರವತ್ತೊಕ್ಕಲು ಮತ್ತು ಬಿಲ್ಲ ಮುನ್ನೂರ್ವ್ವರು ಬಾಡುಕಾಯಿ ಮಾರಿದ ಹೆಡಗೆಗೆ ಅರವಾನ ಭತ್ತ ನೀಡಬೇಕೆಂದಿದೆ. ಇದನ್ನು ಹೊರಗೆ ಮಾರಿದಲ್ಲಿ ಬಿಲ್ಲಕಾಯ ಹೆಡಗೆಗೆ ಒಮ್ಮಾನ, ಉಪ್ಪಿನ ಹೆಡಗೆಗೆ ಅರವಾನ ಭತ್ತ ಕೊಡಬೇಕೆಂದು ತೀರ್ಮಾನಿಸುತ್ತಾರೆ. ಮಹಾಜನಗಳು ನಾಗಭೂಷಣದೇವರ ಸತ್ಯಕ್ಕೆ ಜೋಳವನ್ನು ಬಿಡುತ್ತಾರೆ (ಕವಿಶಾ, ಸಂ.೭, ಸಂ.ದೇ ೧೩).

ಗ್ರಾಮದ ಪೇಟೆ ಆಚಿಜನೇಯ ದೇವಾಲಯದ ತಳಹದಿಯಲ್ಲಿರುವ ಶಾಸನವು ಮೂರು ಭಾಗಗಳಲ್ಲಿದ್ದು ಶಾಸನದ ಬಹಳಷ್ಟು ಭಾಗವು ನಷ್ಟವಾಗಿದೆ. ಕಾಲದ ಉಲ್ಲೇಖವಿಲ್ಲ. ಆದಿಲ್‌ಶಾಹಿಗಳ ಅಚಿತಿಮ ಕಾಲದ್ದಿರಬೇಕು. ಕನ್ನಡ ಭಾಷೆಯು ಹೆಚ್ಚಿಗೆ ಉರ್ದುಮಯವಾಗಿದೆ. ಗೊಬ್ಬೂರ ಹೊಲದ ಬೆಳೆಯಲ್ಲಿನ ಬೆಳೆ ಪಾಲನ್ನು ಮಾಫು ಮಾಡಿದಂತೆ ತಿಳಿಯುತ್ತದೆ. ಕ್ರಿ.ಶ. ೧೭ನೆಯ ಶತಮಾನದ ಲಿಪಿಯಲ್ಲಿದೆ (ಕವಿಶಾ, ಸಂ.೭, ಸಂ. ದೇ ೧೪).

ಇದೇ ದೇವಾಲಯದ ಒಳಗೆ ಇರುವ ಮುನಿಯ ವಿಗ್ರಹದ ಮೇಲೆ ಶಾಸನವಿದೆ. ಇದು ಕ್ರಿ.ಶ. ೧೨-೧೩ನೆಯ ಶತಮಾನದ ಲಿಪಿಯಲ್ಲಿದ್ದು, ವಿಗ್ರಹದ ಸುತ್ತ ಬರೆಯಲಾಗಿದೆ. ಸಂಕರದಾಸಲಿಂಗ ಸನ್ಯಾಸಿ ಕೇಸವಪಂಡಿತನೆಂದಿದೆ (ಕವಿಶಾ, ಸಂ.೭, ಸಂ.ದೇ ೧೫).

ಇದೇ ಊರಿನ ಬಸದಿಯಲ್ಲಿದ್ದ ಶಾಸನದಲ್ಲಿನ ಕಾಲವು ಚಾಳುಕ್ಯ ವಿಕ್ರಮವರ್ಷ ೩೩, ಸರ್ವಧಾರಿ, ಮಾಘ, ಹುಣ್ಣಿಮೆ, ಸೋಮವಾರ, ಚಂದ್ರಗ್ರಹಣವೆಂದಿದ್ದು, ಇದು ಕ್ರಿ.ಶ. ೧೮-೧-೧೧೦೯ಕ್ಕೆ ಸರಿ ಹೊಂದುತ್ತದೆಯಾದರೂ ಆ ದಿನ ಚಂದ್ರಗ್ರಹಣವಿರುವುದಿಲ್ಲ.

ತ್ರಿಭುವನಮಲ್ಲನು ಜಯಂತೀಪುರದ ನೆಲೆವೀಡಿನಲ್ಲಿದ್ದಾಗ ಅಗ್ರಹಾರ ಹಿರಿಯ ಗೊಬ್ಬೂರ ನಖರಗಳು, ಕಮ್ಮಟದ (ಟಂಕಸಾಲೆ) ಅಧಿಕಾರಿಗಳು, ಕಮ್ಮಟಕಾರರು, ಊರಲ್ಲಿಯ ಬ್ರಹ್ಮ ಜಿನಾಲಯಕ್ಕೆ ತಾವು ಮಾರಿದ ವಸ್ತುಗಳ ಮೇಲಿನ ತೆರಿಗೆಯನ್ನು ಬಿಡುತ್ತಾರೆ. ಈ ಬಸದಿಯನ್ನು ನಗರ-ಜಿನಾಲಯವೆಂದೂ ಕರೆದಿದೆ (ಕವಿಶಾ, ಸಂ.೭, ಸಂ.ದೇ ೧೬). (ಈ ಶಾಸನವು ಈಗ ಹೈದರಾಬಾದಿನ ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯದಲ್ಲಿದೆ).

ಊರಿನ ಮಸೀದಿಯ ಆವರಣದಲ್ಲಿ ಇಟ್ಟಿರುವ ತುಂಡು ಶಾಸನದಲ್ಲಿ ಕಾಲದ ಉಲ್ಲೇಖವಿಲ್ಲ. ಹೊಲ್ಲಜೀಯನು ಗೊಜ್ಜೇಶ್ವರದೇವರಿಗೆ ಮತ್ತು ರಾಮನಾಥದೇವರಿಗೆ ದಾನವನ್ನು ಕೊಟ್ಟಂತೆ ತಿಳಿಯಬಹುದು, ಆದರೆ ಸ್ಪಷ್ಟವಿಲ್ಲ. ದೇವರ ದಾಸಿಮಯ್ಯನ ಉಲ್ಲೇಖವಿದೆ (ಕವಿಶಾ, ಸಂ.೭, ಸಂ.ದೇ ೧೭).

೮. ವೆಂಕಟೇಶ್ವರ ದೇವಾಲಯ

ಊರು	: ಗಬ್ಬೂರು	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ವೆಂಕಟೇಶ್ವರ	ಅಭಿಮುಖ	: ಉತ್ತರ
ಸ್ಥಳ	: ಏಳುಬಾವಿ ಕೆರೆದಂಡೆಯಲ್ಲಿ	ಸ್ಥಿತಿ	: ಮಧ್ಯಮ
ಕಾಲ	: ಕ್ರಿ.ಶ. ೧೩-೧೪ನೇ ಶತಮಾನ	ಸಂರಕ್ಷಣೆ	: ರಾ.ಪು.ಇ.

ಕಣಶಿಲೆಯಲ್ಲಿ ನಿರ್ಮಿಸಿರುವ ಈ ದೇವಾಲಯವು ವಿಶಿಷ್ಟ ತಳವಿನ್ಯಾಸವನ್ನು ಹೊಂದಿದೆ. ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ದಕ್ಷಿಣದಲ್ಲಿ ಪ್ರದಕ್ಷಿಣಾಪಥ ಮತ್ತು ಇನ್ನೊಂದು ಗರ್ಭಗೃಹ ಹಾಗೂ ಅಂತರಾಳವಿದೆ. ಇದಕ್ಕೆ ಪ್ರದಕ್ಷಿಣಾಪಥವಿಲ್ಲ, ನವರಂಗ ಮತ್ತು ಉತ್ತರದಲ್ಲಿ

ಮುಖಮಂಟಪಗಳಿವೆ. ನವರಂಗದ ಪಶ್ಚಿಮ ಬಾಗಿಲನ್ನು ಈಗ ಮುಚ್ಚಲಾಗಿದೆ. ಇದು ಸಂಕೀರ್ಣ ತಳವಿನ್ಯಾಸದ ಗುಡಿಯಾಗಿದೆ.

ಚೌಕಾಕಾರವಾಗಿರುವ ದಕ್ಷಿಣಾಭಿಮುಖ ಗರ್ಭಗೃಹದಲ್ಲಿ ವೆಂಕಟೇಶ್ವರನ ಸುಂದರ ಮೂರ್ತಿಶಿಲ್ಪವಿದೆ. ಅವನ ಮೇಲಿನ ಬಲ ಮತ್ತು ಎಡಗೈಗಳಲ್ಲಿ ಚಕ್ರ ಮತ್ತು ಶಂಖ ಹಾಗೂ ಕೆಳಗಿನ ಕೈಗಳು ಅಭಯ ಮತ್ತು ವರದ ಮುದ್ರೆಯಲ್ಲಿವೆ. ಅವನ ಬಳಿ ಗರುಡ ಮತ್ತು ಹನುಮಂತನ ಶಿಲ್ಪಗಳನ್ನು ಕೆತ್ತಲಾಗಿದೆ.

ವೆಂಕಟೇಶನ ಮೇಲೆ ಕೀರ್ತಿಮುಖವಿರುವ ಮಕರ ತೋರಣವಿದೆ. ಗರ್ಭಗೃಹದ ಬಾಗಿಲವಾಡದಲ್ಲಿ ಸರಳ, ಅಲಂಕರಣರಹಿತ ದ್ವಾರಶಾಖೆಗಳಿವೆ. ಶಾಖೆಯ ಕೆಳಭಾಗದಲ್ಲಿ ಪೂರ್ಣಕುಂಭಗಳನ್ನು ತೋರಲಾಗಿದೆ. ಲಲಾಟದಲ್ಲಿ ಗಜಲಕ್ಷ್ಮಿಯ ಮುಂದಿರುವ ಅಂತರಾಳದ ಬಾಗಿಲವಾಡದಲ್ಲಿ ಎಲೆ–ಬಳ್ಳಿಗಳಿರುವ ದ್ವಾರಶಾಖೆಯಿದೆ. ಅದರ ಇಕ್ಕೆಲಗಳಲ್ಲಿ ಜಾಲ–ವಾತಾಯನಗಳನ್ನು(ಜಾಲಾಂದ್ರ) ಇರಿಸಲಾಗಿದೆ. ಶಾಖೆಯ ಕೆಳಭಾಗದಲ್ಲಿ ವೈಷ್ಣವ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಲಲಾಟದಲ್ಲಿ ಯಾವುದೇ ಉಬ್ಬು ಶಿಲ್ಪವಿಲ್ಲ. ಸೂರಿನಲ್ಲಿ ಕಮಲದ ಮೊಗ್ಗಿನ ಅಲಂಕರಣೆಯಿದೆ.

ಪೂರ್ವಾಭಿಮುಖವಾಗಿರುವ ಗರ್ಭಗೃಹವು ಚೌಕಾಕಾರವಾಗಿದ್ದು, ಅದರಲ್ಲಿ ಸು.೧.೫ ಮೀಟರ್ ಎತ್ತರದ ಲಿಂಗವಿದೆ. ಗರ್ಭಗೃಹದ ಉತ್ತರ ಮತ್ತು ಪಶ್ಚಿಮದ ಭಿತ್ತಿಯಲ್ಲಿ ಕಲ್ಲಿನ ಮುಂಚಾಚಿದೆ. ಸೂರಿನ ಭಾಗದಲ್ಲಿ ಕಮಲದ ಮೊಗ್ಗಿನ ಅಲಂಕರಣೆಯಿದೆ. ಗರ್ಭಗೃಹದ ಬಾಗಿಲವಾಡವು ದಕ್ಷಿಣಾಭಿಮುಖ ಗರ್ಭಗೃಹದ ಬಾಗಿಲವಾಡದಂತೆಯೇ ಇದೆ.

ಇದರ ಮುಂದಿರುವ ಅಂತರಾಳದ ಬಾಗಿಲವಾಡದಲ್ಲಿ ಎಲೆ–ಬಳ್ಳಿಗಳ ಮತ್ತು ಸ್ತಂಭ ಶಾಖೆಗಳಿವೆ. ಇದರ ಇಕ್ಕೆಲಗಳಲ್ಲಿ ಜಾಲಂದ್ರಗಳಿವೆ. ಶಾಖೆಯ ಕೆಳಭಾಗದಲ್ಲಿ ಛಾಮರಧಾರಣಿಯರ ಉಬ್ಬುಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಆಯತಾಕಾರದ ಈ ಅಂತರಾಳ ಭಾಗದಲ್ಲಿ ಸು. ೧.೫.ಮೀ. ಎತ್ತರದ ನಂದಿಯ ಶಿಲ್ಪವಿದೆ.

ದಕ್ಷಿಣಾಭಿಮುಖ ಗರ್ಭಗೃಹದ ಸುತ್ತ ಪ್ರದಕ್ಷಿಣಾಪಥವಿದೆ. ಅದರಲ್ಲಿ ಎರಡು ದ್ವಾರಗಳಿವೆ. ಅವುಗಳಲ್ಲಿ ಪತ್ರ-ಶಾಖೆ ಮತ್ತು ಸ್ತಂಭ ಶಾಖೆಗಳನ್ನು ಕಾಣಬಹುದು. ಇದರೊಂದಿಗೆ ಛಾಮರಧಾರಿಣಿಯರ ಉಬ್ಬುಶಿಲ್ಪಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಪ್ರದಕ್ಷಿಣಾಪಥದಲ್ಲಿರುವ ಕಕ್ಷಾಸನದಲ್ಲಿ ಕಂಬಗಳಿವೆ.

ಭಿತ್ತಿ ಮತ್ತು ಪ್ರಸ್ತರ ಭಾಗಗಳು ಕೊಡುವ ಸ್ಥಳಗಳಲ್ಲಿ, ಭಿತ್ತಿಯಲ್ಲಿ ಕೆಲವು ರಂಧ್ರಗಳನ್ನು ಮಾಡಲಾಗಿದೆ. ಇದರ ಮೂಲಕ ಗಾಳಿ ಮತ್ತು ಬೆಳಕು ಹಾಯಲು ಅನುಕೂಲವಾಗುತ್ತದೆ. ಗರ್ಭಗೃಹದ ಅಧಿಷ್ಠಾನ ಭಾಗದಲ್ಲಿ ಉಪಾನ ಮತ್ತು ಕೂಡು ಭಾಗಗಳನ್ನು ಕಾಣಬಹುದು. ಭಿತ್ತಿಯು ಸರಳವಾಗಿದ್ದು ಯಾವುದೇ ಅಲಂಕರಣಗಳಿಲ್ಲ. ಕಕ್ಷಾಸನದಲ್ಲಿ ೨೭ ಪೀಠಗಳಿವೆ. ಪ್ರತಿ ಭಾಗದಲ್ಲಿ ರಂಧ್ರಗಳು ಇರುವಂತೆ ಕೆತ್ತಲಾಗಿದೆ. ಅವುಗಳಲ್ಲಿ ಶಿಲ್ಪಗಳನ್ನು ಇರಿಸಲು ಅನುಕೂಲವಾಗುತ್ತದೆ.

ನವರಂಗದ ಮಧ್ಯೆಯಿರುವ ನಾಲ್ಕು ಕಂಬಗಳ ಕೆಳಗೆ ವೇದಿಕೆಯಿದೆ. ಇದಕ್ಕೆ ಹೊಂದಿಕೊಂಡಂತೆ ಕಕ್ಷಾಸನದಲ್ಲಿ ಕಂಬಗಳನ್ನು ಇರಿಸಲಾಗಿದೆ. ಮಧ್ಯದಲ್ಲಿರುವ ನಾಲ್ಕು ಕಂಭಗಳು ಘನಾಕಾರವಾಗಿದ್ದು, ಅದರಲ್ಲಿ ಕೂಡು-ಕೀರ್ತಿ ಮುಖಗಳಿವೆ. ಕಂಬಗಳಲ್ಲಿ ಪ್ರಾಣಿಗಳು, ಗಿಡಮರಗಳು, ನರಸಿಂಹ, ಗಣಪತಿ, ಸೂರ್ಯ, ಸರಸ್ವತಿ, ವೇಣುಗೋಪಾಲ, ಮುಂತಾದ ದೇವತೆಗಳ ಹಾಗೂ ಅಲಂಕರಣೆಗಳ ಉಬ್ಬುಶಿಲ್ಪಗಳಿವೆ. ಕಕ್ಷಾಸನದಲ್ಲಿರುವ ಕಂಬಗಳು ದುಂಡಗಿದ್ದು, ಅದರಲ್ಲಿಯೂ ಅಲಂಕಾರಿಕ ಕೆತ್ತನೆಗಳಿವೆ.

ಕಕ್ಷಾಸನದ ಮೂಲೆಗಳಲ್ಲಿರುವ ಕಂಬಗಳು ಚೌಕಾಕಾರವಾಗಿವೆ. ಸಭಾಮಂಟಪ ಅಥವಾ ನವರಂಗದ ಸುತ್ತ ಕಕ್ಷಾಸನವಿದೆ. ಇದು ಮುಖಮಂಟಪದವರೆಗೆ ವಿಸ್ತರಿಸಿ, ಪ್ರದಕ್ಷಿಣಾಪಥದಲ್ಲಿ ಮುಂದುವರಿಯುತ್ತದೆ. ಇಟ್ಟಿಗೆಯಿಂದ ನಿರ್ಮಿಸಿರುವ ಗೋಡೆಯು ಪಶ್ಚಿಮ ದ್ವಾರವನ್ನು ಮುಚ್ಚಿದೆ. ಅತ್ಯಂತ ಸುಂದರ ಸೂರ್ಯನ ಶಿಲ್ಪವನ್ನು ಇಲ್ಲಿ ಇರಿಸಲಾಗಿದೆ.

ಕಕ್ಷಾಸನದಲ್ಲಿ ಎರಡು ದೇವಕೋಷ್ಟಗಳು ಪೂರ್ವ ಭಿತ್ತಿಯಲ್ಲಿವೆ. ಇವು ಆಳವಾದ ಆಯತಾಕಾರ ರಚನೆಗಳಾಗಿವೆ. ಇವುಗಳಿಗೆ ಬಾಗಿಲುಗಳನ್ನು ಅಳವಡಿಸಲಾಗಿದ್ದು ಅಲ್ಲಿ ದ್ವಾರಶಾಖೆಗಳನ್ನು ಕಾಣಬಹುದು. ಸರಳ, ಸ್ತಂಭ ಮತ್ತು ಜಾಲಂದ್ರ ಶೈಲಿಯ ಮೂರು ಶಾಖೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ.

ಇದರ ಮೇಲ್ಭಾಗದಲ್ಲಿ ಶಿಖರ ಮಾದರಿಯ ರಚನೆಗಳಿವೆ. ದಕ್ಷಿಣ ಭಿತ್ತಿಯಲ್ಲಿ, ಅಂತರಾಳದ ಇಕ್ಕೆಲಗಳಲ್ಲಿ ಎರಡು ದೇವಕೋಷ್ಟಗಳಿವೆ. ಪೂರ್ವ ಭಾಗದಲ್ಲಿರುವ ದೇವಕೋಷ್ಟದಲ್ಲಿ ಅಂಜಲಿ ಮುದ್ರೆಯಲ್ಲಿರುವ ಹನುಮಂತ ಇದ್ದರೆ, ಇನ್ನೊಂದರಲ್ಲಿ ವಿಷ್ಣು-ಲಕ್ಷ್ಮೀ ಮತ್ತು ಹಾರುತ್ತಿರುವ ಗರುಡನ ಮೂರ್ತಿಶಿಲ್ಪಗಳಿವೆ.

ಮುಖಮಂಟಪದಲ್ಲಿರುವ ದ್ವಾರವು ಗಿಡ್ಡವಾಗಿದ್ದು ಅದರಲ್ಲಿರುವ ದ್ವಾರಶಾಖೆಯು ಲತಾ ಮತ್ತು ಸ್ತಂಭ ಶಾಖೆಗಳನ್ನು ಒಳಗೊಂಡಿದೆ. ಶಾಖೆಯ ಕೆಳಭಾಗದಲ್ಲಿ ಛಾಮರಧಾರಿಣಿಯರಿದ್ದಾರೆ. ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ. ಅದರ ಮೇಲ್ಭಾಗದ ತಲೆಯು ಭಗ್ನಗೊಂಡಿದೆ. ಮುಖಮಂಟಪದ ಸೂರಿನಲ್ಲಿ ಹೂವಿನ ಅಲಂಕರಣೆಯಿದೆ.

ನವರಂಗದ ಗೋಲಾಕಾರ ಸೂರಿನ ಭಾಗವನ್ನು ಅತ್ಯಂತ ಕಲಾತ್ಮಕವಾಗಿ ರಚಿಸಲಾಗಿದ್ದು, ಸೂಕ್ಷ್ಮ ಕೆತ್ತನೆಗಳಿರುವ ಅಲಂಕರಣೆಗಳನ್ನು ಹೊಂದಿದೆ. ಅದರಲ್ಲಿ ಒಂದರ ಒಳಗೆ ಒಂದು ವರ್ತುಲಗಳಿರುವಂತೆ ಆರು ವರ್ತುಲಗಳನ್ನು ರಚಿಸಿದ್ದಾರೆ. ಕೆಳಭಾಗದ ವರ್ತುಲಗಳು ಸರಳವಾಗಿವೆ.

ಎರಡನೆಯ ವರ್ತುಳದಲ್ಲಿ ಮುಂಚಾಚುಗಳ ಅಲಂಕರಣೆ ಹಾಗೂ ಮೂರನೆಯದರಲ್ಲಿ ಹೂವುಗಳ ಮತ್ತು ನೃತ್ಯ ಹಾಗೂ ವಾದ್ಯಗಾರರ ಕೆತ್ತನೆಗಳಿವೆ. ಇವುಗಳ ಮಧ್ಯದಲ್ಲಿ ಸೂರಿನಿಂದ ಇಳಿಬೀಳುತ್ತಿರುವಂತೆ ಹೂವಿನ (ಗೊಂಚಲು), ಅಲಂಕರಣೆಯಿದೆ. ನವರಂಗದ ಉಳಿದ ಅಂಕಣಗಳ ಸೂರಿನ ಭಾಗಗಳಲ್ಲಿ ಕಮಲದ ಮೊಗ್ಗಿನ ಅಲಂದರಣೆಗಳನ್ನು ಕಾಣಬಹುದು.

ನವರಂಗ ಮತ್ತು ಮುಖಮಂಟಪಗಳ ಅಧಿಷ್ಠಾನ ಭಾಗಗಳಲ್ಲಿ ಜಗತಿ, ಪದ್ಮ ಮತ್ತು ಕಂಠವನ್ನು ಕಾಣಬಹುದು. ಸಭಾಮಂಟಪದ ಕೆಳಭಾಗದ ಭಿತ್ತಿಯಲ್ಲಿ ಕೋಷ್ಟಗಳನ್ನು ರಚಿಸಿದ್ದರೆ ಅದರ ಮೇಲೆ ಜಾಲಾಂದ್ರಗಳನ್ನು ಇರಿಸಲಾಗಿದೆ. ಇವುಗಳನ್ನು ಪಾಲಿಶ್ ಮಾಡಲಾಗಿದೆ.

ಇಲ್ಲಿರುವ ಕೋಷ್ಟ ಅಥವಾ ಗುಡಿಯ ಕಿರು ಪ್ರತಿಕೃತಿಗಳಲ್ಲಿ ಸ್ತ್ರೀಯರ ಮತ್ತು ವ್ಯಕ್ತಿಗಳ, ನೃತ್ಯಗಾರ್ತಿಯರ ಉಬ್ಬುಶಿಲ್ಪಗಳಿವೆ. ಜಾಲಾಂದ್ರಗಳಲ್ಲಿ ಚೌಕಾಕಾರದ ರಂಧ್ರಗಳನ್ನು ಮಾಡಲಾಗಿದೆ. ಎರಡು ರಂಧ್ರಗಳ ನಡುವಿನ ಸ್ಥಳದಲ್ಲಿ ಹೂವಿನ ಅಲಂಕರಣೆಯ ಕೆತ್ತನೆಗಳಿವೆ. ಉತ್ತರ ದ್ವಾರದ ಇಕ್ಕೆಲಗಳಲ್ಲಿ ಸ್ತ್ರೀ ದ್ವಾರಪಾಲಕರ ಉಬ್ಬುಶಿಲ್ಪಗಳಿವೆ. ಮುಖಮಂಟಪ ಮತ್ತು ಸಭಾಮಂಟಪದ ಪ್ರಸ್ತರ ಭಾಗದಲ್ಲಿ ಇಳಿಜಾರು ಮುಂಚಾಚು ಇದೆ.

ಪೂರ್ವಾಭಿಮುಖ ಗರ್ಭಗೃಹದ ಅಧಿಷ್ಠಾನದಲ್ಲಿ ಜಗತಿ, ಪದ್ಮ, ಕುಮುದ ಮತ್ತು ಕಂಠ ಭಾಗಗಳಿವೆ. ಪ್ರನಾಳದ ಹೊರಭಾಗದಲ್ಲಿ ಓರ್ವ ವ್ಯಕ್ತಿ ಕುಳಿತು ಅದನ್ನು ಹೊತ್ತಿರುವಂತೆ ತೋರಲಾಗಿದೆ. ಅವನ ಇಕ್ಕೆಲಗಳಲ್ಲಿ ಇಬ್ಬರು ಸ್ತ್ರೀಯರಿದ್ದಾರೆ. ಅಭಿಷೇಕದ ನೀರು ಆ ವ್ಯಕ್ತಿಯ ತಲೆಯ ಮೇಲೆ ಬೀಳುವಂತೆ ಕೆತ್ತಲಾಗಿದೆ. ಶಿಲ್ಪಶಾಸ್ತ್ರಗಳಲ್ಲಿ ಉಲ್ಲೇಖಿಸಿರುವಂತೆ, ಈ ವ್ಯಕ್ತಿಯನ್ನು ಚಂಡಿಕೇಶ ಅಥವಾ ಚಂಡೇಶನೆಂದು ಗುರುತಿಸಬಹುದು. ಭಿತ್ತಿಯ ಭಾಗವನ್ನು ನಯಗೊಳಿಸಲಾಗಿದೆ.

ಇಲ್ಲಿರುವ ಕೋಷ್ಟಗಳನ್ನು ಎರಡು ಬಾರಿ ಪುನರಾವರ್ತಿಸಲಾಗಿದೆ ಹಾಗೂ ಅದರ ಕೆಳಭಾಗಗಳಲ್ಲಿ ಆನೆಗಳ ಸಾಲಿನ ಕೆತ್ತನೆಯಿದೆ. ಇದರ ದ್ವಾರಶಾಖೆಯಲ್ಲಿ ಲತಾಸುರುಳಿಯಿದ್ದು ಲಲಾಟದವರೆಗೆ ಮುಂದುವರಿಯುತ್ತದೆ. ಅದರ ಮೇಲ್ಭಾಗದಲ್ಲಿ ದ್ರಾವಿಡ ಮಾದರಿಯ ಶಿಖರವಿದೆ. ಪ್ರದಕ್ಷಿಣಾಪಥದ ಹೊರಭಿತ್ತಿಯು ದಕ್ಷಿಣ ಗರ್ಭಗೃಹದ ಭಿತ್ತಿಯನ್ನು ಹೋಲುತ್ತದೆ. ಕೋಷ್ಟದಲ್ಲಿರುವ ದ್ವಾರಶಾಖೆಗಳಲ್ಲಿ ಕೆಲವು ವ್ಯತ್ಯಾಸಗಳನ್ನು ಕಾಣಬಹುದು. ದೇವಾಲಯಕ್ಕೆ ಶಿಖರವಿಲ್ಲ. ಒಟ್ಟಾರೆಯಾಗಿ ಅತ್ಯಂತ ಸೂಕ್ಷ್ಮ ಕೆತ್ತನೆ ಮತ್ತು ಅಲಂಕರಣೆಗಳಿಂದ ಕೂಡಿದ ವಿಶಿಷ್ಟ ತಳವಿನ್ಯಾಸ ಹೊಂದಿದದೇವಾಲಯವಿದಾಗಿದೆ. (ನೋಡಿ ಚಿತ್ರಗಾರ, ಹೆಚ್. ಎನ್, ಪೂರ್ವೋಕ್ತ, ಪು. ೩೫-೩೮).

೯) ಹರಿಹರ ದೇವಾಲಯ

ಊರು	: ಗಬ್ಬೂರು	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಹರಿಹರ	ಅಭಿಮುಖ	: ಪೂರ್ವ
ಸ್ಥಳ	: ವೆಂಕಟೇಶ್ವರ ಗುಡಿಯ ಪಕ್ಕ	ಸ್ಥಿತಿ	: ಮಧ್ಯಮ
ಕಾಲ	: ಕ್ರಿ.ಶ. ೧೨-೧೩ನೇ ಶತಮಾನ	ಸಂರಕ್ಷಣೆ	: -

ಕಣಶಿಲೆಯ ಈ ತ್ರಿಕೂಟ ದೇವಾಲಯದಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳಗಳು ಮತ್ತು ನವರಂಗವಿದೆ. ಗರ್ಭಗೃಹಗಳು ದಕ್ಷಿಣ, ಪಶ್ಚಿಮ ಮತ್ತು ಉತ್ತರಾಭಿಮುಖವಾಗಿದೆ. ಅವುಗಳು ಚೌಕಾಕಾರವಾಗಿದ್ದು ಅವುಗಳಲ್ಲಿ ಯಾವುದೇ ಮೂರ್ತಿಶಿಲ್ಪಗಳಿಲ್ಲ.

ದಕ್ಷಿಣಾಭಿಮುಖ ಗರ್ಭಗೃಹದ ಅಂತರಾಳದ ಬಾಗಿಲ ಶಾಖೆಯಲ್ಲಿ ಪೂರ್ಣಕುಂಭಗಳ ಕೆತ್ತನೆಯು ಕೆಳಭಾಗದಲ್ಲಿದೆ. ಕಂಬಗಳನ್ನು ಮತ್ತು ಭಿತ್ತಿಯ ಭಾಗಗಳನ್ನು ಬಳಸಿ ಜಾಲಂದ್ರಗಳನ್ನು ಅಳವಡಿಸಲಗಿದೆ. ಗರ್ಭಗೃಹಗಳ ಬಾಗಿಲವಾಡವು ಸರಳ ಅಲಂಕಾರಿಕ ಶಾಖೆಗಳನ್ನು ಹೊಂದಿವೆ. ಪಶ್ಚಿಮ ಗರ್ಭಗೃಹದ ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ.

ನವರಂಗದಲ್ಲಿ ಚೌಕಾಕಾರದ ಘನಾಕೃತಿಯ ನಾಲ್ಕು ಕಂಬಗಳು ಸೂರನ್ನು ಆಧರಿಸಿವೆ. ದೇವಾಲಯದ ಕೆಲವು ಹೊರ ಭಾಗಗಳು ಮಣ್ಣಿನಿಂದ ಆವೃತವಾಗಿದೆ. ದೇವಾಲಯದ ವಾಸ್ತು ರಚನೆಯನ್ನು ಗಮನಿಸಿದರೆ, ಈ ದೇವಾಲಯವು ದ್ವಿಕೂಟವಾಗಿದ್ದು ಪಶ್ಚಿಮ ಭಾಗದಲ್ಲಿ ಗರ್ಭಗೃಹದ ಜೋಡಣೆಯಿಂದ ತ್ರಿಕೂಟ ರಚನೆಯಾಗಿ ಮಾರ್ಪಡಿಸಲಾಗಿದೆ. ಇದರಿಂದ ದೇವಾಲಯಕ್ಕೆ ವಿಶಿಷ್ಟ ತಳವಿನ್ಯಾಸವು ಒದಗಿದೆ. ಶಿಖರವಿಲ್ಲದ ದೇವಾಲಯವು ಶಿಥಿಲಾವಸ್ಥೆಯಲ್ಲಿದೆ.

೧೦) ನೀಲಕಂಠೇಶ್ವರ ದೇವಾಲಯ

ಊರು	: ಗಬ್ಬೂರು	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ನೀಲಕಂಠೇಶ್ವರ	ಅಭಿಮುಖ	: ಪಶ್ಚಿಮ
ಸ್ಥಳ	: ಊರ ಅಗಸಿಯ ಪಕ್ಕ	ಸ್ಥಿತಿ	: ಮಧ್ಯಮ
ಕಾಲ	: ಕ್ರಿ.ಶ. ೧೨–೧೩ನೇ ಶತಮಾನ	ಸಂರಕ್ಷಣೆ	: –

ಕಣಶಿಲೆಯಲ್ಲಿ ನಿರ್ಮಿಸಿರುವ ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಹೊರಭಾಗದಲ್ಲಿ ಅಲಂಕೃತ ಪ್ರಾಂಗಣವಿದೆ. ಚೌಕಾಕರದ ಗರ್ಭಗೃಹದಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗೃಹದ ಬಾಗಿಲವಾಡದ ಶಾಖೆಯು ಸರಳವಾಗಿದ್ದು, ಅಧಿಕ ಅಲಂಕರಣೆಗಳು ಇಲ್ಲ. ಲಲಾಟ ಭಾಗದಲ್ಲಿ ಐದು ಕಿರು ಶಿಖರಗಳ ರಚನೆಯಿದ್ದು ಅದರ ಕೆಳ ಭಾಗದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವಿದೆ.

ಶಾಖೆಯ ಕೆಳಭಾಗದಲ್ಲಿ ಪೂರ್ಣಕುಂಭಗಳ ಕೆತ್ತನೆಯಿದೆ. ಗರ್ಭಗೃಹದ ಮುಂದೆ ಅಂತರಾಳವಿದ್ದು, ಅದರ ಮುಂಭಾಗದಲ್ಲಿ ನವರಂಗವಿದೆ. ನವರಂಗ ಭಾಗದ ಮಧ್ಯೆ ಘನಾಕೃತಿಯ ನಾಲ್ಕು ಚೌಕ ಕಂಬಗಳಿವೆ. ನೆಲಹಾಸಿನಲ್ಲಿ ವೇದಿಕೆಯಿದೆ. ಈ ಕಂಬಗಳಿಗೆ ಸಮಾನಾಂತರವಾಗಿ ಮತ್ತೆರಡು ಕಂಬಗಳನ್ನು ಒದಗಿಸಲಾಗಿದೆ. ಪ್ರಾಯಶಃ ಮೇಲಿನ ತೊಲೆಗಳು ಭಗ್ನಗೊಳ್ಳುತ್ತಿರುವ ಕಾರಣ, ದೇವಾಲಯ ನಿರ್ಮಿಸುವಾಗಲೇ ದೇವಾಲಯದ ಬಲವರ್ಧನೆಗಾಗಿ ಈ ಕಂಬಗಳನ್ನು ಬಳಸಲಾಗಿದೆ. ವಿತಾನದಲ್ಲಿ ಭುವನೇಶ್ವರಿಯನ್ನು ಕಾಣಬಹುದು.

ನವರಂಗದ ಮುಂಭಾಗದಲ್ಲಿ ಅರ್ಧಮಂಟಪವಿದೆ. ಹೊರ ಭಾಗದಲ್ಲಿ ಪ್ರಾಂಗಣದ ಕಿರು ಗೋಡೆಯಿದ್ದು ಅದರಲ್ಲಿ ಎರಡು ಪ್ರವೇಶಗಳನ್ನು ರಚಿಸಲಾಗಿದೆ. ದೇವಾಲಯವನ್ನು ಎತ್ತರದ ಕಟ್ಟೆಯ ಮೇಲೆ ನಿರ್ಮಿಸಿದ್ದು, ಅರ್ಧಮಂಟಪ ಭಾಗವನ್ನು ಮೆಟ್ಟಿಲುಗಳ ಮೂಲಕ ಪ್ರವೇಶಿಸಬೇಕು. ಮೆಟ್ಟಿಲುಗಳ ಇಕ್ಕೆಲಗಳಲ್ಲಿ ಎರಡು ಆನೆಗಳ ಶಿಲ್ಪವನ್ನು (ಹಸ್ತಿ ಹಸ್ತಾ)

ಇರಿಸಲಾಗಿದೆ. ಅವುಗಳಿಗೆ ಬಣ್ಣವನ್ನು ಹಚ್ಚಲಾಗಿದೆ. ದೇವಾಲಯಕ್ಕೆ ಕಟ್ಟೆಯೇ ಅಧಿಷ್ಠಾನ ಭಾಗವಾಗಿದೆ. ದೇವಾಲಯಕ್ಕೆ ಶಿಖರವಿಲ್ಲ. (ನೋಡಿ ಚಿತ್ರಗಾರ, ಹೆಚ್. ಎನ್, ಪೂರ್ವೋಕ್ತ, ಪು. ೩೯–೪೧).

೧೧) ಹನುಮಂತ ದೇವಾಲಯ

ಊರು	: ಗಬ್ಬೂರು	ಶೈಲಿ	: ಕಲ್ಯಾಣ ಚಾಲುಕ್ಯ
ಸ್ಮಾರಕ	: ಹನುಮಂತ	ಅಭಿಮುಖ	: ಪಶ್ಚಿಮ
ಸ್ಥಳ	: ನೀಲಕಂಠೇಶ್ವರ ಗುಡಿಯ ಬಳಿ	ಸ್ಥಿತಿ	: ಮಧ್ಯಮ
ಕಾಲ	: ಕ್ರಿ.ಶ. ೧೭–೧೮ನೇ ಶತಮಾನ	ಸಂರಕ್ಷಣೆ	: ರಾ.ಪು.ಇ.

ವಿಶಿಷ್ಟ ತಳವಿನ್ಯಾಸವನ್ನು ಹೊಂದಿರುವ ದೇವಾಲಯವಿದಾಗಿದೆ. ಆಲಯದಲ್ಲಿ ಆಯತಾಕಾರವಾಗಿರುವ ಗರ್ಭಗೃಹವಿದೆ. ಅದರ ಸುತ್ತಲೂ ಪ್ರದಕ್ಷಿಣಾಪಥವನ್ನು ನಿರ್ಮಿಸಲಾಗಿದೆ. ಮಂಟಪದಾಕಾರದಲ್ಲಿರುವ ವಾಸ್ತು ನಿರ್ಮಿತಿಯ ಮಧ್ಯೆ ಗರ್ಭಗೃಹದ ಬಾಗಿಲವಾಡದ ಶಾಖೆಗಳಲ್ಲಿ ಕೆಲವು ಅಲಂಕರಣೆಗಳನ್ನು ಕಾಣಬಹುದು.

ಭಾಗಿಲವಾಡದ ಇಕ್ಕೆಲಗಳಲ್ಲಿ ಜಾಲಾಂದ್ರಗಳಿವೆ. ನವರಂಗದ ಉತ್ತರ ಭಿತ್ತಿಯಲ್ಲಿ ಯೋಗಿಯ ಉಬ್ಬುಶಿಲ್ಪವಿದೆ. ಶಿಲ್ಪದ ಸುತ್ತು ಕ್ರಿ.ಶ. ೧೨–೧೩ನೇ ಶತಮಾನದ ಲಿಪಿಯಲ್ಲಿ ಶಂಕರದಾಸಲಿಂಗ ಸನ್ಯಾಸಿ ಕೇಶವ ಪಂಡಿತ ಎಂದಿದೆ. ಶಾಸನದ ಕೆಳಗೆ ದೇವಕೋಷ್ಟವಿದೆ. ಅದರ ಪಕ್ಕದಲ್ಲಿ ಒಂದು ವೀರಗಲ್ಲು ಇದೆ. ಮಂಟಪದ ಒಳಭಿತ್ತಿಯು ಸರಳವಾಗಿದೆ. ಒಂದು ದೇವಕೋಷ್ಟದಲ್ಲಿ ಗಣಪತಿಯ ಶಿಲ್ಪವಿದೆ. ನವರಂಗದಲ್ಲಿ ಘನಾಕೃತಿಯ ನಾಲ್ಕು ಕಂಬಗಳಿವೆ. \

ದೇವಾಲಯವು ಎತ್ತರದ ಕಟ್ಟೆಯ ಮೇಲಿದೆ. ಆಲಯವನ್ನು ಕೆಲವು ಮೆಟ್ಟಿಲುಗಳ ಮೂಲಕ ಪ್ರವೇಶಿಸಬಹುದು. ದೇವಾಲಯಕ್ಕೆ ಶಿಖರವಿಲ್ಲ. ದೇವಾಲಯದ ಮುಂದೆ ಆವರಣವಿದ್ದು ಅಲ್ಲಿ ಧ್ವಜ ಸ್ತಂಭವಿದೆ. ದೇವಾಲಯದ ಆವರಣವನ್ನು ಕಿರುದ್ವಾರದ ಮೂಲಕ

ಪ್ರವೇಶ ಪಡೆಯಬೇಕು. ದೇವಾಲಯದ ಅಧಿಷ್ಠಾನ ಭಾಗದಲ್ಲಿ ವಜ್ರಾಕೃತಿ ಕೆತ್ತನೆಗಳನ್ನು ಕಾಣಬಹುದು (ನೋಡಿ ಚಿತ್ರಗಾರ, ಹೆಚ್. ಎನ್, ಪೂರ್ವೋಕ್ತ, ಪು. ೪೨-೪೪).

೧) **ಛಾಮರಧಾರಿ**

ಈ ಶಿಲ್ಪವು ೧೨ ಮತ್ತು ೧೩ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಗಬ್ಬೂರಿನ ವೆಂಕಟೇಶ್ವರ ದೇವಸ್ಥಾನದ ಸುತ್ತಲೂ ದ್ವಾರಶಾಖೆಗಳಲ್ಲಿ ಛಾಮರಧಾರಿ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಈ ಶಿಲ್ಪವು ಅಸ್ಪಷ್ಟತೆಯಿಂದ ಕೂಡಿದ್ದು, ಈ ಶಿಲ್ಪದಲ್ಲಿ ಛಾಮರದಾರಿಯು, ಛಾಮರವನ್ನು ಹಿಡಿದು ನಿಂತ ಭಂಗಿಯಲ್ಲಿರುವುದನ್ನು ಕಾಣಬಹುದು. ಈ ಶಿಲ್ಪದಲ್ಲಿ ನಿಂತಿರುವ ಭಂಗಿಯು ವಿಶಿಷ್ಠವಾಗಿದೆ. ಈ ಶಿಲ್ಪವು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ಕೆತ್ತಲಾಗಿದೆ.

೨) **ಛಾಮರಧಾರಿ ಮಹಿಳೆ**

ಈ ಶಿಲ್ಪವು ದೇವದುರ್ಗ ತಾಲ್ಲೂಕಿನ, ಗಬ್ಬೂರಿನ ವೆಂಕಟೇಶ್ವರ ದೇವಸ್ಥಾನದಲ್ಲಿ ಕ್ರಿ.ಶ. ೧೨ ಮತ್ತು ೧೩ನೇ ಶತಮಾನದಲ್ಲಿ ಕೆತ್ತಲಾಗಿದ್ದು, ಈ ಶಿಲ್ಪವು ಕಲ್ಯಾಣ ಚಾಲುಕ್ಯರ ಶೈಲಯಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ವೆಂಕಟೇಶ್ವರ ದೇವಸ್ಥಾನದ ದ್ವಾರಶಾಖೆಗಳಲ್ಲಿ ಛಾಮರಧಾರಿಯನ್ನು ಓಡಿದ ಮಹಿಳೆಯನ್ನು ಕೆತ್ತಲಾಗಿದೆ. ಶಿಖರ ಗರ್ಭಗೃಹದ ಬಾಗಿಲವಾಡದ ದ್ವಾರಶಾಖೆಗಳಲ್ಲಿ ಈ ಶಿಲ್ಪವನ್ನು ಕೆತ್ತಲಾಗಿದೆ.

ಛಾಮರಧಾರಿಯನ್ನು ಓಡಿದ ಮಹಿಳೆಯು ವಿಶಿಷ್ಠ ನಿಂತಿರುವ ಭಂಗಿಯಲ್ಲಿರುವುದನ್ನು ಕಾಣಬಹುದು. ಈ ಶಿಲ್ಪವು ಉಬ್ಬು ಶಿಲ್ಪದ ಮಾದರಿಯಲ್ಲಿ ಕೆತ್ತಲಾಗಿದ್ದು, ಅಸ್ಪಷ್ಟತೆಯಿಂದ ಕೂಡಿದೆ.

೩.) **ಛಾಮರದಾರಿ ಮಹಿಳೆ**

ಈ ಶಿಲ್ಪವು ದೇವದುರ್ಗ ತಾಲ್ಲೂಕಿನ ಗಬ್ಬೂರಿನ ವೇಂಕಟೇಶ್ವರ ದೇವಸ್ಥಾನದಲ್ಲಿ ಕ್ರಿ.ಶ. ೧೨ ಮತ್ತು ೧೩ನೇಯ ಶತಮಾನದಲ್ಲಿ ಕೆತ್ತಲಾಗಿದ್ದು, ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ

ಕೆತ್ತಲಾಗಿದೆ. ಈ ಶಿಲ್ಪವು ವೆಂಕಟೇಶ್ವರ ದೇವಸ್ಥಾನದ ದ್ವಾರಶಾಖೆಗಳಲ್ಲಿ ಛಾಮರಧಾರಿಯನ್ನು ಹಿಡಿದ ಮಹಿಳೆಯನ್ನು ಕೆತ್ತಲಾಗಿದೆ. ಈ ಶಿಲ್ಪವು ಉಬ್ಬು ಶಿಲ್ಪದ ಮಾದರಿಯಲ್ಲಿದ್ದು, ಅಸ್ಪಷ್ಟತೆಯಿಂದ ಕೆತ್ತಲಾಗಿದೆ. ಈ ಶಿಲ್ಪವು ಮರಳು ಉಸಿಕಿನ ಕಲ್ಲಿನಲ್ಲಿ ಕೆತ್ತಲಾಗಿದೆ.

೪) ಬ್ರಹ್ಮ

ಈ ಶಿಲ್ಪವು ದೇವದುರ್ಗ ತಾಲೂಕಿನ, ಗಬ್ಬೂರಿನ ವೆಂಕಟೇಶ್ವರ ದೇವಸ್ಥಾನದಲ್ಲಿ ಕ್ರಿ.ಶ. ೧೨ ಮತ್ತು ೧೩ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ದೇವಸ್ಥಾನದ ಗೋಡೆಯ ಕೆಳಗೆ ಬ್ರಹ್ಮನ ಶಿಲ್ಪವನ್ನು ಇಡಲಾಗಿದೆ. ಈ ಶಿಲ್ಪದ ಗಾತ್ರವು ಚಿಕ್ಕದಾಗಿದ್ದು, ಕಪ್ಪು ಕಲ್ಲಿನಲ್ಲಿ ಕೆತ್ತಲಾಗಿದೆ. ಬ್ರಹ್ಮನ ಮುಂಭಾಗದ ಮುಖವು ಮುರಿದು ಹೋಗಿದೆ. ಮೂರು ಮುಖವುಳ್ಳ ಬ್ರಹ್ಮನ ಮೂರ್ತಿಯು, ಸುಖಾಸನದ ಕುಳಿತಿರುವ ಭಂಗಿಯಲ್ಲಿ ನಾವು ಇಲ್ಲಿ ಕಾಣಬಹುದು. ಈ ಶಿಲ್ಪವು ಅಸ್ಪಷ್ಟತೆಯಿಂದ ಕೂಡಿದೆ.

೫) ನೃತ್ಯಗಾರ

ಈ ಶಿಲ್ಪವು ದೇವದುರ್ಗ ತಾಲ್ಲೂಕಿನ, ಗಬ್ಬೂರಿನ ವೆಂಕಟೇಶ್ವರ ದೇವಸ್ಥಾನದಲ್ಲಿ ಕ್ರಿ.ಶ. ೧೨ ಮತ್ತು ೧೩ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ದೇವಸ್ಥಾನದ ದ್ವಾರಶಾಖೆಗಳಲ್ಲಿ ನೃತ್ಯಗಾರನನ್ನು ಕೆತ್ತಲಾಗಿದೆ. ಈ ಶಿಲ್ಪವು ಉಬ್ಬು ಶಿಲ್ಪದ ಮಾದರಿಯಲ್ಲಿ, ಮರಳು ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಅಸ್ಪಷ್ಟತೆಯಿಂದ ಕೂಡಿದ್ದು, ನೃತ್ಯದ ಭಂಗಿಯಲ್ಲಿರುವುದನ್ನು ಕಾಣಬಹುದು.

೬) ಈ ಶಿಲ್ಪವು ೧೨ ಮತ್ತು ೧೩ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಗಬ್ಬೂರಿನ ವೆಂಕಟೇಶ್ವರ ದೇವಸ್ಥಾನದ ಸುತ್ತಲೂ ದ್ವಾರಶಾಖೆಗಳಲ್ಲಿ ಛಾಮರದಾರಿ ಉಬ್ಬು ಶಿಲ್ಪಗಳನ್ನು ಕೆತ್ತಲಾಗಿದೆ. ಈ ಶಿಲ್ಪವು ಅತ್ಯಂತ ಸುಂದರವಾಗಿ ಕೆತ್ತಲಾಗಿದೆ. ಈ ಶಿಲ್ಪವು ಛಾಮರವನ್ನು ಹಿಡಿದು ನಿಂತಿರುವ ಭಂಗಿಯಲ್ಲಿ ಮಹಿಳೆಯನ್ನು ಈ ಶಿಲ್ಪದಲ್ಲಿ ನಾವು ಕಾಣಬಹುದು. ದ್ವಾರಶಾಖೆಗಳು ನೋಡಲು ಗರ್ಭಗೃಹದಂತೆ ಇದೆ.

೭) ಮಹಿಳೆಯು ನಿಂತಿರುವ ಭಂಗಿ

ಈ ಶಿಲ್ಪವು ದೇವದುರ್ಗ, ತಾಲ್ಲೂಕಿನ ಗಬ್ಬೂರಿನ ವೆಂಕಟೇಶ್ವರ ದೇವಸ್ಥಾನದಲ್ಲಿ ಗೋಡೆಗಳ ಮೇಲೆ ಕೆತ್ತಲಾಗಿದೆ. ಈ ಶಿಲ್ಪವು ಕ್ರಿ.ಶ. ೧೨ ಮತ್ತು ೧೩ನೇ ಶತಮಾನದಲ್ಲಿ ಕೆತ್ತಲಾಗಿದೆ. ಈ ಮರಳು ಕಲ್ಲಿನಲ್ಲಿ ಕೆತ್ತಲಾಗಿದೆ. ಈ ಶಿಲ್ಪವು ಒಬ್ಬ ಮಹಿಳೆ ನಿಂತಿರುವ ಭಂಗಿಯಲ್ಲಿರುವುದನ್ನು ನಾವು ಇಲ್ಲಿ ಕಾಣಬಹುದು. ಈ ಶಿಲ್ಪದಲ್ಲಿ ಮಹಿಳೆಯ ವಸ್ತ್ರವಿನ್ಯಾಸ ಮತ್ತು ಕೇಶವಿನ್ಯಾಸವು ವಿಶಿಷ್ಟವಾಗಿರುವುದನ್ನು ನಾವು ಇಲ್ಲಿ ಕಾಣಬಹುದು. ಈ ಶಿಲ್ಪವು ಅಸ್ಪಷ್ಟತೆಯಿಂದ ಕೂಡಿದೆ.

೮) ಲತಾ ಸುರುಳಿ ಬಳ್ಳಿಗಳು

ಈ ಕಂಬದ ಶಿಲ್ಪಕಲಾಕೃತಿಯು ಕ್ರಿ.ಶ. ೧೨ ಮತ್ತು ೧೩ನೇ ಶತಮಾನದಲ್ಲಿ ಕೆತ್ತಲಾಗಿದ್ದು, ಇದು ಗಬ್ಬೂರಿನ ವೆಂಕಟೇಶ್ವರ ದೇವಸ್ಥಾನದ ಮೂಲ ಕಂಬಗಳಲ್ಲಿ, ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ಕೆತ್ತಲಾಗಿದೆ. ಈ ಕಂಬಗಳ ಚೌಕಾರವಾಗಿರುವ ಸರಳ, ಸ್ತಂಭ ಲತಾಸುರುಳಿಯ ಹೂ ಬಳ್ಳಿಗಳನ್ನು ಅತ್ಯಂತ ಸೂಕ್ಷ್ಮವಾಗಿ ಕಂಬದ ಮೇಲೆ ಉಬ್ಬು ಶಿಲ್ಪ ಮಾದರಿಯಲ್ಲಿ ಕೆತ್ತನೆಗೊಂಡಿದೆ.

೯) ಕೀರ್ತಿಮುಖ

ಈ ಶಿಲ್ಪವು ಕ್ರಿ.ಶ. ೧೨ ಮತ್ತು ೧೩ನೇಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ಕೆತ್ತಲಾಗಿದೆ. ಈ ಶಿಲ್ಪಕಲಾಕೃತಿಯು ಗಬ್ಬೂರಿನ ವೆಂಕಟೇಶ್ವರ ದೇವಸ್ಥಾನದ ಚೌಕಟ್ಟಿನ ಮೇಲಾವರಣದ ಕಂಬದ ಮಧ್ಯದಲ್ಲಿ ಕೀರ್ತಿಮುಖವನ್ನು ಕೆತ್ತಲಾಗಿದೆ.

ಈ ಕೀರ್ತಿಮುಖದ ಶಿಲ್ಪವು ಅತ್ಯಂತ ಸುಂದರವಾಗಿದ್ದು, ದೇವಸ್ಥಾನದ ಸುತ್ತಲೂ ಮೂಲ ಕಂಬಗಳಲ್ಲಿ ಈ ಶಿಲ್ಪವನ್ನು, ಅತ್ಯಂತ ಸೂಕ್ಷ್ಮ ಕಲತ್ಮಕವಾದ ಕೆತ್ತನೆ ಮಾಡಲಾಗಿದೆ.

೧೦)ಕಂಬ

ಈ ಕಂಬದ ಶಿಲ್ಪವು ದೇವದುರ್ಗ ತಾಲೂಕಿನ, ಗಬ್ಬೂರಿನ ವೆಂಕಟೇಶ್ವರ ದೇವಾಲಯದ ಮುಂದೆ ಕಂಬ ಈ ಶಿಲ್ಪವನ್ನು ಇಡಲಾಗಿದೆ. ಈ ಶಿಲ್ಪವು ಮರಳು ಕಲ್ಲಿನಲ್ಲಿ ಕೆತ್ತನೆಗೊಂಡಿದ್ದು ಕ್ರಿ.ಶ. ೧೨ ಮತ್ತು ೧೩ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯ ಶೈಲಿಯಲ್ಲಿ ರಚನೆಗೊಂಡಿದೆ. ಈ ಕಂಬವು ವೃತ್ತಾಕಾರ ಮತ್ತು ಶಷ್ಪುಕೃತಿಯಲ್ಲಿ ಕೆತ್ತಲಾಗಿದೆ.

೧೧)ವಾದ್ಯಗಾರ

ಈ ಶಿಲ್ಪವು ದೇವದುರ್ಗ ತಾಲ್ಲೂಕಿನ, ಗಬ್ಬೂರಿನ ವೆಂಕಟೇಶ್ವರ ದೇವಾಲಯದ ದ್ವಾರಶಾಖೆಗಳಲ್ಲಿ ಈ ಶಿಲ್ಪಗಳನ್ನು ಕ್ರಿ.ಶ. ೧೨ ಮತ್ತು ೧೩ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ಕೆತ್ತಲಾಗಿದೆ. ಈ ಶಿಲ್ಪವನ್ನು ಉಬ್ಬು ಶಿಲ್ಪದ ಮಾದರಿಯಲ್ಲಿ ಕೆತ್ತನೆಗೊಂಡಿದೆ.

ಈ ಶಿಲ್ಪವು ಶಿಖರದಂತೆ ನಿರ್ಮಿಸಲಾಗಿದ್ದು, ಅದರ ಒಳಗೆ ವಾದ್ಯಗಾರನು ತಬಲವನ್ನು ಬಾರಿಸುವ ಭಂಗಿಯಲ್ಲಿ ನಿಂತಿದ್ದಾನೆ.

೧೨)ಆನೆಯ ಸಂತಾನೋತ್ಪತ್ತಿ ಶಿಲ್ಪ

ಈ ಶಿಲ್ಪವು ಅತ್ಯಂತ ವಿಶಿಷ್ಟವಾದ ಶಿಲ್ಪವಾಗಿದ್ದು, ಗಬ್ಬೂರಿನ ಹರಿಹರ ದೇವಸ್ಥಾನದ ಮುಂಭಾಗದ ಆಯತಾಕಾರದ ಪಟ್ಟಿಕೆಯಲ್ಲಿ ಎಡ ಮತ್ತು ಬಲ ಆನೆಗಳ ಮದ್ಯಭಾಗದಲ್ಲಿ ಹಿಂಭಾಗದಲ್ಲಿ ಗಂಡು ಆನೆ, ಮುಂಭಾಗದಲ್ಲಿ ಹೆಣ್ಣು ಆನೆ ಸಂತಾನೋತ್ಪತ್ತಿಯಾಗುತ್ತಿರುವ ದೃಶ್ಯವನ್ನು ಉಬ್ಬು-ಶಿಲ್ಪದಲ್ಲಿ ಅತ್ಯಂತ ಸೊಗಸಾಗಿ ಕೆತ್ತಲಾಗಿದೆ. ಈ ಶಿಲ್ಪವು, ಈ ದೇವಸ್ಥಾನದಲ್ಲಿಯೇ ಅಪರೂಪದ ರೀತಿಯಾಗಿ ಕಂಡುಬಂದ ಈ ಶಿಲ್ಪವಾಗಿದೆ.

೧೩)ಗಜಲಕ್ಷ್ಮೀ

ಈ ಶಿಲ್ಪವ ಗಬ್ಬೂರಿನ ವೆಂಕಟೇಶ್ವರ ದೇವಸ್ಥಾನದ ಪ್ರಮುಖ ದ್ವಾರವಾದ ಚೌಕಟ್ಟಿನ ಮೇಲ್ಭಾಗದ ಲಲಾಟದಲ್ಲಿ ಗಜಲಕ್ಷ್ಮಿಯ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಈ ಶಿಲ್ಪವು ಕಲ್ಯಾಣ ಚಾಲುಕ್ಯರ ಲಕ್ಷಣಗಳನ್ನು ಹೊಂದಿದ್ದು, ೧೨ ಮತ್ತು ೧೩ನೇ ಶತಮಾನದಲ್ಲಿ ರಚನೆಗೊಂಡಿರುತ್ತದೆ.

ಈ ಶಿಲ್ಪವು ಆಯತಾಕಾರದ ಚೌಕಟ್ಟಿನಲ್ಲಿ ಎರಡು ಗಜಗಳ ಮಧ್ಯ ಲಕ್ಷ್ಮಿಯನ್ನು ಕೆತ್ತಲಾಗಿದೆ. ಈ ಶಿಲ್ಪವು ಅಸ್ಪಷ್ಟತೆಯಿಂದ ಕೆತ್ತಲಾಗಿದೆ. ಈ ಶಿಲ್ಪವು ಗಬ್ಬೂರಿನ ದೇವಾಲಯದಲ್ಲಿ ನೋಡಬಹುದಾಗಿದೆ.

೧೪)ಹೂವಿನಾಕೃತಿ

ಈ ಶಿಲ್ಪವು ವೆಂಕಟೇಶ್ವರ ದೇವಸ್ಥಾನದ ಸುತ್ತಲೂ ಅಲಂಕಾರಿಕವಾಗಿ ಬಳಸಿರುವ ಹೂವಿನಾಕೃತಿ ಉಬು ಶಿಲ್ಪವಾಗಿದೆ. ಈ ಶಿಲ್ಪವು ಕಂಬದ ಮಧ್ಯಭಾಗದಲ್ಲಿ ಎರಡು ಕಂಬಗಳ ಮೇಲ್ಭಾದಲ್ಲಿ ಸರಳಗ್ಯೆ ಚಿತ್ರಣದಲ್ಲಿ ಉಬ್ಬು-ಶಿಲ್ಪದ ಮಾದರಿಯಲ್ಲಿ ಕೆತ್ತಲಾಗಿದೆ. ಪಟ್ಟಿಕೆಯಲ್ಲಿ ಸರಳ ಹೊವಿನಾಕೃತಿ ರಚಿಸಲಾಗಿದೆ.

೧೫)ಗಜಪಡೆ

ಈ ಶಿಲ್ಪವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ೧೨ ಮತ್ತು ೧೩ನೇ ಶತಮಾನದಲ್ಲಿ ರಚನೆಗೊಂಡಿರುತ್ತದೆ. ಈ ಶಿಲ್ಪಗಳು ವೆಂಕಟೇಶ್ವರ ದೇವಸ್ಥಾನ ಸುತ್ತಲೂ ಜಾಲಂದ್ರಗಳ ಕೆಳ ಭಾಗದಲ್ಲಿ ಆಯತಾಕಾರದ ಚಚೌಕಾರದಲ್ಲಿ ನಾಲ್ಕು ಆನೆಗಳನ್ನು ಕೆತ್ತಲಾಗಿದೆ. ಈ ಶಿಲ್ಪವು ಉಬ್ಬು ಶಿಲ್ಪ ಮಾದರಿಯಲ್ಲಿ ಅತ್ಯಂತ ಸುಂದರವಾಗಿ ಕೆತ್ತಲಾಗಿದೆ.

ಪಟ್ಟಿಕೆಯಲ್ಲಿ ಸಾಲಾಗಿ ಸಾಗುತ್ತಿರುವ ದೃಶ್ಯನೋಡಬಹುದು. ಸಂಯೋಜನೆಯನ್ನು ಪೂರ್ಣಗೊಳಿಸಲು ಹೂವಿನಾಕೃತಾಗಳು ಪಟ್ಟಿಕೆಗಳಲ್ಲಿ ಬಳಸಿಕೊಳ್ಳಲಾಗಿದೆ.

೧೬)ಆನೆಗಳ ಸಾಲು

ಈ ಶಿಲ್ಪವು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ೧೨ ಮತ್ತು ೧೩ನೇ ಶತಮಾನದಲ್ಲಿ ರಚನೆಗೊಂಡಿರುತ್ತದೆ.

ಈ ಶಿಲ್ಪವು ವೆಂಕಟೇಶ್ವರ ದೇವಸ್ಥಾನದ ಸುತ್ತಲೂ ಪಟ್ಟಿಕೆಗಳಲ್ಲಿ ಆನೆಗಳ ಸಾಲು,ಗಳಿರುವ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ.

ಅಲಂಕಾರಿಕವಾಗಿ ಆನೆಗಳ ಮಧ್ಯಭಾಗದಲ್ಲಿ ಸಣ್ಣ ಸಣ್ಣ ಗಂಟೆಗಳ ಆಕೃತಿಗಳನ್ನು ರಚನೆಗೊಂಡಿದ್ದು ಹಾಗೂ ಆನೆಗಳು ಸಾಲಾಗಿ ಚಲಿಸುವ ಹಾಗೂ ನಿಂತಿರುವ ದೃಶ್ಯ ರಚಿಸಲಾಗಿದೆ.

೧೭)ಹೂಬಳ್ಳಿ ಕೆತ್ತನೆ

ಈ ಶಿಲ್ಪವು ವೆಂಕಟೇಶ್ವರ ದೇವಸ್ಥಾನದ ಸುತ್ತಲೂ ಕಂಬಗಳ ಮೇಲೆ ದೇವಸ್ಥಾನದ ಅಲಂಕಾರಿಕವಾಗಿ ಅತ್ಯಂತ ಸೊಗಸಾಗಿ ಸೂಕ್ಷ್ಮಕೆತ್ತನೆಯನ್ನು ರಚನೆ ಮಾಡಲಾಗಿದೆ. ಹೂಬಳ್ಳಿಯ ಸಿಂಹದ ಮುಖದ ಪ್ರಭಾವಳಿಯ ಮುಖವನ್ನು ಮತ್ತು ಗೋಪುರದ ಕೆತ್ತನೆಯನ್ನು ಕೂಡ ಕಂಬಗಳ ಮೇಲೆ ಕೆತ್ತಲಾಗಿದೆ.

ರಾಯಚೂರಿನ ಶಿಲ್ಪಗಳ ಸ್ಥೂಲ ಮಾಹಿತಿ

೧) ವೀರಗಲ್ಲು

೨) ವೀರಗಲ್ಲು

ಕಾಲ ಕ್ರಿ.ಶ. ೧೭ನೇ

ಸ್ಥಳ–ಗಂಗಾವತಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೩) ವೀರಗಲ್ಲು

ಕಾಲ ಕ್ರಿ.ಶ.–೧೮ನೇ

ಸ್ಥಳ–ಗಬ್ಬೂರು

ತಾಲ್ಲೂಕು–ದೇವದುರ್ಗ

ಜಿಲ್ಲೆ–ರಾಯಚೂರು

೪) ವೀರ

ಕಾಲ ಕ್ರಿ.ಶ.–೧೩ನೇ

ಸ್ಥಳ–ರಾಮಲಿಂಗೇಶ್ವರ ದೇವಸ್ಥಾನ

ತಾಲ್ಲೂಕು–ರಾಯಚೂರು

ಜಿಲ್ಲೆ–ರಾಯಚೂರು

೫) ವೀರಗಲ್ಲು

ಕಾಲ ಕ್ರಿ.ಶ.–೧೬,೧೭ನೇ

ಸ್ಥಳ–ಗಂಗಾವತಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ರಾಯಚೂರು

೬) ವೀರಗಲ್ಲು

ಕಾಲ ಕ್ರಿ.ಶ.– ೧೭, ೧೮ನೇ ಶತಮಾನ

ಸ್ಥಳ–ಗಬ್ಬೂರು

ತಾಲ್ಲೂಕು–ದೇವದುರ್ಗ

ಜಿಲ್ಲೆ–ರಾಯಚೂರು

೭) ವೀರಗಲ್ಲು

೮) ವೀರಗಲ್ಲು

ಕಾಲ ಕ್ರಿ.ಶ.–೧೭ನೇ ಶತಮಾನ

ಸ್ಥಳ–ಗಂಗಾವತಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೯) ವೀರಗಲ್ಲು

ಕಾಲ ಕ್ರಿ.ಶ.–೧೬, ೧೮
ಸ್ಥಳ–ಗಂಗಾವತಿ
ತಾಲ್ಲೂಕು–ಗಂಗಾವತಿ
ಜಿಲ್ಲೆ–ಕೊಪ್ಪಳ

೧೦) ವೀರಗಲ್ಲು

ಕಾಲ ಕ್ರಿ.ಶ.–೧೪, ೧೬ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೧೧) ಗಣೇಶ

ಕಾಲ ಕ್ರಿ.ಶ.–೧೬, ೧೭ನೇ

ಸ್ಥಳ–ಗಬ್ಬೂರು

ತಾಲ್ಲೂಕು–ಲಿಂಗಸುಗೂರು

ಜಿಲ್ಲೆ–ರಾಯಚೂರು

೧೨) ಗಣೇಶ

ಕಾಲ ಕ್ರಿ.ಶ.–೧೫, ೧೬ನೇ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೧೩)ಗಣೇಶ

ಕಾಲ ಕ್ರಿ.ಶ.–೧೫, ೧೬ನೇ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೧೪) ಗಣೇಶ

ಕಾಲ ಕ್ರಿ.ಶ.–೧೫, ೧೬ನೇ

ಸ್ಥಳ–ಆನೆಗೊಂದಿ

ತಾಲ್ಲೂಕು–ಕೊಪ್ಪಳ

೧೫) ಆನೆಗಳು

ಕಾಲ ಕ್ರಿ.ಶ–೧೪, ೧೬ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೧೬)ಆನೆಗಳ ಪಟ್ಟಿಕೆ

ಕಾಲ ಕ್ರಿ.ಶ.–೧೭ನೇ ಶತಮಾನ

ಸ್ಥಳ–ರಾಮಲಿಂಗೇಶ್ವರ ದೇವಸ್ಥಾನ

ತಾಲ್ಲೂಕು–ರಾಯಚೂರು

ಜಿಲ್ಲೆ–ರಾಯಚೂರು

೧೭)ಆನೆ

ಕಾಲ ಕ್ರಿ.ಶ– ೧೭ನೇ ಶತಮಾನ

ಸ್ಥಳ–ರಾಯಚೂರು

ತಾಲ್ಲೂಕು–ರಾಯಚೂರು

ಜಿಲ್ಲೆ–ರಾಯಚೂರು

೧೮)ಆನೆಗಳು

ಕಾಲ ಕ್ರಿ.ಶ– ೧೪, ೧೭ನೇ ಶತಮಾನ

ಸ್ಥಳ–ರಾಯಚೂರು

ತಾಲ್ಲೂಕು–ರಾಯಚೂರು

ಜಿಲ್ಲೆ–ರಾಯಚೂರು

೧೯)ಆನೆ

ಕಾಲ ಕ್ರಿ.ಶ– ೧೭ನೇ ಶತಮಾನ

ಸ್ಥಳ–ರಾಯಚೂರು

ತಾಲ್ಲೂಕು–ರಾಯಚೂರು

ಜಿಲ್ಲೆ–ರಾಯಚೂರು

೨೦)ಆನೆ

ಕಾಲ ಕ್ರಿ.ಶ– ೧೭ನೇ ಶತಮಾನ

ಸ್ಥಳ–ರಾಯಚೂರು

ತಾಲ್ಲೂಕು–ರಾಯಚೂರು

ಜಿಲ್ಲೆ–ರಾಯಚೂರು

೨೧) ಆನೆಗಳ ಪಟ್ಟಿಕೆ

ಕಾಲ ಕ್ರಿ.ಶ– ೧೭ನೇ ಶತಮಾನ

ಸ್ಥಳ–ರಾಯಚೂರು ಕೋಟೆ

ತಾಲ್ಲೂಕು–ರಾಯಚೂರು

ಜಿಲ್ಲೆ–ರಾಯಚೂರು

೨೨)ಆನೆಗಳ ಪಟ್ಟಿಕೆ

ಕಾಲ ಕ್ರಿ.ಶ– ೧೭ನೇ ಶತಮಾನ

ಸ್ಥಳ–ರಾಯಚೂರು ಕೋಟೆ

ತಾಲ್ಲೂಕು–ರಾಯಚೂರು

ಜಿಲ್ಲೆ–ರಾಯಚೂರು

೨೩)ಗರುಡ

ಕಾಲ– ಕ್ರಿ.ಶ. ೧೫–೧೭ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೨೪)ಕೇಶವ

ಕಾಲ ಕ್ರಿ.ಶ. –೧೬, ೧೭ನೇ ಶತಮಾನ

ಸ್ಥಳ–ಕರಡಿಕಲ್ಲು

ತಾಲ್ಲೂಕು–ಲಿಂಗಸುಗೂರು

ಜಿಲ್ಲೆ–ರಾಯಚೂರು

೨೫)ಪ್ರಭಾವಳಿಯ ಭಾಗದಿಂದ ಕೂಡಿದ ವಿಷ್ಣು

ಕಾಲ ಕ್ರಿ.ಶ. ೧೩, ೧೪ನೇ ಶತಮಾನ

ಸ್ಥಳ–ಗಬ್ಬೂರು

ತಾಲ್ಲೂಕು–ದೇವದುರ್ಗ

ಜಿಲ್ಲೆ–ರಾಯಚೂರು

೨೬)<u>ವೇಣುಗೋಪಾಲ</u>

ಕಾಲ ಕ್ರಿ.ಶ. ೧೪, ೧೬ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೨೭)<u>ದಂಪತಿಗಳು</u>

ಕಾಲ–ಕ್ರಿ.ಶ. ೧೪, ೧೬ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೨೮)<u>ದಂಪತಿಗಳು</u>

ಕಾಲ ಕ್ರಿ.ಶ. ೧೪, ೧೭ನೇ ಶತಮಾನ

ಸ್ಥಳ–ಗಂಗಾವತಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೨೯)<u>ನರ್ತಕಿಯರ ಪಟ್ಟಿಕೆ</u>

ಕಾಲ ಕ್ರಿ.ಶ ೧೫, ೧೭ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೩೦)ನರ್ತಕಿಯರು

ಕಾಲ ಕ್ರಿ.ಶ ೧೫, ೧೬ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೩೧)ನರಸಿಂಹಮೂರ್ತಿಯನ್ನು ಹೋಲುವ ಶಿಲ್ಪಕಲಾಕೃತಿ

೩೨)ಗೋಪಿಕೆಯರ ವಸ್ತ್ರಾಪಹರಣ

೩೩)ಸ್ತ್ರೀಯರ ಕೋಲಾಟ ಆಡುತ್ತಿರುವ ಪಟ್ಟಿಕೆ

ಕಾಲ ಕ್ರಿ.ಶ. ೧೫, ೧೬ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೩೪)ರಾಜ ಮತ್ತು ಏಳು ಜನರು

ಕಾಲ ಕ್ರಿ.ಶ. ೧೫, ೧೬ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೩೫)<u>ನಾಗದಂಪತಿಗಳು</u>

೩೬)<u>ನಾಗದಂಪತಿಗಳು</u>

ಕಾಲ ಕ್ರಿ.ಶ.–೧೭ನೇ ಶತಮಾನ

ಸ್ಥಳ–ಗಬ್ಬೂರು

ತಾಲ್ಲೂಕು–ದೇವದುರ್ಗ

ಜಿಲ್ಲೆ–ರಾಯಚೂರು

೩೭)<u>ನಾಗದಂಪತಿಗಳು</u>

ಕಾಲ ಕ್ರಿ.ಶ.–೧೭, ೧೮ನೇ ಶತಮಾನ

ಸ್ಥಳ–ಗಬ್ಬೂರು

ತಾಲ್ಲೂಕು–ದೇವದುರ್ಗ

ಜಿಲ್ಲೆ–ರಾಯಚೂರು

೩೮)<u>ನಾಗ</u>

೩೯)<u>ನಾಗದಂಪತಿಗಳು</u>

ಕಾಲ ಕ್ರಿ.ಶ.–೧೩, ೧೭ನೇ ಶತಮಾನ

ಸ್ಥಳ–ಗಬ್ಬೂರು

ತಾಲ್ಲೂಕು–ದೇವದುರ್ಗ

ಜಿಲ್ಲೆ–ರಾಯಚೂರು

೪೦)<u>ನಾಗದಂಪತಿಗಳು</u>

ಕಾಲ ಕ್ರಿ.ಶ.-೧೭, ೧೮ನೇ ಶತಮಾನ

ಸ್ಥಳ-ಗಬ್ಬೂರು

ತಾಲ್ಲೂಕು-ದೇವದುರ್ಗ

ಜಿಲ್ಲೆ-ರಾಯಚೂರು

೪೧) <u>ಚಾಮುಂಡ</u>

ಕಾಲ ಕ್ರಿ.ಶ. ೧೩ನೇ ಶತಮಾನ

ಸ್ಥಳ-ರಾಮಲಿಂಗೇಶ್ವರ ದೇವಸ್ಥಾನ

ತಾಲ್ಲೂಕು-ರಾಯಚೂರು

ಜಿಲ್ಲೆ-ರಾಯಚೂರು

೪೨)<u>ದೇವಿ</u>

ಕಾಲ ಕ್ರಿ.ಶ. ೧೪, ೧೬ನೇ ಶತಮಾನ

ಸ್ಥಳ-ಆನೆಗೊಂದಿ

ತಾಲ್ಲೂಕು-ಗಂಗಾವತಿ

ಜಿಲ್ಲೆ-ಕೊಪ್ಪಳ

೪೩)<u>ಸರಸ್ವತಿ</u>

ಕಾಲ ಕ್ರಿ.ಶ. ೧೩ನೇ ಶತಮಾನ

ಸ್ಥಳ-ಕರಡಿಕಲ್ಲು

ತಾಲ್ಲೂಕು-ಲಿಂಗಸುಗೂರು

ಜಿಲ್ಲೆ-ರಾಯಚೂರು

೪೪) ರಾಮಾನುಜಾಚಾರ್ಯ

ಕಾಲ ಕ್ರಿ.ಶ. ೧೪, ೧೬ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೪೫) ಲಿಂಗಪೀಠ

ಕಾಲ ಕ್ರಿ.ಶ. ೧೫, ೧೭ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೪೬)ಷಣ್ಮುಖ ಮತ್ತು ಕನ್ನಡ ಶಾಸನ

ಕಾಲ ಕ್ರಿ.ಶ. ೧೩ನೇ ಶತಮಾನ

ಸ್ಥಳ–ರಾಮಲಿಂಗೇಶ್ವರ ದೇವಸ್ಥಾನ

ತಾಲ್ಲೂಕು–ರಾಯಚೂರು

ಜಿಲ್ಲೆ–ರಾಯಚೂರು

೪೭)ಬಾಗಿಲುವಾಡ

ಕಾಲ ಕ್ರಿ.ಶ. ೧೪, ೧೬ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೪೮)ಆನೆ

ಕಾಲ ಕ್ರಿ.ಶ. ೧೫, ೧೭ನೇ ಶತಮಾನ

ಸ್ಥಳ–ರಾಯಚೂರು

ತಾಲ್ಲೂಕು–ರಾಯಚೂರು

ಜಿಲ್ಲೆ–ರಾಯಚೂರು

೪೯)ಹನುಮಂತ

ಕಾಲ ಕ್ರಿ.ಶ. ೧೪, ೧೬ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ಕೊಪ್ಪಳ

೫೦)ಕಂಬ

೫೧) ವಿಷ್ಣು

೫೨)ಉಮಾಮಹೇಶ್ವರ

ಕ್ರಿ.ಶ. ೧೫, ೧೬ನೇ ಶತಮಾನ

ಸ್ಥಳ–ಆನೆಗೊಂದಿ

ತಾಲ್ಲೂಕು–ಗಂಗಾವತಿ

ಜಿಲ್ಲೆ–ರಾಯಚೂರು

ಅಧ್ಯಾಯ–ಆರು

ರಾಯಚೂರಿನ ವಸ್ತುಸಂಗ್ರಹಾಲಯದ ಸ್ಥಿತಿಗತಿ

ಅಧ್ಯಾಯ-ಆರು

ರಾಯಚೂರಿನ ವಸ್ತುಸಂಗ್ರಹಾಲಯದ ಸದ್ಯದ ಸ್ಥಿತಿಗತಿ

ಆರನೇ ಅಧ್ಯಾಯದಲ್ಲಿ ರಾಯಚೂರಿನ ವಸ್ತುಸಂಗ್ರಹಾಲಯದ ಸ್ಥಿತಿಗತಿ ಅಂದರೆ ಪ್ರಾರಂಭಿಸಿದಾಗ ಯಾವ ರೀತಿಯ ತೊಂದರೆಗಳನ್ನು ಅನುಭವಿಸಿದರು ಅದೇ ರೀತಿಯಾಗಿ ಈ ಒಂದು ಕಾಲದಲ್ಲಿ ಆ ವಸ್ತು ಸಂಗ್ರಹಾಲಯವನ್ನು ಯಾವ ರೀತಿಯಾಗಿ ಮುನ್ನಡೆಸಿಕೊಂಡು ಹೋಗುತ್ತಾರೆಂಬುದನ್ನು ಈ ಅಧ್ಯಾಯದಲ್ಲಿ ಕಾಣಬಹುದಾಗಿದೆ.

ಅಧ್ಯಯನಕ್ಕೆ ಒಟ್ಟು ಏಳು ಅಧ್ಯಾಯಗಳನ್ನು ಮಾಡಲಾಗಿದೆ. ಇವುಗಳಲ್ಲಿ ಆರು ಅಧ್ಯಾಯಗಳ ಕೆಲವೊಂದು ಫಲಿತಗಳನ್ನು ಇಲ್ಲಿ ಉಲ್ಲೇಖಸಲಾಗಿದೆ.

ಈ ಅಧ್ಯಾಯದಲ್ಲಿ ಇತಿಹಾಸದ ಅಧ್ಯಾಯ ಮತ್ತು ಗಬ್ಬೂರಿನ ಬಗ್ಗೆ ವಿಸ್ತರಿಸಿ ಬರೆಯಲಾಗಿದೆ. ಅಲ್ಲದೆ ಶಿಲ್ಪಕಾಲಾಕೃತಿಗಳನ್ನು ವಿಮರ್ಶಿಸಿ. ಈ ಅಧ್ಯಾಯದಲ್ಲಿ ಹೇಳಲಾಗಿದೆ.

ವಿಶ್ವವಿದ್ಯಾಲಯವಾಗಲಿ, ಅಕಾಡೆಮಿಗಳಾಗಲಿ, ಗ್ಯಾಲರಿಗಳಾಗಲಿ ಅಥವಾ ವಸ್ತು ಸಂಗ್ರಹಾಲಯಗಳಾಗಲಿ ಆರಂಭಿಸುವದು ಎಷ್ಟು ಕಷ್ಟದ ಕೆಲಸವಾಗಿರುತ್ತದೆ ಅಷ್ಟೇ ಕಷ್ಟದ ಕೆಲಸ ಅವುಗಳನ್ನು ನಿರಂತರವಾಗಿ ಕಾಪಾಡಿಕೊಳ್ಳುವುದರಲ್ಲಿರುತ್ತದೆ. ಇವುಗಳನ್ನು ಕೇವಲ ಸ್ಥಾಪಿಸಿ ಬಿಟ್ಟರೆ ನಡೆಯುವುದಿಲ್ಲ.

ಇವು ಸುವ್ಯವಸ್ಥಿತವಾಗಿ ಕಾಪಾಡಿಕೊಳ್ಳುವುದು ಬಹುಮುಖ್ಯವಾಗಿರುತ್ತದೆ. ರಾಯಚೂರಿನಲ್ಲಿ ಸ್ಥಾಪಿಸಿದ ವಸ್ತುಸಂಗ್ರಹಾಲಯದ ಸ್ಥಿತಿಗತಿ ಕುರಿತು ಈ ಮುಂದೆ ಚರ್ಚಿಸಲಾಗಿದೆ. ಏಕೆಂದರೆ ಈ ವಸ್ತು ಸಂಗ್ರಹಾಲಯದ ಕುರಿತು ಅಧ್ಯಯನ ಮಾಡುವಾಗ ಅವುಗಳ ಸ್ಥಿತಿಗತಿಯು ಅಷ್ಟೇ ಮಹತ್ವದ ಪಾತ್ರ ನಿರ್ವಹಿಸುತ್ತದೆ.

ಈ ವಸ್ತು ಸಂಗ್ರಹಾಲಯದಲ್ಲಿನ ಶಿಲ್ಪಕಲಾಕೃತಿಗಳು ಪ್ರದರ್ಶನಕ್ಕೆ ಪೆಡಸ್ಟಾಲ್ ಮೇಲೆ ಇಡಲಾಗಿದೆ. ಹಾಗೂ ಹಲವಾರು ಶಿಲ್ಪಕಲಾಕೃತಿಗಳು ವಸ್ತು ಸಂಗ್ರಹಾಲಯದ ಹೊರಾಂಗಣದಲ್ಲಿದ್ದು, ಅವುಗಳು ಸುಮಾರು ಒಂದು ನೂರಕ್ಕೂ ಹೆಚ್ಚು ಶಿಲ್ಪಕಲಾಕೃತಿಗಳಿಗೆ ಪೆಡಸ್ಟಾಲ್‌ಗಳು ಬೇಕಾಗಿದ್ದು ಅಲ್ಲಿ ಹಲವಾರು ಸಂಕೀರ್ಣ ವಸ್ತುಗಳನ್ನು ಎರಡು ಕೋಣೆಗಳಲ್ಲಿ ಮಾತ್ರ ಮಧ್ಯಭಾಗದಲ್ಲಿ ಸಂಗ್ರಹಿಸಲಾಗಿದೆ.

ಈ ವಸ್ತು ಸಂಗ್ರಹಾಲಯದ ಪಕ್ಕದಲ್ಲಿ ಅರಮನೆ ಆವರಣ ಇರುವದರಿಂದ ಅನೇಕ ಅಲ್ಲಿ ಬಂದ ವಸ್ತು ಸಂಗ್ರಹಾಲಯದಲ್ಲಿನ ವಸ್ತುಗಳು ಮತ್ತು ಶಿಲ್ಪಕಲಾಕೃತಿಗಳು ಹೊಂದಿರುವುದರಿಂದ ವೀಕ್ಷಣೆಗೆ ಅನುಕೂಲವಾಗುತ್ತದೆ.

ಈ ವಸ್ತು ಸಂಗ್ರಹಾಲಯದ ಒಳಭಾಗದಲ್ಲಿ ಒಂಭತ್ತು ದ್ವಾರಗಳಿದ್ದು, ಅದರಲ್ಲಿ ೫ ದ್ವಾರಗಳು ಮಾತ್ರ ಜನರು ನೋಡಿದ್ದು ಉಳಿದವು ದ್ವಾರಗಳ ಬಗ್ಗೆ ಮಾಹಿತಿ ಇಲ್ಲ. ಒಂದರಲ್ಲಿ ಕಾರ್ಯಾಲಯ ಮತ್ತೊಂದರಲ್ಲಿ ಇನ್ನೂ ಉಳಿದ ಕೋಣೆಗಳಲ್ಲಿ ಶಿಲ್ಪಕಲಾಕೃತಿಗಳು ಕಾಣುತ್ತೇವೆ. ವಸ್ತುಸಂಗ್ರಹಾಲಯದ ಒಳಗಿನ ಎರಡು ಕೋಣೆಗಳಲ್ಲಿ ಶಿಲ್ಪಕಲಾಕೃತಿಗಳು ಕಾಣುತ್ತೇವೆ.

ಈ ಶಿಲ್ಪಗಳನ್ನು ಆನೆಗುಂದಿ, ಕರಡಿಗ್ರಾಮ, ಗಂಗಾವತಿ, ಕೊಪ್ಪಳ ಹಾಗೂ ಗಬ್ಬೂರಿನ ಸುತ್ತಮುತ್ತಲಿನ ಹಳ್ಳಿ ಹಾಗೂ ನಾನಾ ಕಡೆಗಳಿಂದ ಸಂಗ್ರಹಿಸಿಕೊಂಡು ಈ ವಸ್ತು ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ವಸ್ತು ಸಂಗ್ರಹಾಲಯದಲ್ಲಿರುವಂತಹ ಎಲ್ಲಾ ಶಿಲ್ಪಕಲಾಕೃತಿಗಳನ್ನು ಪೆಡೆಸ್ಟಾಲ್ ಮೇಲೆ ಇಡಲಾಗಿದೆ. ಅದೇ ರೀತಿ ಇನ್ನೂ ಹಲವಾರು ಶಿಲ್ಪ ಕಲಾಕೃತಿಗಳನ್ನು ಹೊರಾಂಗಣದಲ್ಲಿ ಸಂಗ್ರಹಿಸಲಾಗಿದ್ದು, ಅವುಗಳಿಗೆ ಪೆಡೆಸ್ಟಾಲ್‌ಗಳ ಅವಶ್ಯಕತೆಯಿದೆ.

ನವರಂಗ ದರವಾಜಾದ ಒಳಗಡೆ ಪ್ರಾಂಗಣವಿದ್ದು ಅದರ ಹಳೆಯ ಕಾಲದ ಆಗಿನ ಸಮಯ ಪರಿಚಯಿಸುವ ಹಾಗೂ ಆ ಸಮಯದ ಸ್ಥಿತಿಗತಿ ಮತ್ತು ಇನ್ನಿತರ ವಿಷಯಗಳು ತಿಳಿಸಿಕೊಡುವ ನನ್ನ ಭಾವನೆ. ಈ ವಸ್ತುಗಂಗ್ರಹಾಲಯದಲ್ಲಿ ಇದರ ಬಗ್ಗೆ ಮೇಲ್ವಿಚಾರಕರು ಮತ್ತು ಪುರಾತತ್ವ ಇಲಾಖೆಯವರು ಹೆಚ್ಚು ಗಮನ ನೀಡಿದ್ದು, ಆದರೆ ಕೆಲವು ಶಿಲ್ಪಗಳು ಇನ್ನು ಪೆಡೆಸ್ಟಾಲ್‌ಗಳನ್ನು ಮಾಡಿರುವುದಿಲ್ಲ. ಅವುಗಳನ್ನು ರಕ್ಷಿಸುವ ಅವಶ್ಯಕತೆ ಇದೆ.

ಈ ವಸ್ತು ಸಂಗ್ರಹಾಲಯದ ಛಾವಣಿಯಲ್ಲಿ ತೋಪು ಮತ್ತು ಇನ್ನಿತರ ಈಗ ತಾನೇ ದೊರಕಿರುವ ಶಿಲ್ಪಕಲಾಕೃತಿಗಳನ್ನು ನೋಡಬಹುದು. ಇಲ್ಲಿನ ಸಧ್ಯದ ಪರಿಸ್ಥಿತಿಯಲ್ಲಿ ರಾಯಚೂರಿನ ಸಂಗ್ರಹಾಲಯದ ಬಗ್ಗೆ ಪುಸ್ತಕಗಳು ಕಡಿಮೆ ಇದ್ದು ಹಾಗೂ ಅಲ್ಪಸ್ವಲ್ಪ ಅಲ್ಲಲ್ಲಿ ಲೇಖನಗಳಿದ್ದು ಕೈಪಿಡಿ ಇಲ್ಲ, ಮತ್ತು ಗಣಕ ಯಂತ್ರದ ವ್ಯವಸ್ಥೆ ಇಲ್ಲ. ಇದನ್ನೆಲ್ಲ ಗಮನಿಸಬೇಕಾಗಿದೆ. ಹಾಗೂ ಮತ್ತೊಂದು ಮುಖ್ಯ ಅಂಶವೆಂದರೆ ಸುತ್ತಲಿನ ಶಾಲಾಮಕ್ಕಳಿಗೆ ವರ್ಷಕ್ಕೆ ಎರಡು ಬಾರಿಯಾದರೂ ವಸ್ತುಸಂಗ್ರಹಾಲಯದ ಭೇಟಿಗೆ ಅನುಕೂಲವಾಗುವಂತೆ ಸರ್ಕಾರ ಗಮನಹರಿಸಬೇಕಾಗುತ್ತದೆ.

ಸರ್ಕಾರ ವಸ್ತುಸಂಗ್ರಹಾಲಯದಲ್ಲಿ ಕಾಣುವಂತ ಇತರೇ ವಸ್ತುಗಳು ಕುರಿತು ಸಂಕೀರ್ಣವಾದಂತಹ ಹಲವಾರು ವಸ್ತುಗಳನ್ನು ಕೋಣೆಯ ಪಕ್ಕದಲ್ಲಿ ಇರಿಸಲಾಗಿದೆ. ಆದರೆ ಇವುಗಳು ಕೂಡಾ ಒಂದು ಕಡೆ ಸಂರಕ್ಷಣೆಯಾಗಿದ್ದರೂ ಸಹ ಸರಿಯಾದ ವ್ಯವಸ್ಥಿತವಾದ ಪ್ರದರ್ಶನ ಮಾಡಿಲ್ಲವೆಂಬ ನನ್ನ ಭಾವನೆ. ಇನ್ನೂ ಹಲವಾರು ವಸ್ತುಗಳ ಸಂಗ್ರಹವಿದ್ದರೂ, ಅವುಗಳಿಗೆ ಸುವ್ಯವಸ್ಥಿತವಾದ ಪ್ರದರ್ಶನ ನೋಡುಗರನ್ನು ಕಾಡುತ್ತದೆ.

ಕೋಣೆಗಳಲ್ಲಿ ಕಳೆದ ದಶಕಗಳಲ್ಲಿ ಹಿಂದೆ ವಸ್ತು ಸಂಗ್ರಹಾಲಯವನ್ನು ಅಷ್ಟು ಅಚ್ಚುಕಟ್ಟಾಗಿ ಸುವ್ಯವಸ್ಥಿತವಾಗಿ ಕಂಡು ಬಂದಿಲ್ಲ ಆದರೆ ಇಂದು ಅವುಗಳ ಕಡೆಗೆ ಮನ ಸೆಳೆಯುವಂತಾಗಿದೆ. ಈ ವಸ್ತುಸಂಗ್ರಹಾಲಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶಿಲ್ಪಗಳ ಸಂಗ್ರಹಣೆ ಕಂಡುಬರುತ್ತದೆ. ಒಟ್ಟಾರೆಯಾಗಿ ಬೇರೆ ಬೇರೆ ಜಿಲ್ಲೆಯ ವಸ್ತು ಸಂಗ್ರಹಾಲಯಗಳಿಗೆ ಹೋಲಿಸಿದರೆ ರಾಯಚೂರಿನ ವಸ್ತು ಸಂಗ್ರಹಾಲಯದ ಸಧ್ಯದ ಸ್ಥಿತಿಯು ಉತ್ತಮವಾಗಿದ್ದು, ಆದರೆ ಅಲ್ಲಿಯ ನಿರ್ದೇಶಕರು ಛಾಯಾಚಿತ್ರ ಹಾಗೂ ಇನ್ನಿತರ ಪುಸ್ತಕಗಳ ಮಾಹಿತಿಯು ನೀಡಿದ್ದು ಅವರಿಗೆ ನನ್ನ ಧನ್ಯವಾದಗಳು.


































ಅಧ್ಯಾಯ–ಏಳು

ಸಮಾರೋಪ

ಅಧ್ಯಾಯ–ಏಳು

ಸಮಾರೋಪ

ವಸ್ತುಸಂಗ್ರಹಾಲಯಗಳ ಬೆಳವಣಿಗೆಯ ಇತಿಹಾಸವನ್ನು ೨೦೦ ವರ್ಷಗಳಷ್ಟು ಹಿಂದಿನದು ಎಂದು ಗುರುತಿಸಲಾಗಿದೆ. ಸುಮಾರಾಗಿ ೧೨ನೇ ಶತಮಾನದ ಮಧ್ಯಭಾಗಕ್ಕೂ ೧೮ನೇ ಶತಮಾನದ ಆದಿಗೂ ಮಧ್ಯೆ ಜನತಾ ವಸ್ತುಸಂಗ್ರಹಾಲಯ ಹೊಸ ಕಲ್ಪನೆ ಕರ್ನಾಟಕದ ಐತಿಹಾಸಿಕ ಸ್ಥಳವಾದ ರಾಯಚೂರ ದೊಡ್ಡದಾದಂತಹ ಇತಿಹಾಸವನ್ನು ಹೊಂದಿದೆ.

ವಸ್ತು ಸಂಗ್ರಹಾಲಯದ ಹೊಸ ವಿಚಾರಗಳು ಬೆಳಕಿಗೆ ಬರುತ್ತಿದ್ದು ಈಗ ಸಂಶೋಧನೆಯಲ್ಲೂ ತೊಡಗಿರುವರ ಕಾಲದ ನಂತರವು ತನ್ನೊಳಗೆ ಅಡಗಿಕೊಂಡು ಮುಂದಿನ ಪೀಳಿಗೆಯನ್ನು ಆಹ್ವಾನಿಸುವ ಸಲುವಾಗಿ ನಿಂತಿರುತ್ತದೆ. ರಾಯಚೂರಿನ ಚಾರಿತ್ರಿಕ ಕಾಲದಿಂದಲೂ ಜನವಸತಿ ಇದ್ದು ಪ್ರಾಚೀನ ಸಮುದಾಯವಾಗಿ ಬೆಳೆದು ನಿಂತಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನವನ್ನು ಕೈಗೊಂಡಿರುವ ನನ್ನ ಉದ್ದೇಶ, ಅಧ್ಯಯನದ ಸ್ವರೂಪ, ಅಧ್ಯಯನದ ವ್ಯಾಪ್ತಿ ಮತ್ತು ಅಧ್ಯಯನದ ವೈಧಾನಕತೆಯನ್ನು ಇಲ್ಲಿ ಹೇಳಲಾಗಿದೆ.

ಎರಡನೇ ಅಧ್ಯಾಯದಲ್ಲಿ ರಾಯಚೂರಿನ ಐತಿಹಾಸಿಕ, ಸಾಂಸ್ಕೃತಿ, ಧಾರ್ಮಿಕ, ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಇಲ್ಲಿ ವಿವರವಾಗಿ ವಿಂಗಡಿಸಲಾಗಿದೆ. ರಾಯಚೂರು ಎಂಬ ಹೆಸರು ಯಾವ ತರನಾಗಿ ಬಂದಿತು. ಆ ಕೋಟೆಯನ್ನು ಕಟ್ಟಿದವರಾರೂ, ಅದಕ್ಕೆ ಸಹಾಯ ಮಾಡಿದವರಾರು, ರಾಯಚೂರಿನ ಸಂಸ್ಥಾನದ ಮೇಲೆ ಯಾರು ಯಾರು ಯುದ್ಧಕ್ಕೆ ಬಂದಿದ್ದರು ಎಂಬುದನ್ನು ತಿಳಿದು ಬರುತ್ತದೆ. ಇಲ್ಲಿ ಪ್ರಬಲವಾದಂತಹ ದೊರೆಗಳು ಇಲ್ಲಿನ ಆಳ್ವಿಕೆಯನ್ನು ವಿವರವಾಗಿ ವಿವರಿಸಲಾಗಿದೆ. ಅರಸನು ಸಾಧಿಸಿರುವಂತಹ ಸಾಧನೆ ಅಪೂರ್ವವಾದದ್ದು ಎಂದು ಇತಿಹಾಸದ ಮೂಲದಿಂದ ತಿಳಿದು ಬರುತ್ತದೆ.

ಮೂರನೇ ಅಧ್ಯಾಯದಲ್ಲಿ ರಾಯಚೂರಿನ ಪ್ರಾಚ್ಯವಸ್ತು ಸಂಗ್ರಹಾಲಯವು ಸ್ಥಾಪನೆ, ಯಾರಿಂದ ಸ್ಥಾಪನೆಯಾಯಿತು? ಯಾವಾಗ ಸ್ಥಾಪನೆಯಾಯಿತು? ಇಲ್ಲಿ ಸಂಗ್ರಹವಾಗಿರುವಂತಹ ವಸ್ತುಗಳು ಇಲ್ಲಿ ಸಂಗ್ರಹಗೊಂಡಂತಹ ಶಿಲ್ಪಕಲಾಕೃತಿಗಳ ಮುಖ್ಯಾಂಶಗಳನ್ನು ಇಲ್ಲಿ ತಿಳಿಸಲಾಗಿದೆ.

ನಾಲ್ಕನೆ ಅಧ್ಯಾಯದಲ್ಲಿ ರಾಯಚೂರಿನ ವಸ್ತುಸಂಗ್ರಹಾಲಯದ ಶಿಲ್ಪಕಲಾಕೃತಿಗಳ ಬಗ್ಗೆ ವಿವರಿಸಲಾಗಿದೆ. ಇಲ್ಲಿ ಹಲವು ಕಡೆಗಳಿಂದ ಸಂಗ್ರಹಿಸಿರುವಂತಹ ಕಲಾಕೃತಿಗಳ ಬಗ್ಗೆ ವಿವರವಾಗಿ ಅಧ್ಯಯನವು ಕೈಗೊಂಡು ಈ ಶಿಲ್ಪಕೃತಿಗಳು ವೀರಗಲ್ಲು ಇತ್ಯಾದಿ ವಸ್ತು

ವಿಷಯಗಳಿರುವ ಶಿಲ್ಪಕಲಾಕೃತಿಗಳು ವಿಮರ್ಶಿಸಲಾಗಿದೆ ಹಾಗೂ ರಾಯಚೂರಿನ ವಸ್ತುಸಂಗ್ರಹಾಲಯದ ಇತರೆ ಸಂಕೀರ್ಣ ಕಲಾವಸ್ತುಗಳ ಬಗ್ಗೆ ಬರೆಯಲಾಗಿದೆ.

ಇಲ್ಲಿ ಸೈನಿಕರು ಆಗಿನ ಕಾಲದಲ್ಲಿ ಉಪಯೋಗಿಸುತ್ತಿದ್ದಂತಹ ಕತ್ತಿಗಳು, ಗುರಾಣಿಗಳು, ಬೀಗ, ಡೋಲಿ ಆನೆ ಮತ್ತು ಆನೆಗಳ ಪಟ್ಟಿಕೆಗಳು ನಾಗ ಮತ್ತು ನಾಗ ದಂಪತಿಗಳು, ದೇವಿ, ಚಾಮುಂಡಿ, ಗಣೇಶ, ಹೂವಿನ, ಕೃತಿ, ಕಂಬ, ರಾಮಾನುಜಾಚಾರ್ಯ, ತೀರ್ಥಂಕರು ಭೋದಿಗೆ ಇತ್ಯಾದಿಗಳ ಬಗ್ಗೆ ತಿಳಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಗಬ್ಬೂರಿನ ಇತಿಹಾಸ ಮತ್ತು ವೆಂಕಟೇಶ್ವರದೇವಾಲಯದ ಶಿಲ್ಪಕಲಾಕೃತಿಗಳು ಸ್ಥೂಲವಾಗಿ ವಿವರಿಸಲಾಗಿದೆ.

ಅಧ್ಯಯನದ ಫಲಿತಗಳು

- ಒಬ್ಬ ಸಾಮಾನ್ಯ ಮನುಷ್ಯನು ವಸ್ತುಗಳು ಎಂದರೆ ಸಾಮಾನ್ಯ ವಸ್ತುಗಳೇ ಎಂದು ಅರಿತಿದ್ದನು, ಆದರೆ ಚಿತ್ರಕಲಾ ವಿದ್ಯಾರ್ಥಿಗಳು ದೃಶ್ಯಕಲಾತ್ಮಕವಾಗಿ ನೋಡಿದಾಗ ಪ್ರಾಚ್ಯವಸ್ತುಗಳಾಗಿ ಕಂಡುಬರುತ್ತವೆ.
- ರಾಯಚೂರಿನ ಸಾಂಸ್ಕೃತಿಕ, ಐತಿಹಾಸಿಕ, ಧಾರ್ಮಿಕ ಹಿನ್ನೆಲೆಯ ಬಗ್ಗೆ ತಿಳಿಸಲಾಗಿದೆ.
- ರಾಯಚೂರಿನ ಸಂಪೂರ್ಣ ಅಲ್ಲದಿದ್ದರೂ ಅಲ್ಪ ಸ್ವಲ್ಪ ಮಟ್ಟಿಗಾದರೂ ವಸ್ತು ಸಂಗ್ರಹಾಲಯದ ಮತ್ತು ರಾಯಚೂರಿನ ಇತಿಹಾಸದ ಬಗ್ಗೆ ಅರಮನೆಯ ಬಗ್ಗೆ ವೈಭವವನ್ನು ಸಂಗ್ರಹಿಸಲಾಗಿದೆ.
- ರಾಯಚೂರಿನ ವಸ್ತುಸಂಗ್ರಹಾಲಯವನ್ನು ಇನ್ನೂ ಉತ್ತಮ ರೀತಿಯಲ್ಲಿ ಕೊಂಡೊಯ್ಯಲು ದೃಶ್ಯಕಲಾ ಸಂಶೋಧನೆಗೆ ಸರ್ಕಾರದ ಎಲ್ಲಾ ರೀತಿಯ ಸಹಕಾರ ನೀಡಬೇಕೆಂದು ಹಾಗೂ ಪ್ರಾಚ್ಯವಸ್ತುಗಳ ಹಾಗೂ ವರ್ಣಚಿತ್ರಗಳ ಛಾಯಾಚಿತ್ರವಿರುವ ಪುಸ್ತಕ ಹೊರತರುವ ಪ್ರಯತ್ನವನ್ನು ಸರ್ಕಾರ ಮಾಡಬೇಕಿದೆ.
- ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಅನೇಕ ಕಡೆಗಳಿಂದ ಸಂಗ್ರಹಿಸಿದಂತಹ ಶಿಲ್ಪಕಲಾಕೃತಿಗಳನ್ನು ನೋಡಬಹುದು.
- ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ವರ್ಣಚಿತ್ರಗಳು, ರೇಖಾಚಿತ್ರಗಳನ್ನು ನೋಡಬಹುದು.
- ರಾಯಚೂರಿನ ವಸ್ತುಸಂಗ್ರಹಾಲಯದಲ್ಲಿ ಸಂಕೀರ್ಣ ವಸ್ತುಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿದೆ. ರಾಯಚೂರಿನ ವಸ್ತುಸಂಗ್ರಹಾಲಯದ ಸ್ಥಿತಿಗತಿಯ ಬಗ್ಗೆ ತಿಳಿಸಲಾಗಿದೆ.

ಅನುಬಂಧಗಳು

- ಸಂಕ್ಷೇಪಗಳು
- ಗ್ರಂಥಋಣ
- ರಾಯಚೂರು ಜಿಲ್ಲೆಯ ವಸ್ತುಸಂಗ್ರಹಾಲಯಗಳ ಪಟ್ಟಿ
- ನಕ್ಷೆಗಳು

ಅನುಬಂಧಗಳು–೧

ಸಂಕ್ಷೇಪಗಳು

೧. ಸಂ	–	ಸಂಪಾದಕರು
೨. ಪ್ರ.ಸಂ	–	ಪ್ರಧಾನ ಸಂಪಾದಕರು
೩. ಪು.ಸಂ.	–	ಪುಟ ಸಂಖ್ಯೆ
೪. ಕಿ.ಪ್ರ.	–	ಕಿರುಪ್ರಬಂಧ
೫. ಸಂ.ಪ್ರ.	–	ಸಂಪ್ರಬಂಧ
೬. ಮ.ಪ್ರ	–	ಮಹಾಪ್ರಬಂಧ
೭. ಚಿ.ಸಂ.	–	ಚಿತ್ರಸಂಖ್ಯೆ
೮. ಬೆಂ.ವಿ.ವಿ.	–	ಬೆಂಗಳೂರು ವಿಶ್ವವಿದ್ಯಾಲಯ
೯. ಮ.ವಿ.ವಿ	–	ಮಂಗಳೂರು ವಿಶ್ವವಿದ್ಯಾಲಯ
೧೦. ಮೈ.ವಿ.ವಿ	–	ಮೈಸೂರು ವಿಶ್ವವಿದ್ಯಾಲಯ
೧೧. ಕ.ವಿ.ವಿ.ಹಂ.	–	ಕನ್ನಡ ವಿಶ್ವವಿದ್ಯಾಲಯ, ಹಂಪಿ
೧೨. ಕ.ವಿ.ವಿ.	–	ಕರ್ನಾಟಕ ವಿಶ್ವವಿದ್ಯಾಲಯ
೧೩. ಗು.ವಿ.ವಿ.	–	ಗುಲ್ಬರ್ಗಾ ವಿಶ್ವವಿದ್ಯಾಲಯ
೧೪. ಕ.ಲ.ಅ.ಬೆಂ	–	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
೧೫. ಅ.ಪ್ರ	–	ಅಪ್ರಕಟಿತ
೧೬. ಪ್ರ	–	ಪ್ರಕಟಿತ
೧೭. ಯೋ.ವ	–	ಯೋಜನಾ ವರದಿ
೧೮. ಕ.ಸಾ.ಪ	–	ಕನ್ನಡ ಸಾಹಿತ್ಯ ಪರಿಷತ್
೧೯. ಕ್ರಿ.ಪೂ	–	ಕ್ರಿಸ್ತ ಪೂರ್ವ
೨೦. ಕ್ರಿ.ಶ.	–	ಕ್ರಿಸ್ತಶಕ
೨೧. ಅನು	–	ಅನುವಾದ
೨೨. ಪ್ರೊ	–	ಪ್ರೊಫೆಸರ್

ಅನುಬಂಧ–೨

ಗ್ರಂಥಋಣ

೧. ಕನ್ನಡ ಗ್ರಂಥಗಳು

೧. **ಕನ್ನಡ ಸಾಹಿತ್ಯ ಚರಿತೆ (ಸಂಪುಟ–೪)** (ಸಂ.) ಹಾ.ಮಾ. ನಾಯಕ
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು
ವಿಶ್ವವಿದ್ಯಾಲಯ, ಮೈಸೂರು.
೧೯೭೬–೭೭

೨. **ಕನ್ನಡ ಹಸ್ತಪ್ರತಿಗಳು – ಒಂದು ಅಧ್ಯಯನ** ಡಾ. ಬಿ. ಕೆ.
ಹಿರೇಮಠ
ವೀರಶೈವ ಅಧ್ಯಯನ ವೇದಿಕೆ, ಬಿಜಾಪುರ
೧೯೯೨

೩. **ಕರ್ನಾಟಕದ ಜನಪದ ಚಿತ್ರಕಲೆ** ಡಾ. ಎಸ್. ಸಿ.
ಪಾಟೀಲ
ವೀರಶೈವ ಅಧ್ಯಯನ ಸಂಸ್ಥೆ, ಗದಗ
೧೯೯೩

೪. **ಕರ್ನಾಟಕದ ವಾಸ್ತು ಶಿಲ್ಪ ಮತ್ತು ಚಿತ್ರಕಲೆ** ಡಾ. ಸಿಂದಗಿ
ರಾಜಶೇಖರ
ಸುಜಾತ ಪಬ್ಲಿಕೇಷನ್ಸ, ಧಾರವಾಡ
೧೯೯೮

೫. **ಕರ್ನಾಟಕ ವೀರಗಲ್ಲುಗಳು** ಡಾ. ಆರ್. ಶೇಷಶಾಸ್ತ್ರಿ
ಪ್ರೋ. ಡಿ. ಕೆ. ಶಾಮಸುಂದರರಾವ

ಕಾಮಧೇನು ಪುಸ್ತಕ ಭವನ
ಶೇಷಾದ್ರಿಪುರಂ, ಬೆಂಗಳೂರು
೨೦೧೭

೬. **ಕರ್ನಾಟಕದ ಸಂಸ್ಕೃತಿ ಸಮೀಕ್ಷೆ** — **ಡಾ ಎಚ್. ತೀಪ್ಪೇರುದ್ರಸ್ವಾಮಿ**
ಡಿ. ವಿ. ಕೆ ಮೂರ್ತಿ ಪ್ರಕಾಶಕರು,
ಮೈಸೂರು. ೨೦೦೧

೭. **ಕರ್ನಾಟಕದಲ್ಲಿ ಅರಸು ಮನೆತನಗಳು ಸಂ–೧** — **ಎಸ್. ಆರ್. ಪಂಚಮುಖಿ**
ಲಕ್ಷೀನಾರಾಯಣರಾವ್
ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ
ಧಾರವಾಡ. ೧೯೪೬

೮. **ಕರ್ನಾಟಕದಲ್ಲಿ ಚಿತ್ರಕಲೆ** — **ಶಿವರಾಮ ಕಾರಂತ**
ಪ್ರಸಾರಂಗ ಮೈಸೂರು ವಿ.ವಿ.
ಮೈಸೂರು. ೧೯೭೮

೯. **ಕರಕುಶಲ ಕಲೆಗಳು** — **(ಸಂ) ಡಾ.ಕರಿಗೌಡ ಬೀಚನಹಳ್ಳಿ**
ಕನ್ನಡ ವಿಶ್ವವಿದ್ಯಾಲಯ, ಹಂಪಿ
೨೦೦೦

೧೦. **ಚಾಲುಕ್ಯ ಶಿಲ್ಪ** — **ಡಾ. ಶಿವರಾಮ ಕಾರಂತ**
ಮಂಗಳೂರು
೧೯೫೨

೧೧. **ಚಿತ್ರಕಲಾ ಪ್ರಪಂಚ** — **(ಸಂ) ಪಿ. ಆರ್. ತಿಪ್ಪೇಸ್ವಾಮಿ**
ಕರ್ನಾಟಕ ಲಲಿತಕಲಾ ಅಕಾಡೆಮಿ

ಬೆಂಗಳೂರು. ೧೯೯೩

೧೨. ದೃಶ್ಯಕಲಾ ಎನ್. ಮರಿಶಾಮಚಾರ್

ಸಿ.ಎಂ.ಎನ್. ಪ್ರಕಾಶನ,

ಬೆಂಗಳೂರು. ೧೯೮೫

೧೩. ದೃಶ್ಯಕಲಾ ಸಂವೇದನೆ ಪ್ರೊ.ಎಸ್.ಸಿ ಪಾಟೀಲ

ರಾಷ್ಟ್ರೀಯ ದೃಶ್ಯಕಲಾ ಅಕಾಡೆಮಿ,

ಧಾರವಾಡ. ೨೦೧೬

೧೪. ಧರ್ಮ (ವಿಶ್ವಕೋಶ) (ಸಂ) ರಹಮತ್ ತರೀಕೆರೆ

ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ,

ಹಂಪಿ. ೨೦೦೦

೧೫. ಧರ್ಮ ಮತ್ತು ಸಮಾಜ ಡಾ. ಜಿ.ಎಸ್.

ಶಿವರುದ್ರಪ್ಪ

ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ-೨

ಬೆಂಗಳೂರು. ೧೯೭೪-೭೫

೧೬. ನಿಜದ ನೆಲೆ (ಸಂ) ಡಾ.ಎಸ್.ಸಿ.

ಪಾಟೀಲ

ಡಾ.ಬಿ.ಕೆ. ಹಿರೇಮಠ ಅಭಿನಂದನಾ ಗ್ರಂಥ ಸತ್ಯಾನಂದ ಪಾತ್ರೋಟ

ಬಸವೇಶ್ವರ ವಿದ್ಯಾವರ್ಧಕ ಸಂಘ,

ಬಾಗಲಕೋಟೆ. ೨೦೦೩

೧೭. ಪ್ರಾಚೀನ ಲೇಖನ ಸಾಮಗ್ರಿಗಳು (ಮೂಲ) ಡಾ.

ಅಲ್ಬರ್ಟನಗೌರ

ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, (ಅನು) ಡಾ. ಶ್ರೀನಿವಾಸ

ಹಾವನೂರು
ಹಂಪಿ. ೨೦೦೦ ಡಾ.ಲಕ್ಷೀನಾರಾಯಣ
ಅರೋರ

೧೮. ಪ್ರಾಚ್ಯವಸ್ತು ಸಂಶೋಧನೆ ಡಾ. ಅ. ಸುಂದರ
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ. ೧೯೮೮

೧೯. ಮೂರ್ತಿಶಿಲ್ಪ-ನೆಲೆ ಹಿನ್ನೆಲೆ
ಪ್ರೋ.ಎಸ್.ಕೆ.ರಾಮಚಂದ್ರರಾವ್
ಬೆಂಗಳೂರು. ೧೯೭೫

೨೦. ಲಿಂಗಾಯತ ಧರ್ಮ-ಒಂದು ಅಧ್ಯಯನ ಹಿರೇಮಲ್ಲೂರು
ಈಶ್ವರನ್
ಭಾಗ-೧ ಮತ್ತು ೨
ಪ್ರಿಯದರ್ಶಿನಿ ಪ್ರಕಾಶನ,
ಬೆಂಗಳೂರು ೧೯೯೭

೨೧. ವಿಜಯನಗರದ ಗಾರೆಶಿಲ್ಪ ಡಾ. ಸಿ. ಮಹಾದೇವ
ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೦

೨೨. ವೀರಶೈವ ಪುರಾಣಗಳು-ಒಂದು ಅಧ್ಯಯನ
ಡಾ.ಎಸ್.ವಿದ್ಯಾಶಂಕರ್
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
೧೯೮೨

೨೩. ಶಿವತತ್ವ ಚಿಂತಾಮಣಿ ಲಕ್ಕಣ ದಂಡೇಶ

ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ,

ಲಾಸ್ಯ ರಂಜನ ಮೈಸೂರು.

೨೪. **ಶಿಲ್ಪಕಲಾ ಪ್ರಪಂಚ** **(ಸಂ) ಪಿ.ಆರ್.**

ತಿಪ್ಪೇಸ್ವಾಮಿ ಕರ್ನಾಟಕ ಲಲಿತಕಲಾ ಅಕಾಡೆಮಿ,

ಬೆಂಗಳೂರು. ೧೯೯೪

೨೫. **ಸಂಶೋಧನಾ ಚತುರ್ಮುಖ** **ಡಾ.ಬಿ.ವಿ. ಶಿರೂರು**

ವಿದ್ಯಾನಿಧಿ ಪ್ರಕಾಶನ, ಹುಬ್ಬಳ್ಳಿ

೨೦೦೬

೨೬. **ಸಂಶೋಧನಾ ಸ್ವರೂಪ (೫ನೇ ಮುದ್ರಣ)** **ಡಾ. ಶಿರೂರ**

ಬಿ.ವಿ.

ಅನ್ನಪೂರ್ಣ ಪ್ರಕಾಶನ, ಹುಬ್ಬಳ್ಳಿ,

೨೦೧೨

೨೭. **ಸೃಷ್ಟಿ (ಲೇಖನ ಸಂಕಲನ)** **ಡಾ. ಬಿ.ಕೆ. ಹಿರೇಮಠ**

ಬಾಪೂಜಿ ಗ್ರಾಮೀಣ ಅಭಿವೃದ್ದಿ ಸಂಸ್ಥೆ (ರಿ)

ಬಾಗಲಕೋಟೆ. ೨೦೦೩

೨೮. **ಸೌಂದರ್ಯಶಾಸ್ತ್ರ** **ಅನು. ಡಾ.**

ಕಾಶೀನಾಥ ಅಂಬಲಿಗೆ

ಕರ್ನಾಟಕ ಲಲಿತಕಲಾ ಅಕಾಡೆಮಿ,

ಬೆಂಗಳೂರು.

೨೯. **ಶಿಲಗಳಲ್ಲಡಗಿದ ಸತ್ಯೆ** **ಸದ್ಯುಜಾತ ಭಟ್ಟ**

೨೦೧೮

೩೦. **ಹೈದ್ರಾಬಾದ್ ಕರ್ನಾಟಕ ಸಾಂಸ್ಕೃತಿಕ** **(ಸಂ.) ಡಾ.**

ಪಿ.ಕೆ. ಖಂಡೋಬಾ

ವಿಶ್ವಕೋಶ– ಲಲಿತಕಲೆಗಳ ಸಂಪುಟ **ಡಾ.ಎಸ್.ಪಿ.**

ಪಾಟೀಲ

ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ,

ಗುಲಬರ್ಗಾ. ೨೦೧೨

೩೧. **ಹೊಯ್ಸಳ ವಾಸ್ತುಶಿಲ್ಪ** **ಶ್ರೀಕಂಠಶಾಸ್ತ್ರೀ**

ಎಸ್.

ಮೈಸೂರು.

೧೯೬೫

೩೨. **ಜ್ಞಾನಗಂಗೋತ್ರಿ (ಕಲೆ, ಸಾಹಿತ್ಯ) ಕಿರಿಯರ** **ಸಂ.**

ನಿರಂಜನ ಕೆ.

ವಿಶ್ವಕೋಶ–೫

ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ,

ಬೆಂಗಳೂರು.

೩೩. **ರಾಯಚೂರ ಕೋಟೆ** **ರಡೆಪ್ಪಹಳ್ಳಿ**

೨೦೧೭

೦೨. ಇಂಗ್ಲೀಷ್ ಗ್ರಂಥಗಳು

01.Art Line of Karnataka Sculpture ***Arokia Swamy***

M

730-954

02. A History of Karnataka ***Desai P.B.***

Kannada Research Institute,

Karnataka University, Dharwad

1970

03. Art and Architecture of Indian ***Prof. S K.***

Ramchandra

Temples Vol-2 ***Rao***

Kalpatharu Research Academy,

Bangalore.

1993

04. Mohenjadaro and Indus Civilisation ***Marshall Sir***

John

London,

1931

05. Sculptural Art of the Kalyan Chalukyas ***Dr. S.***

Nagaraju

-an analysis and Appraisal, Tha Chalukyas

Of Kalyana.

Bangalore. 1983

06. A Guide to Halebid

Narasimhachar L.

Mysore.

1951

07. The Kesava Temple at Somanathapur

Narasimhachar R.

Mysore Archaeological Series,

Architecture and Sculpture,

Bangalore. 1917

08. History of Western Gangas — ***Sheik Ali B.***
Mysore.
1976

09. Early Temple Architecture in — ***Soundara***
Rajan K.V
Karnataka and its Ramification,
Kannada Research Institute,
Karnataka University, Dharwad
1969

10. Indus Civilization 3rd Edition — ***Wheeler***
R.E.M
Cambridge,
1968


11. Myths and Symbols in Indian
Art and Civilization
New York, 1947

12. Sculptures in the — ***K.G Bhatsoori***
Government Museum
Raichur
1997


RAICHUR
www.veethi.com


Devadurga
Raichur
Lingsugur
RAICHUR
Manvi
Sindhnur

ದೇವದುರ್ಗ ತಾಲೂಕು


ಶಹಾಪುರ ತಾಲೂಕು
ಸುರಪುರ ತಾಲೂಕು
ಗೂಗಲ್ಲು
ನಿಲವಂಜಿ
ಹಿರೇರಾಯಕುಂಪಿ
ಬಾಗೂರು
ದೇವದುರ್ಗ
ಚಿಂಚೋಡಿ
ಚಂದನಕೇರಿ
ಗಬ್ಬೂರು
ಮುಂಡರಗಿ
ರಾಮದುರ್ಗಾ
ಗಲಗ್
ಕ್ಯಾದಿಗೇರಾ
ಲಿಂಗಸೂಗೂರು ತಾಲೂಕು
ರಾಯಚೂರು ತಾಲೂಕು
ಮಾನ್ವಿ ತಾಲೂಕು

